ಸಾರಾ ಅಬೂಬಕ್ಕರ್ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ನಿಬಂಧ)

ಸಂಶೋಧಕರು
ಕವಿತಾ.ಬಿ.

ಮಾರ್ಗದರ್ಶಕರು
ಡಾ. ಶುಚೇತಾ ನವರತ್ನ
ಅಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೮

ಸಾರಾ ಅಬೂಬಕ್ಕರ್ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ನಿಬಂಧ)

ಸಂಶೋಧಕರು

ಕವಿತಾ.ಬಿ.

ಮಾರ್ಗದರ್ಶಕರು

ಡಾ.ಸುಚೇತಾ ನವರತ್ನ

ಅಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೮

ಪ್ರಮಾಣ ಪತ್ರ

ಸಾರಾ ಅಬೂಬಕ್ಕರ್ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ ಎಂಬ ನಿಬಂಧವನ್ನು **ಡಾ.ಸುಚೇತಾ** ನವರತ್ನ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಕವಿತಾ.ಬಿ.

ದಿನಾಂಕ : 15.10.08

ಸ್ಥಳ : ವಿದ್ಯಾರಣ್ಯ

ಕವಿತಾ.ಬಿ.
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಸಾರಾ ಅಬೂಬಕ್ಕರ್ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಕವಿತಾ. ಬಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15/10/08

ಸ್ಥಳ : ವಿದ್ಯಾರಣ್ಯ

S.N. Navaratna

ಡಾ.ಸುಚೇತಾ ನವರತ್ನ

ಮಾರ್ಗದರ್ಶಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಆಧುನಿಕ ಕನ್ನಡ ಮುಸ್ಲಿಂ ಸಂವೇದನೆಯ ಬರಹಗಾರರಲ್ಲಿ 'ದಾನ ಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿಯನ್ನು ಪಡೆದ ಸಾರಾ ಅಬೂಬಕ್ಕರ ಅವರದು ಪ್ರಮುಖ ಹೆಸರು. ಕಾಸರಗೋಡು ಪರಿಸರದ ಸಂಪ್ರದಾಯಸ್ಥ ಮುಸ್ಲಿಂ ಸಮುದಾಯದ ಹೆಣ್ಣು ಮಗಳಾಗಿ, ಅದೇ ಸಮುದಾಯದ ವಿಶಿಷ್ಟ ಸಂವೇದನೆಯನ್ನು ತಮ್ಮ ಕಥನ ಸಾಹಿತ್ಯದ ಮೂಲಕ ಕನ್ನಡ ಓದುಗರಿಗೇ ಪರಿಚಯಿಸಿದ ಅಪರೂಪದ ಲೇಖಕಿ. ಮುಸ್ಲಿಂ ಸಂವೇದನೆ ಹಿನ್ನೆಲೆಯಲ್ಲಿ ಸಾರಾ ಅವರ ಕೃತಿಗಳ ಅಧ್ಯಯನ ಈಗಾಗಲೇ ನಡೆದಿದ್ದರೂ ಅವರು ಕೃತಿಗಳು ಕಟ್ಟಿಕೊಡುವ ಸಾಮಾಜಿಕ ವಿನ್ಯಾಸಗಳನ್ನು ಈ ಅಧ್ಯಯನಗಳು ಅಷ್ಟಾಗಿ ಗುರುತಿಸಿದಂತಿಲ್ಲ. ವಸ್ತು ಪ್ರತಿಪಾದನೆಯಲ್ಲಿ ಸಾರಾ ಅವರ ಕಥನ ಶೈಲಿ ವಿಶಿಷ್ಟವಾದ ವಿನ್ಯಾಸವನ್ನು ಹೊಂದಿದೆ.

ಸಾಹಿತ್ಯ ಪ್ರಪಂಚದಲ್ಲಿ ಕಥನ ಸಾಹಿತ್ಯ ಅದರದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಇದು ಜನಪ್ರಿಯ ಮಾಧ್ಯಮವಾಗಿರುವಂತೆ ಜವಾಬ್ದಾರಿಯುತ ಹೊಣೆಗಾರಿಕೆಯಿಂದ ಬರಹವಾಗಿಸುವ ಕಲೆಯೂ ಹೌದು. ಇಂತಹ ಒಂದು ಸಾಹಿತ್ಯ ಪ್ರಕಾರದ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಾರಾ ಅವರು ಬಹು ವಿಶಿಷ್ಟರಾಗುತ್ತಾರೆ. ಸಾರಾ ಅವರು ತಮ್ಮದೇ ಸಮುದಾಯದ (ಮುಸ್ಲಿಂ) ಸಂವೇದನೆಗೆ ಪ್ರಥಮವಾಗಿ ಸ್ಪಂದಿಸಿರುತ್ತಾರೆ. ಅತ್ಯಂತ ಪ್ರಭಾವಶಾಲಿ ಬರವಣಿಗೆಯ ಮೂಲಕ ಮತ್ತು ಭಾಷೆಯ ಬಳಕೆಯ ಮೂಲಕ ಸಾರಾ ಅವರ ಕಥನ ಕ್ರಮವೊಂದನ್ನು ಹುಟ್ಟು ಹಾಕಿದ್ದಾರೆ. ಇಂತಹ ವಿಭಿನ್ನ ನೆಲೆಗಳಿಂದ ಕೂಡಿದ ಸಂಸ್ಕೃತಿ, ಭಾಷೆ, ಸಾಹಿತ್ಯಗಳೆಲ್ಲದರ ಪರಿಪೂರ್ಣ ಅಧ್ಯಯನ ನಡೆಸಬೇಕಾದ ಅವಶ್ಯಕತೆ ಇದೆ.

ಕಾದಂಬರಿ ಕ್ಷೇತ್ರಕ್ಕೆ ಸಾರಾ ಅವರ ಕೊಡುಗೆಯನ್ನು ಅರ್ಥೈಸಿಕೊಳ್ಳುತ್ತಲೇ ಸಮಾಜ-ಸಂಸ್ಕೃತಿ ರೂಪಿಸುವಿಕೆಯಲ್ಲಿನ ಇವರ ಪಾತ್ರವನ್ನು ವಿಶ್ಲೇಷಿಸುವುದು ಅಧ್ಯಯನದ ಪ್ರಮುಖ ಅಂಶವಾಗಿದೆ. ಪುರುಷರು ಮಹಿಳೆಯರ ಮೇಲೆ ದಬ್ಬಾಳಿಕೆ ಮಾಡುವುದನ್ನು ತಮ್ಮ ಕಥನ ಸಾಹಿತ್ಯದ ಮೂಲಕ ಚಿತ್ರಿಸಿರುವ ರೀತಿ ಮತ್ತು ಗಂಡು-ಹೆಣ್ಣಿನಲ್ಲಿ ಸಮಾನತೆ ಕಾಯ್ದುಕೊಳ್ಳಲು ಕೆಲವು ಸಲಹೆಗಳು ಹೇಗೆ ಪ್ರತಿಬಿಂಬಿತವಾಗಿದೆ ಎಂಬುದನ್ನು ತಿಳಿಯುವ ಉದ್ದೇಶವೂ ಈ ಪ್ರಸ್ತುತ ಅಧ್ಯಯನಕ್ಕಿದೆ. ಲೇಖಕಿಯ ಅನುಭವದ ವಿಚಾರಧಾರೆಗಳನ್ನು ಗುರುತಿಸುವ ಹಾಗೂ ಕಾದಂಬರಿಯಲ್ಲಿ ಮುಸ್ಲಿಂ ಸಂವೇದನೆಯನ್ನು ಮತ್ತು ಸ್ತ್ರೀಸಂವೇದನೆಯನ್ನು ಹೇಗೆ ಮೇಳೈಸಿದ್ದಾರೆ ಎಂಬುದನ್ನು ಗುರುತಿಸುವ ಉದ್ದೇಶವನ್ನು ಇಲ್ಲಿ

ಹೊಂದಲಾಗಿದೆ. ಜೊತೆಗೆ ಅನಿಷ್ಟ ಪದ್ಧತಿಗಳು ಹೆಣ್ಣು ಮಕ್ಕಳ ಮೇಲೆ ಹೇಗೆ ಪ್ರಭಾವ ಬೀರಿವೆ ಎಂಬುದನ್ನು ಶಿಕ್ಷಣ ಮತ್ತು ಸಮಾನತೆಯಿಂದ ಅವರು ಹೇಗೆ ವಂಚಿತರಾಗಿದ್ದಾರೆ ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ. ಸಾರಾ ಅವರ ಕತೆ-ಕಾದಂಬರಿಗಳಲ್ಲಿ ಕಂಡು ಬರುವ ಪಾತ್ರ ಸೃಷ್ಟಿಯನ್ನು ಸಾಮಾಜಿಕ ವಿನ್ಯಾಸ, ಸಹ ಸಂಬಂಧಗಳು ಹಾಗೂ ಮಹಿಳಾ ಪ್ರಶ್ನೆಯ ಮೂಲಕ ವಿಶ್ಲೇಷಿಸಲಾಗಿದೆ.

ವ್ಯಾಪ್ತಿ

ಪ್ರಸುತ್ತ ಅಧ್ಯಯನವು ಸಾರಾ ಅಬೂಬಕ್ಕರ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸಗಳನ್ನು ಚರ್ಚಿಸುತ್ತದೆ. ಮುಸ್ಲಿಂ ಸಂವೇದನೆ ಮತ್ತು ಮಹಿಳೆ ಜೊತೆಗೆ ಕರಾವಳಿ ಪರಿಸರದ ಸಮಾಜ ಸಂಸ್ಕೃತಿಯನ್ನು ಇಲ್ಲಿ ಪ್ರಮುಖ ಆದ್ಯತೆಯಾಗಿಸಿ ಚರ್ಚಿಸಲಾಗಿದೆ.

ಅಧ್ಯಯನದ ಸಮೀಕ್ಷೆ

ಸಾರಾ ಅಬೂಬಕ್ಕರ ಕೃತಿಗಳ ಬಗ್ಗೆ ಇಲ್ಲಿಯವರೆಗೆ ಅನೇಕ ಅಧ್ಯಯನಗಳು ನಡೆದಿವೆ. ಸಾರಾ ಅಬೂಬಕ್ಕರ ಕಥನ ಸಾಹಿತ್ಯ ಎಂಬ ಶೀರ್ಷಿಕೆಯ ಮೇಲೆ ಸವಿತ ಕೊಟಬಾಗಿ ಎಂಬುವವರು ತಮ್ಮ ಮಹಾಪ್ರಬಂಧದಲ್ಲಿ ಸಾರಾ ಅವರ ಎಲ್ಲಾ ಕೃತಿಗಳ ಮೇಲೆ ಅಧ್ಯಯನವನ್ನು ಮಾಡಿದ್ದಾರೆ.

ಬಿ.ಆರ್.ಜಯಕುಮಾರಿಯವರು "ಸಾರಾ ಅಬೂಬಕ್ಕರ್ ಅವರ ಕಥಾ ಸಾಹಿತ್ಯದಲ್ಲಿ ಮಹಿಳೆ" ಎಂಬ ತಮ್ಮ ನಿಬಂಧದಲ್ಲಿ ಸಾರಾ ಅವರ ಕೃತಿಗಳಲ್ಲಿ ಮಹಿಳೆಯನ್ನು ಪ್ರಧಾನವಾಗಿಸಿ ಅಧ್ಯಯನ ಮಾಡಿದ್ದಾರೆ. ಇಷ್ಟೇ ಅಲ್ಲದೇ ಇನ್ನೂ ಅನೇಕ ಅಧ್ಯಯನಗಳು ಅವರ ಕೃತಿ ಮೇಲೆ ನಡೆದಿವೆ. ಇವುಗಳಿಗಿಂತ ಭಿನ್ನವಾಗಿ "ಸಾರಾ ಅಬೂಬಕ್ಕರ್ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ" ಎಂಬ ಶೀರ್ಷಿಕೆಯಡಿಯಲ್ಲಿ ಸಾರಾ ಅವರ ಒಟ್ಟು ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಮುಸ್ಲಿಂ ಸಂವೇದನೆಯನ್ನೊಳಗೊಂಡಂತೆ ಸಮಾಜ ಮತತು ಸಂಸ್ಕೃತಿಯನ್ನು ಕರಾವಳಿ ಪರಿಸರದ ಹಿನ್ನೆಲೆಯಲ್ಲಿ ತಲಸ್ಪರ್ಶಿಯಾಗಿ ಅಧ್ಯಯನ ಮಾಡಲಾಗಿದೆ.

ಸ್ವರೂಪ

ಸಾರಾ ಅವರ ಪರಿಚಯದಲ್ಲಿ ಅವರ ಕುರಿತು ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ. ಹಾಗೆ ಅವರ ಕೃತಿಗಳ ಸಮೀಕ್ಷೆಯನ್ನು ಮಾಡಲಾಗಿದೆ.

ಸಾರಾ ಅವರ ಕಥನ ಸಾಹಿತ್ಯದಲ್ಲಿ ಮುಸ್ಲಿಂ ಸಮಾಜ, ಆ ಸಮಾಜದಲ್ಲಿ ನಡೆಯುವ ಆಚರಣೆ-ಸಂಪ್ರದಾಯ ನಂಬಿಕೆ, ವಿವಾಹ ಪದ್ಧತಿ, ಮುಸ್ಲಿಂ ಸಮುದಾಯದಲ್ಲಿ ಬರುವ ಅನಿಷ್ಟ ಪದ್ಧತಿಗಳು ಮತ್ತು ಇಸ್ಲಾಂ ಧರ್ಮದಲ್ಲಿನ ಪುರುಷ ಪ್ರಧಾನ ನಿಲುವು. ಹಾಗೇ ಮುಸ್ಲಿಂ ಸಮುದಾಯದ ಪುರುಷರು ತಲಾಖ್, ಬಹುಪತ್ನಿತ್ವ ಪದ್ಧತಿಗಳನ್ನು ತಮ್ಮ ಸ್ವಾರ್ಥಕ್ಕೆ ಹೇಗೆ ಬಳಸಿಕೊಂಡಿದ್ದಾರೆ ಎಂಬುದನ್ನು ನೋಡಲಾಗಿದೆ.

ಸಾರಾ ಅವರು ತಮ್ಮ ಕತೆ-ಕಾದಂಬರಿಗಳ ಮೂಲಕ ಮಹಿಳೆಯರಿಗೆ ನ್ಯಾಯ ಒದಗಿಸುವ ಬಗೆ ಪುರುಷರು ಮಾಡಿದ ಅನ್ಯಾಯದ ವಿರುದ್ಧ ಬೇಸತ್ತು ಧರ್ಮ ಗ್ರಂಥವನ್ನು ಮತ್ತು ಧರ್ಮವನ್ನು ಪ್ರಶ್ನೆ

ಮಾಡಿ ನಂತರ ಅವರು ಪಾತ್ರಗಳ ಮುಖೇನ ಕಂಡುಕೊಳ್ಳುವ ಉತ್ತರ ಯಾವುದು? ಎಂಬೆಲ್ಲ ವಿಚಾರಗಳನ್ನು ಅಧ್ಯಯನ ಮಾಡಲಾಗಿದೆ. ಹೆಣ್ಣು ಮಕ್ಕಳನ್ನು ಭೋಗದ ವಸ್ತುಗಳನ್ನಾಗಿ, ದುಡಿಯುವ ಯಂತ್ರಗಳನ್ನಾಗಿ ಮಾಡಿಕೊಂಡು ಪುರುಷರ ನೀತಿಯನ್ನು ಚರ್ಚೆಗೊಳಪಡಿಸುವ ಮೂಲಕ ಅನೇಕ ಸ್ತ್ರೀಸಂಬಂಧಿಸಿದ ಪ್ರಶ್ನೆಗಳನ್ನು ಚರ್ಚಿಸಲಾಗಿದೆ.

ಸಾರಾ ಅವರ ಕಥನ ಸಾಹಿತ್ಯದಲ್ಲಿ ಹಿಂದೂ-ಮುಸ್ಲಿಂ ಸಾಮಾಜಿಕ ಸಂಬಂಧವನ್ನು ವಿವೇಚಿಸಲಾಗಿದೆ. ಧರ್ಮದ ಕೆಲವು ಮುಖಂಡರು ರಾಜಕೀಯವಾಗಿ ಮತ್ತು ಕೆಲವು ಪುರುಷರು ತಮ್ಮ ಸ್ವಾರ್ಥಕ್ಕಾಗಿ ಹಿಂದೂ-ಮುಸ್ಲಿಂ ಸ್ನೇಹ ಸಂಬಂಧವನ್ನು ಮಾನವೀಯ ಗುಣಗಳನ್ನು ಹೇಗೆ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಕೋಮುಗಲಭೆಯ ಸಾಧ್ಯತೆಯ ನೆಪವೊಡ್ಡಿ ನಿರಾಶ್ರಿತ ಹೆಣ್ಣು ಮಗಳನ್ನು ಮನೆಯಿಂದ ಹೊರಹಾಕುವಂತೆ ಮಾಡುವುದನ್ನು ಸಾರಾ ಅವರು ತಮ್ಮ ಕಥನ ಸಾಹಿತ್ಯದಲ್ಲಿ ಕಟ್ಟಿಕೊಟ್ಟಿರುವುದನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಸಾರಾ ಅವರ ಕಥನ ಸಾಹಿತ್ಯದ ಮೂಲ ದ್ರವ್ಯ ಮಹಿಳೆ. ಅವರು ತಮ್ಮ ಕಥನ ಸಾಹಿತ್ಯದಲ್ಲಿ ಸಮಾಜ ಮತ್ತು ಸಂಸ್ಕೃತಿಯಲ್ಲಿ ಹೆಣೆದಿರುವ ಹಲವಾರು ವಿನ್ಯಾಸಗಳನ್ನು ಸಾಮಾಜಿಕ ವಿನ್ಯಾಸಗಳಾಗಿ ಗ್ರಹಿಸಲಾಗಿದೆ. ಹೀಗೆ ಅವರ ಕಥನ ಸಾಹಿತ್ಯದ ಮೂಲಕ ಹೆಣ್ಣು ಮಕ್ಕಳನ್ನು ಯಾವ ಯಾವ ರೀತಿಯ ವಿಭಿನ್ನ ನೆಲೆಯಲ್ಲಿ ನಿಂತು ನೋಡುತ್ತಾರೆ ಎಂಬುದನ್ನು ಒಬ್ಬ ಶ್ರೀಮಂತ ಮಹಿಳೆಗೂ ಒಬ್ಬ ಬಡ ಮಹಿಳೆಗೂ ಸ್ವಾತಂತ್ರ್ಯದಲ್ಲಿ ಯಾವ ರೀತಿಯ ವ್ಯತ್ಯಾಸಗಳು ಇರುವುದಿಲ್ಲ. ಹಾಗೇ ಆ ಸಮಾಜ ಆಚಾರ-ವಿಚಾರ, ರೀತಿ-ರಿವಾಜುಗಳು, ಶಿಕ್ಷಣ, ರಾಜಕೀಯ, ಸಾಮಾಜಿಕ, ಆರ್ಥಿಕ ಅಂಶಗಳಾಗಿಸಿ ಅಧ್ಯಯನ ಮಾಡಲಾಗಿದೆ. ಒಟ್ಟಾರೆ ಸಾರಾ ಅವರು ತಮ್ಮ ಕಥನ ಸಾಹಿತ್ಯದ ಮೂಲಕ ಮುಸ್ಲಿಂ ಸಮಾಜದ ಹಾಗೂ ಇತರ ಸಮುದಾಯದ ಹೆಣ್ಣು ಮಕ್ಕಳ ಸ್ಥಿತಿ-ಗತಿಗಳನ್ನು ಸಮಾಜದಲ್ಲಿ ವಿವಿಧ ಸ್ತರಗಳಲ್ಲಿ ಆಕೆ ನಿರ್ವಹಿಸುವ ವಿವಿಧ ಕರ್ತವ್ಯಗಳನ್ನು ಹಾಗೂ ಆಕೆಗಿರುವ ಸಂಕೋಲೆಗಳನ್ನು ತಾಯಿ, ಪತ್ನಿ, ಮಗಳು-ಹೀಗೆ ಹಲವಾರು ಪಾತ್ರಗಳ ಮುಖೇನ ಚರ್ಚಿಸಿದ್ದಾರೆ. ಮುಸ್ಲಿಂ ಸಮುದಾಯದ ಮೇಲೆ ಕೇಂದ್ರಿಕರಿಸಿರುವ ಹಲವಾರು ವಿಷಯಗಳನ್ನು ಸ್ತ್ರೀ ಪಾತ್ರಗಳ ವಿಭಿನ್ನ ವಿನ್ಯಾಸಗಳಲ್ಲಿ ಅವರು ಕಟ್ಟಿಕೊಡುವ ಆದರ್ಶ, ಕಲ್ಪನೆ, ವಾಸ್ತವ, ಹೀಗೆ ಹಲವಾರು ತಾತ್ವಿಕ ಸಂಗತಿಗಳನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸುವ ಗುರಿ ಹೊಂದಲಾಗಿದೆ.

ಅಧ್ಯಾಯ : ೨

ಸಾರಾ ಅವರ ಪರಿಚಯ

ಅಧ್ಯಾಯ : ೨

ಸಾರಾ ಅವರ ಪರಿಚಯ

ಸಾರಾ ಅವರು ಕಾಸರಗೋಡು ಪರಿಸರದ 'ಚಂದ್ರಗಿರಿ' ನದಿ ತೀರದಲ್ಲಿ ತಮ್ಮ ಬದುಕನ್ನು ಆರಂಭಿಸಿದರು. ಚಂದ್ರಗಿರಿ ತೀರ ಕೇವಲ ಬದುಕಿನ ಭಾಗವಷ್ಟೇ ಅಲ್ಲದೇ ಬರಹದ ಮೊದಲಿನ ತಾಣಕೂಡ ಆಗಿರುವುದು ವಿಶೇಷ. ಚಂದ್ರಗಿರಿ ತೀರದ ತಮ್ಮ ಬಾಲ್ಯದ ಅನುಭವಗಳನ್ನು ಬದುಕಿನ ಅನುಭವವಾಗಿ ಸ್ವೀಕರಿಸುತ್ತಲೇ ಬರಹದ ನೆಲೆಯಾಗಿಯೂ ಸುಂದರವಾಗಿ ಸ್ವಾರಸ್ಯ ಪೂರ್ಣವಾಗಿ ಚಿತ್ರಿಸಿದ್ದಾರೆ.

ಸಾರಾ ಅವರು ಕನ್ನಡ ಸಾಹಿತ್ಯಲೋಕದ ಒಬ್ಬ ಪ್ರತಿಭಾವಂತ ಲೇಖಕಿಯಾಗಿದ್ದಾರೆ. ಮೊಟ್ಟ ಮೊದಲ ಬಾರಿಗೆ ಮುಸ್ಲಿಂ ಸಂವೇದನೆಯನ್ನು ಒಬ್ಬ ಮುಸ್ಲಿಂ ಸಮುದಾಯದ ಹೆಣ್ಣು ಮಗಳಾಗಿ, ಅದರ ಒಳ ಅಂತರ್ಯವನ್ನು ಹಾಗೂ ಸಂಘರ್ಷಗಳನ್ನು ಜಗತ್ತಿಗೆ ತೋರಿಸಿದ್ದಾರೆ. ನಲವತ್ತನೆಯ ವಯಸ್ಸಿನಲ್ಲಿ ಬರವಣಿಗೆಯನ್ನು ಆರಂಭಿಸಿದ ಇವರು, ಕನ್ನಡ ಓದುವ ವರ್ಗಕ್ಕೆ ಮುಸ್ಲಿಂ ಸಮುದಾಯದ ಸಂವೇದನೆಯನ್ನು ಬಂಡಾಯ ಚಳುವಳಿಯ ಮೂಲಕ ಮುಸ್ಲಿಂ ಸಮುದಾಯದಿಂದ ಧ್ವನಿ ನೀಡಿದವರಾಗಿದ್ದಾರೆ. ಸಾರಾ ಅವರು ಸಾಹಿತ್ಯ ಲೋಕದಲ್ಲಿ ಅತಿ ವಿಶಿಷ್ಟವಾಗುವುದು ಎರಡು ಕಾರಣಗಳಿಗಾಗಿ ೧. ಕರಾವಳಿ ಸಂಸ್ಕೃತಿಯ ಪ್ರತೀಕವಾಗಿ ೨. ಮುಸ್ಲಿಂ ಸಂವೇದನೆಯ ಮಹಿಳೆಯಾಗಿ, ಈಗಾಗಲೇ ಅವರ ಕುರಿತು ಸಾಕಷ್ಟು ಚರ್ಚೆಯಾದರೂ ಸಾರಾ ಅವರು ಕರಾವಳಿ ಜಗತ್ತಿನ ಪ್ರತೀಕವಾಗಿರುವ ವಿಷಯ ಅಷ್ಟಾಗಿ ಚರ್ಚೆಯಾಗಿಲ್ಲ. ಇವರು ಪ್ರಜ್ಞಾವಂತರ ಕುಟುಂಬವೊಂದರಲ್ಲಿ ಜನಿಸಿದರು. ಪಶ್ಚಿಮ ಕರಾವಳಿ ಪ್ರದೇಶದ ಕಡಲ ದಂಡೆಯಿಂದ ಬಂದ ಸಾರಾ ಅವರು ಅಲ್ಲಿನ ಪರಿಸರ ಮತ್ತು ಭೌಗೋಳಿಕ ಪ್ರದೇಶವನ್ನು ಬದುಕಿನ ಭಾಗವಾಗಿ ಅನುಭವಿಸುತ್ತಲೇ ಬರಹವಾಗಿಸಿರುವ ಬಗೆ ಅನನ್ಯವಾಗಿವೆ.

ಸಾರಾ ಅವರು ಬೆಳೆದ ಕಾಸರಗೋಡು ಪರಿಸರದ ಕುರಿತಾಗಿ ಅವರ ಮಾತಿನಲ್ಲಿಯೇ ಹೇಳುವುದಾದರೆ "ಕಳ್ಳಸಾಗಣೆಗಾರರ ಮತ್ತು ದುಬಾಯಿಯ ಹಣದಿಂದ ಕೊಬ್ಬಿ ಎಚ್ಚೆತ್ತಿದೆ"[೧] ಎಂದು ಅಲ್ಲಿನ ಪರಿಸರವನ್ನು ಸ್ಪಷ್ಟವಾಗಿ ತಿಳಿಸುತ್ತಾರೆ.

ಚಂದ್ರಗಿರಿ ನದಿಯನ್ನು ಅತ್ಯಂತ ಪ್ರೀತಿಯ ತಾಣವಾಗಿ ಸ್ವೀಕರಿಸುತ್ತಾರೆ. ಚಂದ್ರಗಿರಿ ನದಿಯನ್ನು ಅವರು ವರ್ಣಿಸುವ ರೀತಿಯನ್ನು ವಿಶೇಷಾರ್ಥದಲ್ಲಿ ಹೆಣ್ಣಿನ ಬದುಕಾಗಿ ಗ್ರಹಿಸಬಹುದಾಗಿದೆ. ಹೆಣ್ಣು ಒಂದು ಮನೆಯಲ್ಲಿ ಹುಟ್ಟಿ, ಬೆಳೆದು ಗಂಡನ ಮನೆಗೆ ಸೇರಿದಾಗ ಏನೆಲ್ಲಾ ಕಷ್ಟಗಳನ್ನು ಅನುಭವಿಸುತ್ತಾಳೆ ಎಂದು ಚಂದ್ರಗಿರಿ ನದಿಯನ್ನು ಸಂಕೇತವಾಗಿ ಇಟ್ಟುಕೊಂಡು ಚಂದ್ರಗಿರಿ ನದಿ ಒಂದು ಕಡೆ ಹುಟ್ಟಿ, ನಂತರದಲ್ಲಿ ಹರಿಯುತ್ತಾ ಕವಲೊಡೆದು ಕೊನೆಗೆ ಅರಬ್ಬಿ ಸಮುದ್ರವನ್ನು ಸೇರುವಂತೆ ಎಂದು ತಮ್ಮ ಕಥಾಸಾಹಿತ್ಯದಲ್ಲಿ ವಿವರಿಸುವ ಮೂಲಕ ಹೆಣ್ಣು ಮಕ್ಕಳು ಕೊನೆ ತಮ್ಮ ಅಸ್ತಿತ್ವವನ್ನು ಹೇಗೆ ಕಂಡುಕೊಳ್ಳುತ್ತಾರೆ ಎಂಬುದನ್ನು ತಿಳಿಸಿದ್ದಾರೆ.

ಸಾರಾ ಅವರು ಬಾಲ್ಯದ ದಿನಗಳನ್ನು ಹೆಚ್ಚಾಗಿ ಅವರ ಅಜ್ಜಿಯ ಮನೆಯಲ್ಲೇ ಕಳೆಯುತ್ತಿದ್ದರು. ಚಮನಾಡು ಚಂದ್ರಗಿರಿ ನದಿಯ ಆಚೆಯ ದಡದಲ್ಲಿರುವುದರಿಂದ ಇವರು ದೋಣಿಯಲ್ಲಿ ಕುಳಿತು ವಾರಕ್ಕೆ ಒಂದೆರಡು ಬಾರಿಯಾದರೂ ನದಿಯನ್ನು ದಾಟಿ ಅಜ್ಜಿಯ ಮನೆಗೆ ಹೋಗುತ್ತಿದ್ದರು. ಒಂದು ಸಾರಿ ಚಮನಾಡಿಗೆ ದೊಡ್ಡ ನೆರೆ ಬಂದಿತ್ತು. ಇದನ್ನು ಸಾರಾ ಅವರು ತಮ್ಮ ಆತ್ಮ ಚರಿತ್ರೆಯಲ್ಲಿ ತುಂಬಾ ಸೊಗಸಾಗಿ ಅವರ ಮಾತಿನಲ್ಲಿಯೇ ವರ್ಣಿಸಿದ್ದಾರೆ. "ಊರಿನಲ್ಲಿ ಎಲ್ಲೆಲ್ಲಿ ನೋಡಿದರೂ ನೀರೆ ನೀರು, ಅಲ್ಲಲ್ಲಿ ಕೇವಲ ಮಾವು ತೆಂಗುಗಳ ತುದಿ ಮಾತ್ರ ಕಾಣಿಸುತ್ತಿತ್ತು. ಕೆಲವು ಗುಡಿಸಲುಗಳು ನೀರಿನಲ್ಲಿ ತೇಲುತ್ತಿದ್ದರೆ ಮನೆಯೇ ನೀರಿನಲ್ಲಿ ತೇಲಿಹೋಗುವಂತೆ ಕಾಣುತ್ತಿತ್ತು"[೨] ಎಂದು ವರ್ಣಿಸುತ್ತಾರೆ. ಹಾಗೆಯೇ ಕರಾವಳಿ ನೋಡಬಹುದಾಗಿದೆ. ಹಾಗೆಯೇ ಅಲ್ಲಿಯ ಕರಾವಳಿ ಪ್ರದೇಶದ ಮುಸ್ಲಿಂ ಸಮಾಜದ ಧಾರ್ಮಿಕ ಸಂಪ್ರದಾಯವಾಗಿ ಬರುವ ಕಿವಿ ಚುಚ್ಚುವ ಪದ್ಧತಿ, ಪರ್ಧಾ ಪದ್ಧತಿಯನ್ನು ತಮ್ಮ ಆತ್ಮಚರಿತ್ರೆಯ ಮುಖೇನ ಹೇಳುತ್ತಲೇ ತಮ್ಮ ಕಥನ ಸಾಹಿತ್ಯದಲ್ಲಿಯೂ ಕೂಡ ಪದೇ ಪದೇ ಈ ಸಂಪ್ರದಾಯವನ್ನು ಹೇಳುತ್ತಾರೆ. ಕಿವಿಯ ಆಭರಣದ ಬಗ್ಗೆ ಅಲ್ಲಿನ ಮಹಿಳೆಯರಿಗೆ ಇರುವ ಭಾವನಾತ್ಮಕ ಸಂಬಂಧವನ್ನು ತುಂಬಾ ಸುಂದರವಾಗಿ ವರ್ಣಿಸಿದ್ದಾರೆ.

ಮುಸ್ಲಿಂ ಸಂಪ್ರದಾಯದಲ್ಲಿ ಹೆಣ್ಣು ಮಕ್ಕಳು ಕೋಣೆಯ ಹೊರಗಡೆ ಬರಲು ಸಾಧ್ಯವಾಗದ ಸಂದರ್ಭದಲ್ಲಿಯೂ ಸಾರಾ ಅವರಿಗೆ ಎಸ್.ಎಸ್.ಎಲ್.ಸಿ. ಮಟ್ಟದವರೆಗಿನ ವಿದ್ಯಾಭ್ಯಾಸವನ್ನು

---

೧. ಪು.ಸ. ೭೬, ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು, ಸಾರಾ ಅಬೂಬಕ್ಕರ್

೨. ಪು.ಸಂ. ೭೮, ,, ,,

ಕೊಡಿಸಲೇಬೇಕು ಎಂಬ ಹಟವಾದಿ ತಂದೆ ಓದು ಮತ್ತು ಆಟದ ಬಗ್ಗೆ ಒಲವು ಮೂಡಿಸುವ ಅಣ್ಣ, ಉತ್ತಮ ಅಂಕ ಪಡೆದು ತೇರ್ಗಡೆಯಾಗಬೇಕೆಂದು ಪ್ರೋತ್ಸಾಹಿಸುತ್ತಿದ್ದ ಮುಖ್ಯೋಪಾಧ್ಯಾಯರು ಇವರೆಲ್ಲರೂ ಇರುವಾಗಲೂ, ಮುಸ್ಲಿಂ ಮೂಲಭೂತವಾದಿಗಳ ಹಾಗೂ ಅಲ್ಲಿಯ ಸ್ತ್ರೀ-ಪುರುಷರು ಇವರನ್ನು ಕಿಟಕಿ ಬಾಗಿಲುಗಳಿಂದ ನೋಡಿ ಮುಜುಗರವನ್ನುಂಟು ಮಾಡುವ ಜನರ ಮಧ್ಯೆ ಶಾಲೆಗೆ ಹೋಗಿ ಬರುವುದು ಪ್ರಯಾಸದ ಕೆಲಸವಾಗಿತ್ತು ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಳ್ಳುತ್ತಾರೆ. ಸಾರಾ ಅವರ ತಾಯಿಯ ಪ್ರಕಾರ ಹೆಣ್ಣು ಮಕ್ಕಳು ಹುಟ್ಟುವುದೇ ಮದುವೆಯಾಗುವುದಕ್ಕೆ ಎಂದು ಇಂತಹ ಸನ್ನಿವೇಶದಲ್ಲಿ ತಾಯಿಗೆ ಇವರ ಶಿಕ್ಷಣದ ಬಗ್ಗೆ ಆಸಕ್ತಿ ಇಲ್ಲದಿದ್ದರೂ ಇವರು ಅರ್ಧದಲ್ಲಿಯೇ ಶಾಲೆ ಬಿಡುವುದೂ ಅವರಿಗೂ ಇಷ್ಟವಿರಲಿಲ್ಲ. ಆದರೂ ಶಾಲೆಯಲ್ಲಿ ಕಲಿಸುವ ಕ್ರೋಶ, ಹೆಣಿಗೆ, ಕಸೂತಿ ಕಲಿಯುವಾಗ ಸಂತೋಷಪಡುವ ತಾಯಿ ಆಗಾಗ ಮನೆಕೆಲಸವನ್ನು ಮಾಡಲು ಹೇಳುತ್ತಿದ್ದರು. ಹೀಗೆ ಸಾರಾ ಅವರ ಬಾಲ್ಯದ ದಿನಗಳೇ ಇಷ್ಟೆಲ್ಲಾ ನಿರ್ಬಂಧಗಳಿಂದ ಕೂಡಿತ್ತು ಎಂಬುದನ್ನು ನೋಡಿದರೆ ಅಲ್ಲಿನ ಮುಸ್ಲಿಂ ಹೆಣ್ಣು ಮಕ್ಕಳ ಸ್ಥಿತಿ ಹೇಗೆ ಇರಬಹುದು ಎಂಬುದನ್ನು ಊಹಿಸಿಕೊಳ್ಳಬಹುದು.

ಸಾರಾ ಅವರಿಗೆ ಬಾಲ್ಯದಲ್ಲಿ ಆರ್ಥಿಕವಾಗಿ ಯಾವುದೇ ರೀತಿಯಾದ ತೊಂದರೆ ಇಲ್ಲದಿದ್ದರೂ ಇವರು ಆ ಸಮಾಜದಲ್ಲಿ ಇರುವ ಮಹಿಳೆಯ ಆರ್ಥಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿ, ತಮ್ಮ ಕಥನ ಸಾಹಿತ್ಯದಲ್ಲಿ ಹೆಣ್ಣು ಆರ್ಥಿಕ ಪರಿಸ್ಥಿತಿಯಿಂದ ಹೇಗೆ ಕಷ್ಟಕ್ಕೆ ಒಳಗಾಗುತ್ತಾಳೆ ಎಂಬುದನ್ನು ವಿವರಿಸುತ್ತಾರೆ. ಹೀಗೆ ಸಾರಾ ಅವರು ಕರಾವಳಿ ಜಗತ್ತನ್ನು ಸೂಕ್ಷ್ಮವಾಗಿ ಅನುಭವಿಸುತ್ತಲೇ ಅದನ್ನು ಓದುಗರಿಗೆ ತಮ್ಮ ಆತ್ಮಚರಿತ್ರೆಯ ಮೂಲಕ ವಿವರಿಸುವ ಬಗೆ ಅನನ್ಯವಾಗಿದೆ. ಸಾರಾ ಅವರ ಅನುಭವದ ಮೂಸೆಯಲ್ಲಿ ಮೂಡಿ ಬರುವ ವಿಚಾರಗಳು ಕರಾವಳಿ ಪರಿಸರದ ರುದ್ರರಮಣೀಯತೆಯನ್ನು ಓದುಗರಿಗೆ ತೆರೆದಿಡುತ್ತವೆ. ಸುಂದರವಾದ ಪರಿಸರದ ವರ್ಣನೆಯ ಜೊತೆಗೆ ಅಲ್ಲಿನ ಕೆಲವು ಸಂಘರ್ಷಾತ್ಮಕ ವಿಚಾರಗಳು ಬಿಚ್ಚಿಕೊಳ್ಳುತ್ತವೆ. ಕರಾವಳಿ ಸೀಮೆಯ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ವಿಚಾರಗಳು ಸಾರಾ ಅವರ ಕೃತಿಗಳಲ್ಲಿ ಒಟ್ಟಾಗಿ ಸಿಗುತ್ತವೆ. ಪ್ರಸ್ತುತ ಅಧ್ಯಯನದ ಪ್ರಮುಖ ವಿಚಾರ ಸಾಮಾಜಿಕ ವಿನ್ಯಾಸವಾಗಿರುವುದರಿಂದ ಸಮಾಜ, ಸಂಸ್ಕೃತಿಗಳ ಒಂದು ಸಮಗ್ರ ಚಿತ್ರಣವನ್ನಿಲ್ಲಿ ಕೊಡಲು ಪ್ರಯತ್ನಿಸಲಾಗಿದೆ. ಹಾಗಾಗಿ ಮುಖ್ಯವಾಗಿ ಕರಾವಳಿ ಪರಿಸರದ ಸಾಂಸ್ಕೃತಿಕ ನೆಲೆಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅವರ ಪರಿಚಯದಲ್ಲಿ ಕರಾವಳಿ ಪರಿಸರವನ್ನು ಹೇಳಲಾಗಿದೆ.

ಅ. ಸಾರಾ ಅವರ ಕೃತಿಗಳು ಒಂದು ಸಮೀಕ್ಷೆ

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮುಸ್ಲಿಂ ಸಂವೇದನೆಯ ಬಗ್ಗೆ ಪರಿಚಯ ಮಾಡಿಕೊಟ್ಟ ಮೊದಲ ಲೇಖಕಿ ಸಾರಾ ಅಬೂಬಕ್ಕರ್ ಅವರು. ಮುಸ್ಲಿಂ ಮಹಿಳೆಯರು ಶಿಕ್ಷಣ ಪಡೆಯುವುದು, ಘೋಷಾ ಪದ್ಧತಿಯ ವಿರುದ್ಧ ಮಾತನಾಡುವುದು, ಧರ್ಮವನ್ನು ಕುರಿತು ಮಾತನಾಡುವುದು, ತಮ್ಮ ಸಮಾಜದ

ಬಗ್ಗೆ ಅಲ್ಲಿನ ಕುಂದುಕೊರತೆಗಳ ಬಗ್ಗೆ ಮಾತನಾಡುವುದು ಅಸಾಧ್ಯ. ಆದರೂ ಸಾರಾ ಅವರು ಆ ಎಲ್ಲ ಕಟ್ಟಳೆಗಳನ್ನು ಮೆಟ್ಟಿ ನಿಂತು ಬರೆಯಲು ಪ್ರಾರಂಭಿಸಿದರು.

ಆಧುನಿಕ ಸಮಾಜದ ಇಂದಿನ ದಿನಗಳಲ್ಲಿ ನೋಡುವುದಾದರೆ ಹೆಣ್ಣು-ಗಂಡಿನ ಆಶಯಗಳು ಸಮಾಜದಲ್ಲಿ ಸಮಾನವಾಗಿವೆ. ಆದರೆ ಕೆಲವೊಂದು ಸಂದರ್ಭದಲ್ಲಿ ಹೆಣ್ಣಿನ ತುಡಿತಗಳು ಸಂಪ್ರದಾಯದ ಚೌಕಟ್ಟಿನಲ್ಲಿ ಬಂಧಿತಳಾಗಿ ಅಸಹಾಯಕಳಾಗಿ ಕೊನೆಗೆ ಚಲನಶೀಲತೆಗೆ ಸಂಕೇತವಾಗುತ್ತಾಳೆ ಎಂಬುದನ್ನು ಸಾರಾ ಅವರ ಕೃತಿಗಳಲ್ಲಿ ಕಾಣಬಹುದಾಗಿದೆ.

ಸಾರಾ ಅವರಿಗಿರುವ ಕಳಕಳಿಯೆಂದರೆ ಇಸ್ಲಾಂ ಧರ್ಮವನ್ನು ತಪ್ಪಾಗಿ ಅರ್ಥೈಸಿಕೊಂಡು ಶೋಷಣೆಗೆ ಒಳಗಾಗುತ್ತಿರುವ ಮುಸ್ಲಿಂ ಸಮಾಜದ ಹೆಣ್ಣು ಮುಕ್ತವಾಗಬೇಕಾದರೆ ಅಲ್ಲಿನ ಪುರುಷರು ಮತ್ತು ಮಹಿಳೆಯರು ಶಿಕ್ಷಣ ಪಡೆಯಬೇಕು ಮತ್ತು ಧರ್ಮ ಗ್ರಂಥಗಳನ್ನು ಸರಿಯಾಗಿ ಅಧ್ಯಯನ ಮಾಡಬೇಕು. ಕೇವಲ ಕುರಾನ್ ಶ್ಲೋಕಗಳನ್ನು ಪಠಿಸಿದರೆ ಸಾಲದು ಅದರ ಮೂಲ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಬೇಕು ಎನ್ನುವುದು. ಈ ಹಿನ್ನೆಲೆಯಿಂದ ಅವರು ತಮ್ಮ ಅನುಭವಗಳನ್ನು ತಮ್ಮ ಕಥನ ಸಾಹಿತ್ಯದಲ್ಲಿ ಪ್ರತಿಬಿಂಬಿಸಿದ್ದಾರೆ.

ಮುಸ್ಲಿಂ ಹೆಣ್ಣುಗಳ ಅನುಭವ ಲೋಕವನ್ನು ಸಮರ್ಥವಾಗಿ ಕನ್ನಡ ಸಾಹಿತ್ಯದೊಳಗೆ ಸೇರಿಸಿದ ಯಶಸ್ಸು ಸಾರಾ ಅಬೂಬಕ್ಕರ್ ಅವರದಾಗಿದೆ. ಲಿಂಗಾಧಾರಿತ ಅಸಮಾನತೆಯ ಕುರಿತು ಸಾರಾ ಅವರ ಕತೆಗಳು ಪ್ರತಿಭಟಿಸುತ್ತವೆ. ಧರ್ಮದ ಹೆಸರಿನಲ್ಲಿ ಪುರೋಹಿತಶಾಹಿ ವರ್ಗಗಳ ಮೂಲಕ ಅಲ್ಲಿನ ಪುರುಷರು ನಡೆಸುವ ಸ್ತ್ರೀ ಶೋಷಣೆ ಇವರ ಕಥನ ವಸ್ತುಗಳೂ ಆಗಿವೆ.

ಇವರ 'ಚಪ್ಪಲಿಗಳು' ಕಥಾ ಸಂಕಲನದ 'ಚಪ್ಪಲಿಗಳು' ಕತೆಯೂ ಹಾಗೂ 'ಧರ್ಮ ಬಲೆ ಬೀಸಿದಾಗ' ಎನ್ನುವ ಕತೆಗಳ ಕುರಿತು ಶ್ರೀಮತಿ ಆರ್ಯಾಂಬ ಪಟ್ಟಾಭಿಯವರ ಮಾತನ್ನು ಗಮನಿಸುವುದಾದರೆ, "ಗಂಡನ ಸಹಾನುಭೂತಿ, ಆಸರೆ, ಪ್ರೀತಿ-ಗೌರವಗಳು ಸ್ತ್ರೀ ಸಹಜ ಭಾವನೆಗಳಿಗೆ ಪೂರಕವಾಗಿ ಬಂದಿವೆ"[೩] ಹೀಗಾಗಿ ಆಕೆ ಮತ್ತೆ ಬದುಕನ್ನು ಎದುರಿಸುವ ಸ್ಪಷ್ಟ ಸೂಚನೆಗಳು ಈ ಕತೆಯಲ್ಲಿ ಕಂಡುಬರುತ್ತವೆ.

'ವಿಷ ಉಣಿಸುವವರು' ಕತೆಯಲ್ಲಿ ಬೇರೆ ಬೇರೆ ಧರ್ಮಕ್ಕೆ ಸೇರಿದ ಹೆಣ್ಣು-ಗಂಡಿನ "ನಿರ್ಮಲವಾದ ಸಹೋದರ ಪ್ರೇಮವನ್ನು ಅಪಾರ್ಥ ಮಾಡಿಕೊಳ್ಳುವ ಸಂಕುಚಿತ ಮನೋಭಾವದ ಸಮಾಜದ ಗಂಡು-ಹೆಣ್ಣುಗಳನ್ನು ಮಾನಸಿಕವಾಗಿ ಹಿಂಸಿಸುವುದೇ ಅಲ್ಲದೆ ಕೋಮು ಗಲಭೆಗಳಿಗೆ ಎಡೆ ಮಾಡಿಕೊಟ್ಟು ಸಂಸಾರಗಳನ್ನೇ ಧ್ವಂಸ ಮಾಡಿದರೆ"[೪] ಎಂದು ಹೀಗೆ ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ ಅಭಿಪ್ರಾಯ ಪಡುತ್ತಾರೆ.

---

೩. ಪು.ಸ. ೧೭೭, ಮಹಿಳಾ ಸಾಹಿತ್ಯ ಸಮೀಕ್ಷೆ, ಶ್ರೀಮತಿ ಆರ್ಯಾಂಭ ಪಟ್ಟಾಭಿ

೪. ಪು.ಸ. ೨೫೭, ಸ್ತ್ರೀವಾದಿ ಸಾಹಿತ್ಯ ಸಮೀಕ್ಷೆ, ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ

'ಮಸೀದಿ ಕಟ್ಟುವವರು' ಕತೆಯಲ್ಲಿ ಮಸೀದಿಯಲ್ಲಿ ಹೇಳುವ ಆಶಯಗಳನ್ನು ಸಾರಾ ತಿರಸ್ಕರಿಸುತ್ತಾರೆ. ಈ ತಿರಸ್ಕಾರದಿಂದಲೇ ಮುಸ್ಲಿಂ ಸಮಾಜದ ಆ ಆವರಣ ಬದಲಾವಣೆಯಾಗಬೇಕೆಂಬ ಒತ್ತಡವನ್ನು ಗ್ರಹಿಸುವ ಪ್ರಯತ್ನ ಮಾಡುತ್ತಾರೆ. ಈ ಕತೆಯಲ್ಲಿ ಬರುವ ಮೂಸಾ ಶೌಕಾಲಿಯ ಶೋಷಣೆಗೆ ಒಳಗಾಗುತ್ತಾನೆ.

'ಧರ್ಮ ಬಲೆ ಬೀಸಿದಾಗ' ಕತೆಯ ಖತೀಜಾಬಿ ಮುಸ್ಲಿಂ ಮೂಲಭೂತವಾದಿಗಳಿಂದ ಎಷ್ಟೇ ಒತ್ತಡ ಬಂದರು ತನ್ನ ಚಿಕ್ಕ ವಯಸ್ಸಿನ ಮಗಳನ್ನು ಮುದುಕನಿಗೆ ಮದುವೆ ಮಾಡಿಕೊಡಲು ಒಪ್ಪುವುದಿಲ್ಲ. ಇಬ್ರಾಹಿಮ್ ಹಾಜಿಯವರನ್ನು ಧೈರ್ಯವಾಗಿ ಎದುರಿಸುತ್ತಾಳೆ. ತಮ್ಮ ಮೇಲೆ ಇರುವ ಬಹಿಷ್ಕಾರವನ್ನು ಹಿಂತೆಗೆಸುವಲ್ಲಿ ಖತೀಜಾಬಿ ಸಫಲಳಾಗುತ್ತಾಳೆ. ಈ ಕಾರ್ಯದಲ್ಲಿ ಇವಳ ಗಂಡ ಜೊತೆಯಾಗಿ ನಿಲ್ಲಲು ಹಿಂಜರಿದರೂ ನಂತರ ಇವಳ ಜೊತೆಯಾಗಿ ನಿಲ್ಲುತ್ತಾನೆ.

'ಸಾರಾಂಶ' ಕತೆಯಲ್ಲಿ ಇಲ್ಲಿ ಹಿಂದೂ ಪುರುಷನಿಂದ ಶೋಷಿತಳಾದ ಯಮುನಾ ಒಂದು ಮುಸ್ಲಿಂ ಕುಟುಂಬದೊಡನೆ ಆತ್ಮೀಯವಾಗಿ ತನ್ನ ನೋವುಗಳನ್ನೆಲ್ಲ ಮರೆತು ಇದ್ದರೆ ಸಮಾಜದ ಇತರೆ ಘಟಕಗಳು ಇದನ್ನು ವಿರೋಧಿಸುತ್ತವೆ. ಈ ಕತೆಯಲ್ಲಿ ಸಾರಾ ಅವರು ಸಮಾಜದಲ್ಲಿ ನಡೆಯುವ ಘಟನೆಯನ್ನು ಸೂಕ್ಷ್ಮವಾಗಿ ಗುರುತಿಸಿರುವುದನ್ನು ಗಮನಿಸಬಹುದು. 'ಅಂಕುರ' ಕತೆಯಲ್ಲಿ ಕೆ.ಷರೀಫಾ ಅವರು ಹೇಳುವಂತೆ "ಹಣದ ದಾಹ ಮನುಷ್ಯನನ್ನು ಎಷ್ಟು ಕ್ರೂರಿಯಾಗಿಸುತ್ತದೆ"[೫] ಎಂಬುದನ್ನು ನೋಡಬಹುದು. ಮುಸ್ಲಿಂ ಸಮಾಜದಲ್ಲಿ ಹೆಣ್ಣಾಗಿ ಹುಟ್ಟಿ ತನ್ನದಲ್ಲದ ತಪ್ಪಿಗೆ ಮುಸ್ಲಿಂ ಮಹಿಳೆ ಅನುಭವಿಸುವ ನೋವು ಸಂಕಟಗಳನ್ನು 'ಧ್ವನಿಯಿಲ್ಲದ ನೋವುಗಳು' ಕತೆಯಲ್ಲಿ ಕಾಣಬಹುದು. "ಹೆಣ್ಣು ಪ್ರತಿಭಾವಂತಳಾಗಿದ್ದರಷ್ಟೇ ಸಾಲದು ಮದುವೆಯಾದ ನಂತರ ತನ್ನ ಕನಸುಗಳಿಗೆ ಆಕಾರ ಕೊಡಲು ಗಂಡನ ಸಹಕಾರ ಸಿಗಬೇಕು."[೬] ಎನ್.ಕೆ.ಕೋದಂಡರಾಮ ಅವರು ಅಭಿಪ್ರಾಯ ಪಡುತ್ತಾರೆ. ಆದರೆ ಅವಳ ಕನಸುಗಳೇ ಗಂಡನಿಗೆ ಹಿಂಸೆಯಾಗಿ ಅವಳ ಕನಸುಗಳೇ ನುಚ್ಚುನೂರಾಗುತ್ತವೆ ಎಂಬುದನ್ನು 'ಉರಿಬಿಸಿಲು' ಕತೆಯಲ್ಲಿ ಗಮನಿಸಬಹುದು. 'ಬಂದಣಿಗೆ' ಕತೆಯಲ್ಲಿ "ಸಾಂಪ್ರದಾಯಿಕವಾಗಿ ಯಾವ ಪ್ರತಿಭಟನೆಯೂ ಇಲ್ಲದೆ ಗಂಡನನ್ನು ನಿಷ್ಠೆಯಿಂದ ಒಪ್ಪಿಕೊಳ್ಳುವ ಹೆಣ್ಣು ಕೂಡ ಆತನ ಕ್ರೌರ್ಯಕ್ಕೆ ಬಲಿಯಾಗುತ್ತಾಳೆ ಎಂಬುದನ್ನು ನಿರೂಪಿಸುತ್ತಾರೆ. ಅಪ್ಪನಂತೆ ಮಗನೂ ಹೆಣ್ಣಿನ ಮೇಲೆ ಆಕ್ರಮಣ ಮಾಡುವುದು ಸಹಜ ಎಂದು ತಿಳಿಯುತ್ತಾನೆ. ಭವಿಷ್ಯವನ್ನು ಮಕ್ಕಳ ಮೂಲಕ ಕಾಣಲು ಪ್ರಯತ್ನಿಸುವ ತಾಯಿಗೆ ಅದನ್ನು ಉಳಿಸಿಕೊಳ್ಳಲು ಇಂಥ ಸಂದರ್ಭದಲ್ಲಿ ಯಾವ ಭರವಸೆಯೂ ಸಿಗುವುದಿಲ್ಲ. ಮಗನ ಬದುಕನ್ನು ರೂಪಿಸುವಲ್ಲಿ ಗಂಡ ಕೊಟ್ಟ ನೋವನ್ನು ಮರೆಯುತ್ತಾಳೆ."[೭] 'ಮೂಲೆ ಮುಟ್ಟಿದ ಹುಳು' ಕತೆಯ ಈ

---

೫. ಪು.ಸ. ೪೬, ಬಂಡಾಯ ಮುಸ್ಲಿಂ ಸಂವೇದನೆ, ಕೆ.ಷರೀಫಾ

೬. ಪು.ಸಂ. ೧೭೮, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಎನ್.ಕೆ.ಕೋದಂಡರಾಮ

೭. ಅದೇ ಪುಟ

ಆಶಯ ಮಗನ ಸ್ವಭಾವ ದುರಂತವಾಗುತ್ತಿರುವ ವೈಯಕ್ತಿಕಗೊಳ್ಳಲು ಇಚ್ಛಿಸುತ್ತದೆ. ಆಕೆ ಸಂಪಾದಿಸಿದ ಹಣದಿಂದ ಮಗ ಹೆಣ್ಣಿನ ಚಟಕ್ಕೆ ಒಳಗಾಗುತ್ತಾನೆ. ಇದರಿಂದ ಮಗನ ಬಗೆಗಿದ್ದ ಭರವಸೆ ನಾಶವಾಗುತ್ತದೆ. ನಂತರ ಆಕೆ ಮದುವೆಯಾಗಲು ಕೇಳಿದ ಪುರುಷನೊಂದಿಗೆ ತನ್ನ ಬದುಕನ್ನು ರೂಪಿಸಿಕೊಳ್ಳುವ ದೃಢ ನಿರ್ಧಾರ ಮಾಡುತ್ತಾಳೆ. ಈ ಕತೆ ಸಾರಾ ಅವರ ಕಥೆಗಳಲ್ಲಿ ವಿಭಿನ್ನವಾಗಿರುವ ಮಾದರಿಯಾಗಿದೆ.

'ಹಳೆಯ ಬೇರು ಹೊಸ ಚಿಗುರು' ಕತೆ ಇಲ್ಲಿ ಎರಡು ಸಂಪ್ರದಾಯಗಳ ಸಂಘರ್ಷವನ್ನು ಕಾಣುತ್ತೇವೆ. ಒಂದು ಸಂಪ್ರದಾಯ ಮತ್ತೊಂದು ಆಧುನಿಕ. ಇಲ್ಲಿ ಪರಂಪರೆ ಮತ್ತು ಆಧುನಿಕ ಮುಖಾಮುಖಿ ಯಾಗಿರುವುದನ್ನು ಕಾಣುತ್ತೇವೆ. ಮುಸ್ಲಿಂ ಸಂಪ್ರದಾಯದಲ್ಲಿ ಮದುವೆಯಾದ ಹೆಣ್ಣನ್ನು ಮೊದಲೇ ನೋಡುವುದು ಸಾಧ್ಯವಿಲ್ಲದ ಸಂದರ್ಭದಲ್ಲಿ, ಮದುವೆಯಾಗದೆ ಹೆಣ್ಣು ಗಂಡಿನ ಜೊತೆಗೆ ಏಕಾಂಗಿಯಾಗಿ ಹೊರಗಡೆ ಹೋಗುವುದು ಮುಸ್ಲಿಂ ಸಮಾಜದಲ್ಲಿ ದೊಡ್ಡ ಆಘಾತವಾಗುತ್ತದೆ. ಹಿರಿಯ ತಲೆಮಾರು ಇದನ್ನು ವಿರೋಧಿಸಿದ್ದರೆ ಕಿರಿಯ ಹೊಸ ತಲೆಮಾರು ಬದಲಾಗುತ್ತಿರುವ ಸಂಪ್ರದಾಯವನ್ನು ಒಪ್ಪಿಕೊಳ್ಳುತ್ತದೆ. ಈ ಕತೆಯಲ್ಲಿ ಮುಸ್ಲಿಂ ಸಮಾಜ ಬದಲಾಗುತ್ತಿರುವುದನ್ನು ಕಾಣಬಹುದು.

'ಬಿಸಿಲ್ಗುದುರೆಯ ಬೆನ್ನುಹತ್ತಿ' ಈ ಕತೆಯಲ್ಲಿ ಬರುವ ಹಮೀದನು ಬಡತನದಿಂದ ಬೇಸತ್ತು ಕೊಲ್ಲಿ ರಾಷ್ಟ್ರಕ್ಕೆ ಹೋಗಿ ಹಣ ಸಂಪಾದಿಸಿ ತನ್ನ ತಾಯಿಯನ್ನು ಬಂಗಾರದ ತೊಟ್ಟಿಲಲ್ಲಿ ತೂಗಬೇಕೆಂಬ ಕನಸು ಕಂಡವನು. ಆದರೆ ಹಮೀದ್‌ನ ಕನಸು ಕೈಗೂಡುವುದಿಲ್ಲ. ಭಾರತದಿಂದ ವಿಮಾನ ಹತ್ತಿ ಹೊರಟ ಅವನನ್ನು ಜಿದ್ದಾದಲ್ಲಿ ಇಳಿಯುತ್ತಿದ್ದಂತೆಯೇ ಮಾದಕ ದ್ರವ್ಯ ಕಳ್ಳಸಾಗಣಿಕೆ ಅಪವಾದದ ಮೇಲೆ ಹಮೀದ್‌ನನ್ನು ಬಂಧಿಸುತ್ತಾರೆ. ಇತ್ತ ಭಾರತದಲ್ಲಿ ತಾಯಿ ಹುಚ್ಚಿಯಂತೆ ಮಗನಿಗಾಗಿ ಹಂಬಲಿಸುವ ಭಾವ ಪ್ರಧಾನವನ್ನು ಈ ಕತೆಯಲ್ಲಿ ಕಾಣಬಹುದು.

'ಬೆನ್ನಟ್ಟುವ ಭೂತಗಳು' ಈ ಕತೆ "ನನ್ನದೇ ಒಂದು ಅನುಭವ ಕಥನ ಎಂದು ಖೆಡ್ಡಾದ ಬೆನ್ನುಡಿಯಲ್ಲಿ ಸಾರಾ ಅವರು ಹೇಳಿದ್ದಾರೆ. ಇಲ್ಲಿ ಹಿಂದಿನ ಕಾಲದಲ್ಲಿ ಕತೆ, ಕಾದಂಬರಿಗಳು ಕೇವಲ ಕಾಲ್ಪನಿಕ ವಸ್ತುಗಳನ್ನಾಧರಿಸಿರುತ್ತಿದ್ದವು. ಅವುಗಳನ್ನು ಕಟ್ಟು ಕತೆಗಳೆಂದೇ ಕರೆಯುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ನಾವು ಕಂಡದ್ದನ್ನು, ಕೇಳಿದ್ದನ್ನು ನಮ್ಮ ಅನುಭವಗಳನ್ನು ನಮ್ಮ ಸುತ್ತಲೂ ನಡೆಯುತ್ತಿರುವುದನ್ನೇ ಕತೆಯಾಗಿ ಹೆಣೆದು ಓದುಗರ ಮುಂದಿಡಬೇಕಾಗುತ್ತದೆ, ಮುಂದಿಡುತ್ತಿದ್ದೇವೆ. ಆ ಮೂಲಕವೇ ಸಮಾಜವನ್ನು ಎಚ್ಚರಿಸುವ ಪ್ರಯತ್ನ ನಮ್ಮದು"[೮] ಎಂಬುದನ್ನು ಖೆಡ್ಡಾ ಬೆನ್ನುಡಿಯಲ್ಲಿ

---

೮. ಖೆಡ್ಡಾ ಬೆನ್ನುಡಿ, ಸಾರಾ ಅಬೂಬಕ್ಕರ್

ಬೆನ್ನಟ್ಟುವ ಭೂತಗಳ ಬರೆಯಲು ಪ್ರೇರಣೆಯ ಬಗ್ಗೆ ಹೇಳುತ್ತಾರೆ. ಈ ಕತೆಯಲ್ಲಿ ಬರುವ ನಾಯಕಿ ಆಯಿಷ್ಯಾ ಪ್ರಜ್ಞಾವಂತ ಹೆಣ್ಣು. ಒಮ್ಮೆ ತನ್ನ ಗಂಡನಲ್ಲಿ ಶಿವನಸಮುದ್ರ ಜಲಪಾತ ನೋಡುವ ಆಸೆ. ಗಂಡನಲ್ಲಿ ಕೇಳಿದಾಗ, ಸರಪುದ್ದೀನ್, ಸ್ನೇಹಿತರೊಂದಿಗೆ ಆಯಿಷಾಳನ್ನು ಪ್ರವಾಸಕ್ಕೆ ಕರೆದೊಯ್ಯುತ್ತಾನೆ. ಅಲ್ಲಿ ಅವಳ ಗಂಡನ ಸ್ನೇಹಿತರ ಐತಿಹಾಸಿಕ ತಪ್ಪು ಕಲ್ಪನೆಗಳನ್ನು ಆಯಿಷಾ ತಿದ್ದಿದಾಗ ಅವಳ ಗಂಡ ಸಿಡಿಮಿಗೊಳ್ಳುತ್ತಾನೆ. ಇಲ್ಲಿ ಗಂಡಸು ತನ್ನದೇ ನಿಜವೆಂದು ವಾದ ಬಿಟ್ಟು ಸತ್ಯವನ್ನು ಒಪ್ಪಿಕೊಳ್ಳುವ ಮನಸ್ಸು ಇರಬೇಕು ಎಂಬುದನ್ನು ಈ ಕತೆಯ ಮೂಲಕ ಹೇಳುತ್ತಾರೆ. 'ಅಪಹರಣ' ಕತೆಯಲ್ಲಿ ಧರ್ಮ ಗ್ರಂಥಗಳನ್ನು ಚೆನ್ನಾಗಿ ಓದಿ ಜನರಿಗೆ ಹೇಗೆ ಮೋಸ ಮಾಡಬಹುದೆಂದು ತಿಳಿಸುವ ಕತೆಯಾಗಿದೆ. ಈ ಕತೆಯಲ್ಲಿ ಬರುವ ನಾಯಕ ತನ್ನ ಪಾಂಡಿತ್ಯದ ಬೆನ್ನು ಹತ್ತಿ ಕುಟುಂಬವನ್ನು ಕಡೆಗಣಿಸಿದಾಗ ಮಕ್ಕಳನ್ನು ಕಟ್ಟಿಕೊಂಡು ಕುಟುಂಬವನ್ನು ನಿಭಾಯಿಸುವ ನಾಯಕಿ ಸ್ತ್ರೀಯರ ಪ್ರತಿನಿಧಿಯಾಗಿ ಕಂಡುಬರುತ್ತಾಳೆ.

'ನಿಯಮ ನಿಯಮಗಳ ನಡುವೆ' ಕತೆ 'ತಲಾಖ್' ಸಂಬಂಧಿಸಿದ ಕತೆಯಾಗಿದೆ. ತಾಯಿಯು ಪರಿಶ್ರಮದಿಂದ ಮಾಡಿಸಿದ ಕಿವಿಯ ಆಭರಣಗಳನ್ನು ಗಂಡ ಖಾದರ್ ಕೇಳಿದಾಗ ಜೋಹರಾ ಗಂಡನಿಗೆ ಕೊಡಲು ನಿರಾಕರಿಸುತ್ತಾಳೆ. ಈ ಸಣ್ಣ ಕಾರಣಕ್ಕಾಗಿಯೇ ಜೊಹರಾಳಿಗೆ ಕಾದರ್ "ತಲಾಖ್" ಕೊಡುತ್ತಾನೆ ನಂತರ ಮಕ್ಕಳನ್ನು ಬಿಟ್ಟಿರಲು ಸಾಧ್ಯವಾಗದೇ ಇರುವಾಗ ಮತ್ತೆ ಜೊಹರಳನ್ನು ಮದುವೆಯಾಗಲು ಬಯಸುತ್ತಾನೆ. ಮತ್ತೆ ಅವನನ್ನು ಮದುವೆಯಾಗಬೇಕಾದರೆ ಅವಳು ಒಜ್ಜತ್‌ಗೆ ಒಪ್ಪಿಕೊಳ್ಳಲೇಬೇಕಾಗುತ್ತದೆ. ಜೋಹರಾಳಿಗೆ ಈ ರೀತಿಯ ಸಂಬಂಧ ಬೇಡವಾದರೂ ಮಕ್ಕಳ ಭವಿಷ್ಯಕ್ಕಾದರೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಹೆರಿಗೆಯಾದ ಮೇಲೆ ಆಕೆಗೆ ಋತುಸ್ನಾನವಾಗದೇ ಇರುವುದರಿಂದ ಒಂದು ದಿನದ ಮದುವೆಗೆ ಅಡ್ಡಿಯಾಗುತ್ತದೆ ಎಂದು ನಾಟಿ ಔಷಧಿಯನ್ನು ಜೊಹಾರಳಿಗೆ ಕೊಡಿಸಲಾಗುತ್ತದೆ. ನಾಟಿ ಔಷಧಿಯಿಂದ ಅವಳಿಗೆ ರಕ್ತಸ್ರಾವ ಹೆಚ್ಚಾಗಿ ಅವಳು ಸಾವನ್ನಪ್ಪುತ್ತಾಳೆ. ಇಲ್ಲಿ ಮುಸ್ಲಿಂ ಪುರುಷ ತಲಾಖ್‌ನ್ನು ತನ್ನ ಮನಸ್ಸಿಗೆ ಬಂದಂತೆ ಬಳಸಿ ಹೆಣ್ಣನ್ನು ಹೇಗೆ ಶೋಷಿಸುತ್ತಾನೆ, ಇದರಿಂದ ಹೆಣ್ಣಿನ ಬಾಳನ್ನೇ ಬಲಿತೆಗೆದುಕೊಳ್ಳುವುದನ್ನು ಈ ಕತೆಯ ಮೂಲಕ ನೋಡಬಹುದು.

'ಗೋಡೆ' ಕತೆಯಲ್ಲಿ "ಗಂಡ ಹೆಂಡತಿಯ ನಡುವೆ ಗೋಡೆಯಾಗಿದ್ದ ತಲಾಖ್ ತಾಯಿ ಮಗಳ ಮಧ್ಯದ ಮುಳ್ಳು ಬೇಲಿಯೂ ಆಗಿತ್ತು. ಕಣ್ಣಿಲ್ಲದ ಮೆದುಳಿಲ್ಲದ ಸಮಾಜಕ್ಕೆ ಈ ಗೋಡೆ ಬೇಲಿಗಳೊಂದೂ ಅರ್ಥವೇ ಆಗುವುದಿಲ್ಲವಲ್ಲ"[೯] ಎಂದು ಹೇಳುತ್ತಾರೆ. ಹೀಗೆ ಧಾರ್ಮಿಕ ನಿಯಮಗಳು ಮಹಿಳೆಯ ಸಂದರ್ಭದಲ್ಲಿ ಎಷ್ಟೊಂದು ಕಠಿಣವಾಗಿವೆ ಹಾಗೂ ಪುರುಷರ ಸಂದರ್ಭದಲ್ಲಿ ಅನುಕೂಲಕರವಾಗಿವೆ ಎಂಬುದನ್ನು 'ಗೋಡೆ' ಕತೆಯಲ್ಲಿ ಅಭಿವ್ಯಕ್ತಗೊಂಡಿವೆ. 'ವಿಜ್ಞಾನ ಭವಿಷ್ಯ

---

೯. ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ಬೆನ್ನುಡಿ, ಸಾರಾ ಅಬೂಬಕ್ಕರ್

ನುಡಿದಾಗ' ಈ ಕತೆಯಲ್ಲಿ ಪುರುಷ ಕೇಂದ್ರಿತ ವ್ಯವಸ್ಥೆ ಗಂಡಿನ ಆಶಯಗಳೇ ಮುಖ್ಯವಾಗಿದ್ದು ಇಲ್ಲಿ ಹೆಣ್ಣು ಗಂಡು ಮಗುವನ್ನೇ ಹೆರಬೇಕೆಂಬ ಒತ್ತಡ ಎಂಥಹ ಅಪಾಯವನ್ನು ತಂದೊಡ್ಡಬಲ್ಲದು ಎಂಬುದನ್ನು ಹೆಣ್ಣನ್ನು ದುಡಿಯುವ ಯಂತ್ರವೆಂದು ಭಾವಿಸಿದಂತೆಯೇ ತಮಗೆ ಬೇಕಾದ ಗಂಡು ಮಕ್ಕಳನ್ನೇ ಹೆರುವ ಯಂತ್ರ ಎಂಬಂತೆ ಗ್ರಹಿಸಿರುವುದನ್ನು ಈ ಕತೆಯಲ್ಲಿ ನೋಡಬಹುದು.

'ಹುಟ್ಟು' ಕತೆಯಲ್ಲಿ ಬೇಗ ಮಕ್ಕಳಾಗಲಿಲ್ಲ ಎಂಬ ಕಾರಣಕ್ಕೆ ಮತ್ತೊಂದು ಮದುವೆಯಾಗಿ ಎರಡನೇ ಹೆಂಡತಿ ಹೆರಿಗೆಯಾದ ಸಂದರ್ಭದಲ್ಲಿ ಮೊದಲ ಹೆಂಡತಿಯ ಮೇಲೆ ಲೈಂಗಿಕ ದೌರ್ಜನ್ಯವನ್ನೆಸಗುವ ಗಂಡ. ತವರಿನಿಂದ ಹಣ ತರಲಿಲ್ಲವೆಂಬ ಕಾರಣಕ್ಕಾಗಿ ತವರಿನ ಸಂಬಂಧವನ್ನು ಕಡಿದು ಹಾಕುತ್ತಾನೆ. ತನ್ನ ಹೆರಿಗೆಯ ಸಂದರ್ಭದಲ್ಲಿ ಹಜ್ ಯಾತ್ರೆಯನ್ನು ಕೈಗೊಳ್ಳುವ ಗಂಡನ ಮೇಲೆ ಈ ಬಗ್ಗೆ ರೋಸಿಹೋದ ಖದೀಜಾ ಬದುಕುವ ಆಸೆಯನ್ನು ತೊರೆಯುತ್ತಾಳೆ. ಈ ಕತೆಯಲ್ಲಿ ಗಂಡಿನ ಬಗೆಗಿನ ತಿರಸ್ಕಾರ ಧ್ವನಿತವಾಗಿದೆ. 'ದೋಣಿ ಸಾಗಲಿ' ಕತೆಯ ನಾಯಕಿ ಲತಾ ಗಂಡ-ಹೆಂಡತಿಯರ ಸಂಬಂಧದ ಸೂಕ್ಷ್ಮತೆಯನ್ನು ಅರ್ಥೈಸಿಕೊಂಡು ಆ ಸಂಬಂಧಗಳು ಬಿರುಕು ಬಿಡದಂತೆ ಮುನ್ನೆಚ್ಚರಿಕೆ ವಹಿಸಿ ಗಂಡಸು ದಾರಿ ತಪ್ಪಬಹುದಾದ ನೆಲೆಯಿಂದಲೇ ದೂರವಿಡುವ ಪ್ರಜ್ಞೆ ಹೊಂದಿರುವವಳು.

ಮುಸ್ಲಿಂ ಸಮಾಜದ ಹೆಣ್ಣು ಮಕ್ಕಳನ್ನು ಹೊರಗಡೆ ಬಿಡದೆ, ಮನೆಯ ಒಳಗಿನ ಕೋಣೆಯಲ್ಲಿಯೇ ಕೂಡಿಹಾಕಿ ಅವರಿಗೆ ಹೊರಗಿನ ಪ್ರಪಂಚದ ಬಗ್ಗೆ ಅರಿವು ಮೂಡಿಸದೆ ಇದ್ದದ್ದರಿಂದ ಅಲ್ಲಿನ ಸಮಾಜದ ಹೆಣ್ಣು ಮಕ್ಕಳು ಆ ಸಮಾಜದ ಮೂಢನಂಬಿಕೆಗಳಿಗೆ ಹೇಗೆ ಬಲಿಯಾಗುತ್ತಾರೆ ಎಂಬುದನ್ನು 'ಅರಕ್ಷಿತ' ಮತ್ತು 'ನೀಲಿ ಚಿತ್ರದ ಕೆಂಪು ಬಣ್ಣ' ಕಥೆಗಳಲ್ಲಿ ನೋಡುತ್ತೇವೆ. ರಾಜಕೀಯ ವ್ಯಕ್ತಿಗಳು ಮತ್ತು ಶ್ರೀಮಂತ ವ್ಯಾಪಾರಸ್ಥರು ವ್ಯವಸ್ಥೆಯನ್ನು ಹೇಗೆ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಮಾಡಿಕೊಂಡಿದ್ದಾರೆ ಎಂಬುದನ್ನು ಬಿತ್ತಿ ಬೆಳೆದವರು ಕತೆ ಬಿಂಬಿಸುತ್ತದೆ.

'ಖೆಡ್ಡಾ' ಈ ಕತೆಯಲ್ಲಿ ಬರುವ ನಾಯಕಿಯ ತಂದೆ ಕೆಳಜಾತಿಯವರನ್ನು ಕಂಡರೆ ಸಿಡಿಮಿಡಿಗೊಳ್ಳುತ್ತಾನೆ. ಆದರೆ ಅವರ ಮಗ ಕೆಳಜಾತಿಯ ಹುಡುಗಿಯನ್ನು ತನ್ನ ತಂಗಿಯ ಸಹಕಾರದಿಂದ ಮದುವೆ ಮಾಡಿಕೊಂಡು ಮನೆಗೆ ಕರೆದುಕೊಂಡು ಬಂದಾಗ ಕೋಪಗೊಂಡ ತಂದೆ ನಂತರ ಸೊಸೆಯ ಗುಣ ಸ್ವಭಾವವನ್ನು ತಿಳಿದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ನಂತರ ತಮ್ಮ ಮಗಳನ್ನು ಸೊಸೆಯ ಸಹೋದರನಿಗೆ ಮದುವೆ ಮಾಡಿಕೊಡಲು ತೀರ್ಮಾನಿಸುತ್ತಾನೆ. 'ಬಲೆ' ಕತೆಯಲ್ಲಿ ಸ್ತ್ರೀ ಶೋಷಣೆಯನ್ನು ನೋಡಬಹುದು. ಮಗನು ಮಾಡಿದ ಪ್ರತಿಯೊಂದು ಕೆಲಸಕ್ಕೂ ತಾಯಿಯನ್ನೇ ದೂಷಣೆ ಮಾಡಿ ಮಗನು ಸಾಧನೆ ಮಾಡಿದಾಗ ಮಾತ್ರ ತನ್ನ ಮಗನೆಂದು ಹೆಮ್ಮೆಪಡುವ ತಂದೆ ಅವರ ಮಗ ಬೇರೊಂದು ಜಾತಿಯ ಹುಡುಗಿಯನ್ನು ಮದುವೆಯಾದ ವಿಷಯ ತಿಳಿದು ಕೋಪಗೊಳ್ಳುತ್ತಾರೆ. ತಂದೆಯ ಬಗ್ಗೆ ಗೌರವ ಪ್ರೀತಿ ಇದ್ದರೂ ತಂದೆಯ ಸ್ವಭಾವಕ್ಕೆ ಹೆದರಿ ಬೇರೊಂದು ಮನೆ ಮಾಡಿ ಸಂಸಾರ ಮಾಡುತ್ತಾನೆ. ಆದರೆ ಮಗನು

ರಸ್ತೆ ಅಪಘಾತದಲ್ಲಿ ಮರಣ ಹೊಂದಿದ ಸುದ್ದಿ ಕೇಳಿ ಸೊಸೆಯನ್ನು ದೂರುತ್ತಾನೆ. ಕೊನೆಗೆ ಅವಳು ಗಂಡನ ಮನೆಯವರ ಮುಪ್ಪಿನ ಕಾಲದಲ್ಲಿ ಮಾವನ ಆಶ್ರಯವಾಗಿ ನಿಲ್ಲುತ್ತಾಳೆ.

ದಾರಿಹೋಕನಿಗೆ ಮಗಳನ್ನು ಮದುವೆ ಮಾಡಿ, ಇದ್ದ ಮಗಳೊಬ್ಬಳು ಮತ್ತು ಮುದುಕಿ ಅನಾಥರಾದ ಚಿತ್ರ 'ಮರಿಯಮ್ಮನ ಅಳಿಯ' ಕತೆಯಲ್ಲಿದೆ. 'ಪಯಣ' ಕತೆಯಲ್ಲಿ ಜೀವನವೆಂಬ ರೈಲಿನಲ್ಲಿ ಪಯಣ ಬೆಳೆಸಿದ ಒಂಟಿ ಹೆಂಗಸು ಭೇಟಿಯಾಗುವ ಗಂಡಸರ ಮನೋಭಾವ ಹೇಗೆ ಇರುತ್ತದೆ ಎಂದು ಪರಿಚಯಿಸುತ್ತಾರೆ. ನಿರ್ಮಲ ಮನಸ್ಸಿನಿಂದ ಒಲಿಯುವ ಹೆಣ್ಣನ್ನು ಕಾಮದ ಬೊಂಬೆಯನ್ನಾಗಿ ಮಾಡಿಕೊಂಡು ಮಗುವೊಂದನ್ನು ಕೊಟ್ಟು ಮಧ್ಯದಲ್ಲಿಯೇ ಇಳಿದುಹೋಗುವ ಪ್ರಯಾಣಿಕನ ಚಿತ್ರ ಒಂದಾದರೆ, ಮಧ್ಯದಲ್ಲಿ ಸಿಕ್ಕಿದಾತ ಈಕೆಯನ್ನು ಇಷ್ಟಪಡುತ್ತಾನೆ ಹೊರತು ಮಗುವಿನ ಜವಾಬ್ದಾರಿ ನನಗೇಕೆ? ಎನ್ನುತ್ತಾನೆ. ಕೊನೆಯಲ್ಲಿ ಬಂದ ವ್ಯಕ್ತಿ ನಿರ್ಲಿಪ್ತನಂತೆ ಈಕೆಯಿಂದ ಏನನ್ನು ಬಯಸದೆ ಆಕೆಯ ಮತ್ತು ಮಗುವಿನ ಜವಾಬ್ದಾರಿ ತೆಗೆದುಕೊಳ್ಳಲು ಒಪ್ಪುತ್ತಾನೆ. ಆದ್ದರಿಂದ ಆತನ ಜೊತೆಗೆ ತನ್ನ ಪಯಣ ಮುಂದುವರಿಸುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆಯು ಹೇಗೆ ಇದೆ ಎಂಬುದನ್ನು ತಿಳಿದು ಸ್ತ್ರೀಯರ ದೃಷ್ಟಿಕೋನ ಬದಲಾಗಬೇಕೆಂಬ ಅಗತ್ಯವಿದೆ ಎಂದು ಕತೆ ತಿಳಿಸುತ್ತದೆ.

ಮುಸ್ಲಿಂ ಸಮುದಾಯದಲ್ಲಿ ಜಟಿಲವಾದ ಸಮಸ್ಯೆಯಾಗಿರುವ 'ತಲಾಖ್' 'ಬಹುಪತ್ನಿತ್ವ' ಪದ್ಧತಿ ಸಾರಾ ಅವರ ಬಹುಪಾಲು ಕಾದಂಬರಿಯ ವಸ್ತುವಾಗಿದೆ. ಇವರ 'ಚಂದ್ರಗಿರಿಯ ತೀರದಲ್ಲಿ' ಬೆನ್ನುಡಿಯಲ್ಲಿ ಚಂದ್ರಕಲಾ ನಂದಾವರ ಹೇಳುವಂತೆ "ಇವರ ಕಾದಂಬರಿಗಳಲ್ಲಿ ಸಾಮಾಜಿಕ ತುರ್ತು ಇತ್ತು" ಮುಸ್ಲಿಂ ಹೆಣ್ಣೊಬ್ಬಳು ಪ್ರಥಮವಾಗಿ ತಮ್ಮ ಸಮಾಜದ ವಾಸ್ತವ ಅಂಶವನ್ನು ಕಾದಂಬರಿಯ ಮೂಲಕ ಹೊರ ತಂದಿದ್ದಾರೆ. ಮುಸ್ಲಿಂ ಸಮಾಜದಲ್ಲಿರುವ ಅಮಾನುಷ ವಿಧಿಗಳ ಬಗ್ಗೆ ಲೇಖಕಿ ಪ್ರತಿಭಟಿಸುತ್ತಾ"[೧೦] ಮುಸ್ಲಿಂ ಸ್ತ್ರೀಯರ ನೋವುಗಳಿಗೆ ದನಿಯಾಗಿರುವ ಸಾರಾ ಅವರು ಒಟ್ಟು ಏಳು ಕಾದಂಬರಿಗಳನ್ನು ಬರೆದಿದ್ದಾರೆ. ಸಾರಾ ಅವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ನಾಯಕಿ ನಾದಿರಾ ತಂದೆ ಮತ್ತು ಗಂಡನ ಪ್ರತಿಷ್ಠೆಗೆ ಬಲಿಪಶುವಾಗುತ್ತಾಳೆ. 'ಸಹನಾ' ಕಾದಂಬರಿಯ ನಾಯಕಿ ನಸೀಮಾ ಬಹುಪತ್ನಿತ್ವದ ವಿರುದ್ಧ ದನಿ ಎತ್ತುತ್ತಾಳೆ. ನೀವು ರೋಗಿಯಾಗಿ ಮಲಗಿದ್ದಾಗ ನಾನು ಇನ್ನೊಬ್ಬನೊಡನೆ ಹೊರಟು ಹೋದರೆ ನಿಮಗೇನನ್ನಿಸುತ್ತೆ? ಎಂದು ತನ್ನ ಗಂಡನನ್ನು ಕೇಳುವ ಪ್ರಶ್ನೆಯಿಂದ ಸಮಾಜವನ್ನು ಎಚ್ಚರಗೊಳಿಸುವುದನ್ನು ನೋಡಬಹುದು. ಚಿಕ್ಕ ವಯಸ್ಸಿನಲ್ಲಿ ವಿವಾಹವಾಗುವ ನಸೀಮಾ ಗಂಡಿನ ಸ್ವಾರ್ಥ ಶೋಷಣೆಗೆ ಒಳಗಾಗಿ ಕೊನೆಗೆ ತನ್ನ ಬದುಕನ್ನು ಸ್ವತಂತ್ರವಾಗಿ

---

೧೦. ಚಂದ್ರಗಿರಿಯ ತೀರದಲ್ಲಿ, ಬೆನ್ನುಡಿ, ಸಾರಾ ಅಬೂಬಕ್ಕರ್

ಕಂಡುಕೊಳ್ಳುತ್ತಾಳೆ. 'ವಜ್ರಗಳು' ಕಾದಂಬರಿಯಲ್ಲಿ ಎರಡು ಮದುವೆಗಳಿಂದ ವಿವಾಹದ ಸುಖವನ್ನು ಅನುಭವಿಸುವ ಮೊದಲೇ 'ತಲಾಖ್' ಪಡೆಯುತ್ತಾಳೆ. ಪುರುಷರ ಸ್ವಾರ್ಥ, ದೌರ್ಜನ್ಯಕ್ಕೆ ಬೇಸತ್ತ ನಫೀಸಾ ಯಾರ ಹಂಗಿನಲ್ಲೂ ಇರಲು ಇಷ್ಟಪಡದೆ ಒಂದು ಮಗುವನ್ನು ದತ್ತು ತೆಗೆದುಕೊಂಡು, ತನ್ನ ಉಪಜೀವನಕ್ಕಾಗಿ ಒಂದು ಎಮ್ಮೆಯನ್ನು ಕಟ್ಟಿಕೊಂಡು ಆರ್ಥಿಕವಾಗಿ ಪ್ರಬಲವಾಗಿ ಸ್ವತಂತ್ರದಲ್ಲಿ ಸುಖವನ್ನು ಕಂಡುಕೊಳ್ಳುತ್ತಾಳೆ ಎಂಬುದನ್ನು ಸಾರಾ ಅವರು ನಿರೂಪಿಸಿದ್ದಾರೆ.

'ಕದನ ವಿರಾಮ' ಇದು ಒಂದು ಸಾಮಾಜಿಕ ಕಾದಂಬರಿಯಾಗಿದೆ. ಸಮಾಜದಲ್ಲಿರುವ ವರದಕ್ಷಿಣೆಯ ಕರಾಳಮುಖವನ್ನು ಚಿತ್ರಿಸಿದ್ದಾರೆ. ಹೆಣ್ಣು ಮಕ್ಕಳು ತಮ್ಮ ಬದುಕಿನ ನಿರ್ಧಾರವನ್ನು ದುಡುಕಿ ತೆಗೆದುಕೊಳ್ಳಬಾರದು, ಬದುಕು ಎಂಬುದು ವಿವಾಹದ ಸಂದರ್ಭದಲ್ಲಿ ನಿರ್ಧಾರವಾಗುವಂತದ್ದು ಎಂಬುದನ್ನು ಈ ಕಾದಂಬರಿಯಲ್ಲಿ ಚರ್ಚಿಸಿದ್ದಾರೆ. ಇಲ್ಲಿ ಬರುವ ನಿರ್ಮಲಾ ಪಾತ್ರದ ಮೂಲಕ ದುಡುಕು ಸ್ವಭಾವದಿಂದ ತನ್ನ ಬದುಕನ್ನು ಯಾವ ರೀತಿಯಾಗಿ ಹಿಂಸೆಗೆ ಗುರಿಮಾಡಿಕೊಳ್ಳುತ್ತಾಳೆ ಎಂಬುದನ್ನು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. 'ಪಂಜರ' ಕಾದಂಬರಿಯಲ್ಲಿ ಹಿಂದೂ ಪುರುಷನಿಂದ ಸಮಾಜದಲ್ಲಿ ಹೆಣ್ಣಿಗೆ ಆಗುವ ಮೋಸ ಗಂಡಿನ, ದರ್ಪದ ವ್ಯಕ್ತಿತ್ವವನ್ನು ತೆರೆದಿಡುತ್ತಾರೆ. ಒಟ್ಟಾರೆಯಾಗಿ ಸಾಮಾಜಿಕ ವ್ಯವಸ್ಥೆ ಹೆಣ್ಣಿನ ಬಾಳಿಗೊಂದು 'ಪಂಜರ' ಎಂಬುದನ್ನು ಈ ಕಾದಂಬರಿಯ ಮೂಲಕ ಹೇಳುತ್ತಾರೆ. 'ಸುಳಿ' ಕಾದಂಬರಿಯಲ್ಲಿ ಸಾಮಾಜಿಕ ನೆಲೆಯಲ್ಲಿ ಹಿಂದೂ-ಮುಸ್ಲಿಂ ಸಮಾಜದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಊರಿನ ಪ್ರತಿಷ್ಠಿತ ವ್ಯಕ್ತಿಗಳಿಂದ ಯುವಕರು ಕಾನೂನು ಬಾಹಿರ ಕೃತ್ಯಗಳಿಗೆ ಒಳಗಾಗಿ ತಮ್ಮ ಜೀವನವನ್ನು ಹಾಳುಮಾಡಿಕೊಳ್ಳುವ ಚಿತ್ರಣಗಳಿವೆ.

'ತಳ ಒಡೆದ ದೋಣಿಯಲ್ಲಿ' ಪ್ರಾಮಾಣಿಕ ಅಧಿಕಾರಿಯೊಬ್ಬರು ಭ್ರಷ್ಟ ಸಮಾಜದಲ್ಲಿ ಎದುರಿಸಬೇಕಾದ ಕಷ್ಟಗಳು, ರಾಜಕೀಯ ಸ್ವಾರ್ಥ, ಇವೇ ಮೊದಲಾದ ವಿಷಯಗಳ ಹಿನ್ನೆಲೆಯಲ್ಲಿ ಈ ಕಾದಂಬರಿಯಲ್ಲಿ ಅನಾವರಣಗೊಂಡಿದೆ. ಹೀಗೆ ಸಾರಾ ಅವರ ತುಡಿತ ಸಮಾಜದ ಇತರ ಸಮಸ್ಯೆಗಳ ಕಡೆಗೂ ಇರುವುದನ್ನು ಗಮನಿಸಬಹುದು.

ಸಾರಾ ಅವರು ಕಥನ ಸಾಹಿತ್ಯ ಮಾತ್ರವಲ್ಲದೇ, ಸಾಹಿತ್ಯದ ಇನ್ನುಳಿದ ಪ್ರಕಾರಗಳಲ್ಲೂ ತಮ್ಮ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಅನುವಾದ, ಪ್ರವಾಸಕಥನ, ಲೇಖನಗಳು ಇವುಗಳಲ್ಲಿ ಸಹ ತಮ್ಮ ಛಾಪನ್ನು ಮೂಡಿಸಿದ್ದಾರೆ. ಸಾರಾ ಅವರ ಪರಿಚಯ ಸಾಹಿತ್ಯಲೋಕದಲ್ಲಿ ಅಪರಿಚಿತವೇನಲ್ಲ. ಸಾರಾ ಅವರನ್ನು ಕೃತಿ ಮುಖೇನ, ಬದುಕಿನ ಮುಖೇನ ಅವರ ಕುರಿತ ಕಲ್ಪನೆ ಸಾಧ್ಯವಿದೆ. ಆದರೆ ಅವರನ್ನು ಕರಾವಳಿ ಪರಿಸರದ ಹೆಣ್ಣು ಮಗಳಾಗಿ, ಅವರ ಸೃಜನೆಯಲ್ಲೂ ಆ ಪರಿಸರ ತಂದುಕೊಟ್ಟ ಒಬ್ಬ ಧೀಮಂತ ಹೆಣ್ಣು ಮಗಳಾಗಿ ಇಲ್ಲಿ ನೋಡಲಾಗಿದೆ. ಕರಾವಳಿ ಪರಿಸರ ಅವರ ಬದುಕು-ಬರಹಗಳನ್ನು ಪ್ರಭಾವಿತಗೊಳಿಸಿರುವ ಹಿನ್ನೆಲೆಯನ್ನು ವಿವೇಚಿಸಲಾಗಿದೆ.

ಅಧ್ಯಾಯ : ೩

ಸಾರಾ ಅವರ ಕಥಾ ಸಾಹಿತ್ಯದಲ್ಲಿ ಮುಸ್ಲಿಂ ಸಮಾಜ

ಅಧ್ಯಾಯ : ೩

ಸಾರಾ ಅವರ ಕಥಾ ಸಾಹಿತ್ಯದಲ್ಲಿ ಮುಸ್ಲಿಂ ಸಮಾಜ

ಪ್ರಸ್ತುತ ಅಧ್ಯಾಯದಲ್ಲಿ ಸಾರಾ ಅವರ ಕಥನ ಸಾಹಿತ್ಯದಲ್ಲಿ ಬಿಂಬಿತವಾದ ಮುಸ್ಲಿಂ ಸಮಾಜವನ್ನು ಕುರಿತಾಗಿ ಚರ್ಚಿಸಲಾಗಿದೆ. ಇದಕ್ಕೆ ಪೂರಕವಾಗಿ ಇಬ್ರಾಹಿಂ ಸಈದ ಮತ್ತು ಡಾ.ಹಾಲತಿ ಸೋಮಶೇಖರ್ ಅವರುಗಳು ತಮ್ಮ ಪುಸ್ತಕದಲ್ಲಿ ಪ್ರಸ್ತಾಪಿಸಿದ "ಕುರಾಆನ್" ಕೆಲವು ನಿಯಮಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಇಸ್ಲಾಂ ಧರ್ಮದಲ್ಲಿ ಮಹಿಳೆಯರಿಗೂ ಪ್ರಾತಿನಿಧ್ಯ ಇದೆ ಎಂದು ಹೇಳುವಲ್ಲಿಯೂ ಅಲ್ಲಿನ ಆಚಾರ -ವಿಚಾರ, ಕುರಾಅನ್ ನಿಯಮಗಳನ್ನು ಯಥಾ ಸ್ಥಿತಿಯಾಗಿ ಗ್ರಹಿಸಿದಾಗ ಕಂಡು ಬರುವ ವೈಪರೀತ್ಯಗಳೇ ಸಾರಾ ಅವರ ಕಥನದ ವಸ್ತುವಿಷಯಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ಇಸ್ಲಾಂ ಧರ್ಮದ ಒಳಗಣ್ಣನ್ನು ಅರಿತ ಸಾರಾ ಅವರು ಅಲ್ಲಿನ ಅನ್ಯಾಯದ ವಿರುದ್ಧ ತಮ್ಮ ಕಥನ ಸಾಹಿತ್ಯದ ಮೂಲಕ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಸಾಮಾನ್ಯವಾಗಿ ಕಂಡುಬರುವ "ತಲಾಖ್" "ಪರ್ದಾ ಪದ್ಧತಿ" "ಬಹುಪತ್ನಿತ್ವ"ದಂತಹ ಸಮಸ್ಯೆಗಳನ್ನು ಅಲ್ಲಲ್ಲಿ ಪಾತ್ರಗಳ ಮುಖೇನ ಪ್ರಶ್ನಿಸಿ ಕೆಲವೊಮ್ಮೆ, ಭಾವನಾತ್ಮಕವಾಗಿ ಕಂಬನಿ ಮಿಡಿಯುವಂತೆ ನಿರೂಪಿರುವ ಕ್ರಮವನ್ನು ಇಲ್ಲಿ ವಿವೇಚಿಸಲಾಗಿದೆ.

ತಲಾಕ್ ಪದ್ಧತಿ ಮುಸ್ಲಿಂ ಸಮಾಜದ ಪ್ರಮುಖ ಸಮಸ್ಯೆಯಾಗಿದೆ. ಇದರಿಂದ ಹೆಚ್ಚು ಪೆಟ್ಟು ಬೀಳುವುದು ಮಹಿಳೆಯರ ಧ್ವನಿಯ ಮೇಲೆಯೇ. ಈ ತಲಾಕ್ ಪದ್ಧತಿಯಿಂದ ಹೆಚ್ಚು ಕಷ್ಟಕ್ಕೆ ಒಳಗಾಗುವುದು ಹೆಣ್ಣೇ. ಹೀಗಾಗಿ ಇದು ಮಹಿಳಾ ಪರ ಧ್ವನಿ ಎತ್ತಬಹುದಾದ ಸಮಸ್ಯೆಯಾದರೂ ಇಲ್ಲಿ ಸ್ತ್ರೀ ಪುರುಷರಿಬ್ಬರ ಸಮಾನ ಸಹಭಾಗಿತ್ವವಿರುವುದು ಸಾಮಾಜಿಕ ನೆಲೆಯಲ್ಲಿ ಮತ್ತು ಧಾರ್ಮಿಕ ನೆಲೆಯಲ್ಲಿಯೂ ಸರಿ ಎಂಬುದನ್ನು ಗಮನಿಸಿ ಹಾಗೂ ಈ ಪದ್ಧತಿ ಮುಸ್ಲಿಂ ಸಮುದಾಯದ ಒಂದು ಪ್ರಮುಖ ವಿಚಾರವಾಗುವ ಹಿನ್ನೆಲೆಯಲ್ಲಿ ಇದನ್ನು ಈ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ. ಇಸ್ಲಾಂ ಧರ್ಮದ ಪ್ರಕಾರ ತಲಾಕ್ ಕುರಿತಾದ ವಿಚಾರಗಳನ್ನು ಕುರ್‌ಆನ್‌ನಲ್ಲಿ ಈ ರೀತಿಯಾಗಿ ಹೇಳಲಾಗಿದೆ.

"ಖುರ್‌ಆನ್‌ನಲ್ಲಿ ತಲಾಕ್‌ನ್ನು ಮೂರು ಬೇರೆ ಬೇರೆ ಸಂದರ್ಭದಲ್ಲಿ ಹೇಳುವ ನಿಯಮವಿದೆ. ಮೂರು ತಿಂಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಹೇಳುವ ತಲಾಕ್ ಎಂದರೆ ಖುರ್‌ಆನ್ ಒದಗಿಸಿದ ಮೂರು ಅವಕಾಶಗಳು ಎಂದರ್ಥ. ಈ ಅವಧಿಯಲ್ಲಿ ಗಂಡ-ಹೆಂಡತಿ ಕೂಡಿಯೇ ವಾಸಿಸುತ್ತಿರಬೇಕು. ಈ ಸಂಕ್ರಮಣಾವಸ್ಥೆಯಲ್ಲಿ ಗಂಡ-ಹೆಂಡತಿಯೊಂದಿಗೆ ಸಂಪರ್ಕ ಪಡೆದರೆ ಆ ತಲಾಕ್ ಮುರಿದು ಬೀಳುತ್ತದೆ"[೧] ಎಂದು ಹೇಳಿದರೆ ಮುಸ್ಲಿಂ ಸಮಾಜದ ಪುರುಷರು ತಮ್ಮ ಸ್ವಾರ್ಥಕ್ಕಾಗಿ ತಲಾಕನ್ನು ಏಕಕಾಲಕ್ಕೆ ಮೂರು ಸಾರಿ ಹೇಳಿಬಿಡುವುದನ್ನು ಸಾರಾ ಅವರ ಕಥನ ಸಾಹಿತ್ಯದ ಮೂಲಕ ತಿಳಿಯಬಹುದು. ಹೀಗೆ ಮುಸ್ಲಿಂ ಸಮುದಾಯದ ಪುರುಷರು ಕುರ್‌ಆನ್‌ನನ್ನೇ ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಂಡಿದ್ದಾರೆ ಎಂಬುದನ್ನು ತಿಳಿಯಬಹುದು. ಸಾರಾ ಅವರ ಇಡೀ ಕಥನ ಸಾಹಿತ್ಯದ ಬಹ್ವಂಶ ತಲಾಕ್ ಸಮಸ್ಯೆಯನ್ನು ಆಧರಿಸುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ. ತಲಾಖ್‌ನ ವೈವಿಧ್ಯಮಯ ರೂಪವನ್ನು ಅವರ ಸಾಹಿತ್ಯ ಒಳಗೊಂಡಿದೆ. ತಲಾಕನ ಬಹುಮುಖೀ ಅಧ್ಯಯನ ಸಾಧ್ಯತೆ ಇಲ್ಲಿದೆ. ಭಾವನಾತ್ಮಕ ಮತ್ತು ಅಲ್ಲಲ್ಲಿ ಸಿಡಿದೇಳುವ, ಪ್ರತಿಭಟನಾ ಸ್ವರೂಪದ ನೆಲೆಯಲ್ಲಿ ನಿಕೃಷ್ಟಕ್ಕೆ ಒಡ್ಡುವ ವಿಶೇಷಣಾತ್ಮಕ ನೆಲೆಯಲ್ಲಿ ಇದನ್ನು ಗಮನಿಸಬಹುದಾಗಿದೆ. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯಲ್ಲಿ ನಾದಿರಾ ಹಸನಾದ ಬದುಕಿನೊಡನೆ ರಶೀದ್‌ನೊಂದಿಗೆ ಬಾಳಬೇಕಾದವಳು. ತಲಾಖ್ ಎಂಬ ದುರಂತದ ಮಡುವಿನಲ್ಲಿ ಬೀಳುವ ಸನ್ನಿವೇಶವನ್ನು ಕಾಣಬಹುದಾಗಿದೆ. ಸಂಪರ್ಕದ ಕೊರತೆಯಿಂದಾಗಿ ನಾದಿರಾ ತನ್ನ ಅಭಿಪ್ರಾಯವನ್ನು ಗಂಡನಿಗೆ ತಿಳಿಸಲು ಅಸಹಾಯಕಳಾಗುತ್ತಾಳೆ. ಇದರ ಸದುಪಯೋಗ ಪಡೆದ ತಂದೆ ತನ್ನ ಸ್ವಾರ್ಥಮಯ ಸ್ವಭಾವದಿಂದಾಗಿ ಮಗಳ ಬಾಳಿಗೆ ಕೊಳ್ಳಿ ಇಡುವಂತಾಗುತ್ತದೆ. ಹಾಗಾಗಿ ತಂದೆಯೇ ಸ್ವತಃ ಮಗಳ ತಲಾಖ್‌ಗಾಗಿ ಮುಗಿಬೀಳುತ್ತಾನೆ. ರಶೀದ್ ವ್ಯವಸ್ಥೆಯ ಸಂಚನ್ನು ಅರಿಯದೇ ಹಲವಾರು ಬಾರಿ ನಾದಿರಳನ್ನು ಭೇಟಿಯಾಗಲು ಹಾತೊರೆದು ಅಸಹಾಯಕನಾಗಿ ತನ್ನ ಮಾವನ ಮಾತಿಗೆ ಕಟ್ಟುಬಿದ್ದು ತಲಾಖ್ ಕೊಡುತ್ತಾನೆ. ನಂತರ ತಪ್ಪಿನ ಅರಿವಿನಿಂದಾಗಿ ಇಬ್ಬರೂ ಕೂಡಿಬಾಳುವ ನಿರ್ಧಾರ ಮಾಡುತ್ತಾರಾದರೂ ಧರ್ಮದ ಕಟ್ಟಳೆಯಿಂದಾಗಿ ಅದು ಸಾಧ್ಯವಾಗುವುದಿಲ್ಲ. ಒಮ್ಮೆ ತಲಾಖ್ ನೀಡಿದರೆ ಧರ್ಮದ ನಿಯಮದಂತೆ ಒಂದು ದಿನವಾದರೂ ಇನ್ನೊಬ್ಬರೊಡನೆ ಸಂಸಾರ ಮಾಡಬೇಕೆಂಬ ನಿಯಮ ನಾದಿರಳ ಮನಸ್ಸನ್ನು ಅಲ್ಲೋಲಕಲ್ಲೋಲವಾಗಿಸುತ್ತದೆ. ಈ ರೀತಿಯ ನಿಬಂಧನೆಯನ್ನು ಒಪ್ಪಿಕೊಳ್ಳಲು ಮನಸ್ಸಾಗದೇ ಪಾವಿತ್ರ್ಯದ ನೆಲೆಯಲ್ಲಿ ನಾದಿರಾ ಆತ್ಮಹತ್ಯೆಗೆ ಸಿದ್ಧಳಾಗುತ್ತಾಳೆ. ತಲಾಖ್ ಅವರಿಬ್ಬರನ್ನು ಶಾಶ್ವತವಾಗಿ ದೂರಮಾಡುತ್ತದೆ. ಅಲ್ಲದೇ ಅನ್ಯಾಯವಾಗಿ ಒಂದು ಜೀವಬಲಿ ತೆಗೆದುಕೊಳ್ಳುತ್ತದೆ ಎಂಬುದನ್ನು ಭಾವನಾತ್ಮಕ ನೆಲೆಯಲ್ಲಿ ಸಾರಾ ಅವರು ತಿಳಿಸಿಕೊಟ್ಟಿದ್ದಾರೆ. ಇಲ್ಲಿ ಮನೆ ಬಿಟ್ಟು ಒಬ್ಬಳೇ

---

೧. ಪು.ಸಂ. ೪೨, ಹೊಸದಿಕ್ಕು, ಡಾ.ಬಸವರಾಜ ಸಬರದ

ಹೋಗಲು ಸಾಧ್ಯವಿಲ್ಲದ ಪರಿಸ್ಥಿತಿಯಿಂದಾಗಿ ಅಭಿಪ್ರಾಯ ತಿಳಿಸಲು ಸಾಧ್ಯವಾಗದೇ ಹೋಗುವುದು ದೂರದಲ್ಲಿ ಹೆಂಡತಿಯನ್ನು ನೋಡಿದವನು ನೇರವಾಗಿ ಅವಳೊಡನೆ ಮಾತನಾಡಲು ಸಾಧ್ಯವಾಗದಿರುವುದು. ಪರದೆಯ ಹಿಂದೆಯೆ ಬದುಕನ್ನು ನಿರ್ಧರಿಸಬೇಕಾದ ಅತಂತ್ರಸ್ಥಿತಿ ಇವುಗಳೆಲ್ಲ ಗಮನಾರ್ಹ ಸಂಗತಿಗಳೆನಿಸಿವೆ. ಮೂರು ಸಲ ಬೇರೆ ಬೇರೆ ಸಮಾಯಾವಕಾಶಗಳಲ್ಲಿ ಹೇಳಬೇಕಾದ ತಲಾಖ್ ಒಂದೇ ಸಂದರ್ಭದಲ್ಲಿ ಮೂರು ಸಲ ಹೇಳುವ ದುರಂತವನ್ನು ಸಾರಾ ಅವರು ಪ್ರಶ್ನಿಸಿ ಹಾಗೇ ಒಮ್ಮೆಲೆ ಹೇಳಿದರೆ ಆಗುವ ಅನಾಹುತಗಳ ಸರಮಾಲೆಯ ಚಿತ್ರಣ ಕೊಡಲು ತಮ್ಮ ಕಥನ ಸಾಹಿತ್ಯದ ವಿವಿಧ ಮುತ್ತುಗಳೆಂಬ ಕಥೆಗಳ ಮೂಲಕ ಜೋಡಿಸಿಕೊಟ್ಟಿದ್ದಾರೆ.

"ಆದರೆ ಅಲಿಯೊಡನೆ ಒಂದು ರಾತ್ರಿಯನ್ನು ಕಳೆಯುವುದು ಅವಳಿಗೆ ಅಸಹ್ಯವೆನಿಸುತ್ತದೆ. ಇದಕ್ಕೆ ಕಾರಣ ಜಿಗುಪ್ಸೆ ಹುಟ್ಟಿಸುವ ಅಲಿಯ ಕುರೂಪವೊಂದೇ ಕಾರಣವಲ್ಲದೆ ಅವಳಲ್ಲಿ ಜಾಗೃತವಾಗುವ ನೈತಿಕ ಪ್ರಜ್ಞೆಯೂ ಕಾರಣವಾಗಿದೆ"[೨] ಎಂದು ಜಿ.ಎಸ್.ಆಮೂರ ಅವರು ಅಭಿಪ್ರಾಯ ಪಡುತ್ತಾರೆ.

ಇಸ್ಲಾಂ ಧರ್ಮದಲ್ಲಿ ಮದುವೆಯ ಮೊದಲು ಗಂಡಸರು ಹುಡುಗಿಯನ್ನು ನೋಡುವ ಪದ್ಧತಿ ಇಲ್ಲವಾದ ಕಾರಣದಿಂದ "ವಜ್ರಗಳು" ಕಾದಂಬರಿಯಲ್ಲಿ ಖುರ್‌ಆನ್ ಸಮತ ತಲಾಖ್ ಅನ್ನು ಎಂಥಾ ಕ್ರೂರ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಈ ಕಾದಂಬರಿಯಲ್ಲಿ ಚರ್ಚಿಸಲಾಗಿದೆ. ಹಳ್ಳಿಯ ಮುಗ್ಧ ಹುಡುಗಿ ನಫೀಸಾ ತನ್ನನ್ನು ವಿವಾಹವಾಗುವ ಪುರುಷನ ಬಗ್ಗೆ ಯಾವುದೇ ರೀತಿಯ ಮಹತ್ವಾಕಾಂಕ್ಷೆ ಇಲ್ಲದಿದ್ದರೂ ತನ್ನನ್ನು ಪ್ರೀತಿಸುವ ಗಂಡ ಸಿಕ್ಕರೇ ಸಾಕು ತನ್ನ ಬಾಳು ಸಾರ್ಥಕ ಎಂದು ತಿಳಿದಿದ್ದವಳು. ಆದರೆ ಇವಳನ್ನು ವಿವಾಹವಾಗುವ ಪುರುಷ ಪಟ್ಟಣದ ಶೋಕಿಗೆ ಮರುಳಾಗಿ ಹಳ್ಳಿಯ ಹುಡುಗಿ ಮತ್ತು ಬಣ್ಣದಲ್ಲಿ ಕಪ್ಪು ಎಂಬ ಕಾರಣಕ್ಕೆ "ತಲಾಖ್" ಕೊಡುತ್ತಾನೆ. ನಂತರ ಪುರುಷ ಎಂಬ ಕಾರಣಕ್ಕೆ ತಾಯಿ ಯಾವ ತ್ಯಾಗವೂ ಲೆಕ್ಕಕ್ಕೆ ಬಾರದೇ ಇಸ್ಲಾಂ ಧರ್ಮದಲ್ಲಿ ಪುರುಷ ಎಂಬ ಕಾರಣಕ್ಕೆ ತಾಯಿ ಮಗನನ್ನು ಈ ತಲಾಖ್ ಪದ್ಧತಿ ದೂರ ಮಾಡುತ್ತದೆ. ಹೀಗೆ ತಲಾಖ್ ಪಡೆದ ನಫೀಸಾ ತವರು ಮನೆಯಲ್ಲಿ ಅಣ್ಣ ಅತ್ತಿಗೆಯ ನಿಂದನೆಗೆ ಗುರಿಯಾಗಬೇಕಾಗುತ್ತದೆ. ನಫೀಸಾ ಅತ್ತಿಗೆ ಸಮಯ ಸಿಕ್ಕಾಗಲೆಲ್ಲಾ ಗಂಡ ಬಿಟ್ಟವಳೆಂದು ಹಂಗಿಸುತ್ತಿದ್ದರಿಂದ ಬೇಸತ್ತ ನಫೀಸಾ "ತವರು ಮನೆ ಸ್ವರ್ಗ ಅಲ್ಲದಿದ್ದರು ನರಕವೂ ಅಲ್ಲ ಎಂದುಕೊಂಡಿದ್ದವಳಿಗೆ ಅದು ನರಕವೂ ಆಗಿ ತನ್ನ ಸ್ಥಿತಿ ತೀರಾ ಶೋಚನಿಯವಾಗಲೂಬಹುದು ಎಂದು ಮನವರಿಕೆಯಾದಾಗ"[೩] ಎರಡನೇ ವಿವಾಹಕ್ಕೆ ಸಿದ್ಧಳಾಗಿ ಇಲ್ಲಿ ತನ್ನ ಜೀವನವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಉಸ್ಮಾನನ ಹಿರಿಯ ಮಗ ನಫೀಸಾ

---

೨. ಪು.ಸಂ. ೩೬೯, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಡಾ.ಜಿ.ಎಸ್.ಆಮೂರ

೩. ಪು.ಸಂ. ೧೧೦, ವಜ್ರಗಳು, ಸಾರಾ ಅಬೂಬಕ್ಕರ್

ತಂದೆಯ ಆಸ್ತಿಯಲ್ಲಿ ಹಕ್ಕು ಪಡೆಯುತ್ತಾಳೆ. ಎಂಬ ಕಾರಣಕ್ಕೆ ನಫೀಸಾಳನ್ನು ದ್ವೇಷಿಸಿ ಉಪಾಯದಿಂದ ತವರು ಮನೆಗೆ ಕಳುಹಿಸುತ್ತಾನೆ. ಉಸ್ಮಾನರ ಹೆಬ್ಬೆರಳಿನ ಗುರುತನ್ನು ಮೋಸದಿಂದ ಪಡೆದು ನಫೀಸಾಳಿಗೆ ತಲಾಖ್ ಕಳುಹಿಸುತ್ತಾನೆ. ಹೀಗೆ ಎರಡು "ತಲಾಖ್ ನಿಂದ ವಿವಾಹದ ಸುಖವನ್ನು ಪಡೆಯದೆಯೂ ಎರಡು ತಲಾಖ್‌ಗಳಿಂದ ಜಜ್ಜಿ ಹೋದ ಜೀವನದಲ್ಲಿ ಹೊತ್ತು-ಹೆತ್ತು-ಸಾಕಿ, ದುಡಿದ ನಫೀಸಾ ಬದುಕಿನ ಅಪರಾಹ್ನದಲ್ಲಿ ಎಸೆಯಲ್ಪಡುತ್ತಾಳೆ. ಅವಳ ಯಾವ ತ್ಯಾಗವು ಯಾವ ದುಡಿಮೆಯೂ ಅವಳಿಗೆ ನೆರಳು ನೀಡುವುದಿಲ್ಲ. ಪುರುಷ ಪ್ರಧಾನವಾದ ವ್ಯವಸ್ಥೆಯ ಕ್ರೌರ್ಯ ಹೆಂಗಸಿಗೆ ಅನ್ಯಾಯ ಮಾಡುವಾಗ ಒಬ್ಬಿಬ್ಬರು ಪುರುಷರ ಪ್ರೀತಿ ಅನುಕಂಪ ಕೂಡ ಹೆಣ್ಣನ್ನು ಉಳಿಸುವುದಿಲ್ಲವೆನ್ನುವುದೂ ನಫೀಸಾಳ ಬದುಕಿನಲ್ಲಿ ಸೂಚಿತವಾಗಿದೆ."[೪] ಕೊನೆಗೆ ನಫೀಸಾ ತನ್ನ ಬದುಕನ್ನು ಆ ಯಾರ ಹಂಗಿನಲ್ಲಿ ಬದುಕಲು ಇಷ್ಟಪಡದೇ ಸಮಾಜದ ನಿರ್ಲಕ್ಷ್ಯಕ್ಕೆ ಒಳಗಾದ ಹೆಣ್ಣು ಮಗುವೊಂದನ್ನು ದತ್ತು ತೆಗೆದುಕೊಂಡು ತನ್ನ ಉಪಜೀವನಕ್ಕೆ ಹೈನುಗಾರಿಕೆಯನ್ನು ಪ್ರಾರಂಭಿಸಿ ಸ್ವತಂತ್ರವಾಗುವುದರಿಂದ ಮಹಿಳಾ ಸಬಲೀಕರಣದ ಬೆಳಕು ಕಂಡಂತಾಗುತ್ತದೆ. ತಲಾಖ್ ಪದ್ಧತಿ ಈ ಸಮಾಜದ ಮಹಿಳೆಗೆ ಹೇಗೆ ಶಾಪವಾಗಿದೆ ಎಂಬುದನ್ನು ಅವರ ಇನ್ನುಳಿದ ಕಥೆಗಳು ವಿವರಿಸುತ್ತವೆ.

"ಪ್ರವಾಹ-ಸುಳಿ" ಕಾದಂಬರಿ ಕೂಡ ಈ ಸಮಾಜದ ಮಹಿಳೆಗೆ ತಲಾಖ್ ಹೇಗೆ ಶಾಪವಾಗಿದೆ ಎಂಬುದನ್ನು ಅವರ ಇನ್ನುಳಿದ ಕಾದಂಬರಿಗಳಂತೆ ಈ ಕಾದಂಬರಿಯ ವಸ್ತುವೂ ವಿಷಯವಾಗಿದೆ. ಇಸ್ಲಾಂ ಸಮಾಜದ ಪುರುಷರು ತಲಾಖ್ ಎಂಬ ಅಸ್ತ್ರದಿಂದ ಆ ಸಮಾಜದ ಮಹಿಳೆಯರನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಹೇಗೆ ಶೋಷಣೆ ಮಾಡುತ್ತಾರೆ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಮಮ್ಮುಟಿ ಮನೆಯ ಅಡಿಗೆಯ ಕೆಲಸದವಳಾದ ಅಚ್ಚಮ್ಮಳು ತಲಾಖ್ ಪಡೆದ ಸ್ತ್ರೀ. ತಲಾಖ್ ಪಡೆದ ಸ್ತ್ರೀಯರನ್ನು ಆ ಸಮಾಜದ ಪುರುಷ ತಮ್ಮ ಸ್ವಾರ್ಥಕ್ಕಾಗಿ ಅವಳು ಮಾಡಿದ ಒಂದು ಸಣ್ಣ ಕಳ್ಳತನವನ್ನೇ ತನ್ನ ಅಸ್ತ್ರವಾಗಿ ಬಳಸಿಕೊಂಡು ಅಚ್ಚಮ್ಮಳನ್ನು ದೈಹಿಕವಾಗಿ ಮಾನಸಿಕವಾಗಿ ಬಳಸಿಕೊಳ್ಳುತ್ತಾರೆ. ಇಲ್ಲಿ ಅಚ್ಚಮ್ಮ ತನ್ನ ಬದುಕಿನ ಆಶ್ರಯಕ್ಕಾಗಿ ಅನೈತಿಕ ಸಂಬಂಧವನ್ನು ಒಪ್ಪಿಕೊಳ್ಳುವುದನ್ನು ಕಾಣುತ್ತೇವೆ. ಹೀಗೆ ಸಮಾಜದಲ್ಲಿರುವ ಅವಕಾಶವಾದಿಗಳಿಂದ ದೂರವಿರಬೇಕು ಎಂಬುದನ್ನು ಕಂಜಮ್ಮಳ ಮೂಲಕ ಲೇಖಕಿ ಹೇಳಿರುವುದನ್ನು ಗ್ರಹಿಸಬಹುದು.

"ಧ್ವನಿಯಿಲ್ಲದ ನೋವುಗಳು" ಬಡತನದ ಕಾರಣದಿಂದಾಗಿ ಜರೀನಾ ಹುಟ್ಟು ಸೋಮಾರಿ ಮುಸ್ತಾಫನನ್ನು ವಿವಾಹವಾಗಬೇಕಾಗುತ್ತದೆ. ಅತ್ತೆ ಮಾವಂದಿರಿಗೆ ಭಾರವಾಗಿ ತವರು ಮನೆ ಸೇರಬೇಕಾಗುತ್ತದೆ. ಇಲ್ಲಿಯೇ ತಳವೂರುವ ಸೂಚನೆ ಕಂಡಾಗ ಜರೀನಾಳ ಅಣ್ಣ ಕೊಲ್ಲಿರಾಷ್ಟ್ರಕ್ಕೆ

---

೪. ಪು.ಸಂ. ೮, ಮಹಿಳೆ ಸಾಹಿತ್ಯ ಸಮಾಜ, ವಿಜಯಾ ದಬ್ಬೆ

ಹಣಗಳಿಸಲು ಕಳುಹಿಸುತ್ತಾನೆ. ನಂತರ ತನಗೆ ಸಹಾಯ ಮಾಡಿದವರಿಗೆ ಸ್ವಲ್ಪ ಸಮಯದ ನಂತರ ಜರೀನಾಳ ತವರಿಗೆ ಹಣ ಕಳುಹಿಸುತ್ತ ಇತ್ತ ಜರೀನಾ ತನ್ನ ಬದುಕಿನ ಬಗ್ಗೆ ಕನಸು ಕಾಣುತ್ತಿರುವಾಗಲೇ ಮುಸ್ತಾಫ ವಿನಾಕಾರಣ ಜರೀನಾಗೆ ತಲಾಖ್ ಕಳುಹಿಸುತ್ತಾನೆ. ಹೀಗೆ ತಲಾಖ್‌ನಿಂದ ನೊಂದ ಮಹಿಳೆಯರು ಎಲ್ಲಿಯೂ ಪ್ರತಿಭಟಿಸಲಾರದ ಸ್ಥಿತಿಯನ್ನು ಸಾರಾ ಅವರು ಈ ಕತೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಇಸ್ಲಾಂ ಧರ್ಮದಲ್ಲಿ ತಲಾಖ್ ಎಂಥಹ ಕ್ಷುಲ್ಲಕ ಕಾರಣಕ್ಕಾದರೂ ಆಗಬಹುದು ಎಂಬುದನ್ನು "ನಿಯಮ ನಿಯಮಗಳ ನಡುವೆ" ಕತೆ ಕಟ್ಟಿಕೊಡುತ್ತದೆ. ತಾಯಿ ಮಗಳು ಬೇರೆಯವರ ಮನೆಕೆಲಸ ಮಾಡಿ ಬಂದ ಹಣದಿಂದ ಜೋಹಾರಳ ಕಿವಿಗೆ ಆಭರಣ ಮಾಡಿಸಿದರೂ ಇದನ್ನು ಜೋಹರಳ ಗಂಡ ಕಾದರ್ ಕೇಳಿದಾಗ ತನ್ನ ತಾಯಿಯ ಅನುಮತಿ ಪಡೆದು ಕೊಡುವುದಾಗಿ ಹೇಳಿದ ಕಾರಣಕ್ಕಾಗಿ ಕಾದರ್ ಜೋಹರಳಿಗೆ "ತಲಾಖ್" ಕೊಡುತ್ತಾನೆ. ನಂತರ ತನ್ನ ಮಕ್ಕಳನ್ನು ಬಿಟ್ಟಿರಲು ಸಾಧ್ಯವಾಗದೇ ಇರುವುದರಿಂದ ಜೊಹರಳನ್ನು ವಿವಾಹವಾಗಲು ಆಸಕ್ತಿ ವಹಿಸುತ್ತಾನೆ. ಆದರೆ ಇಸ್ಲಾಂ ಧರ್ಮದ ಪ್ರಕಾರ ಒಮ್ಮೆ ತಲಾಖ್ ಪಡೆದ ಹೆಣ್ಣು ಮತ್ತೆ ಮೊದಲಿನ ಗಂಡನ ಜೊತೆಗೆ ವಿವಾಹವಾಗಬೇಕಾದರೆ ಒಂದು ದಿನದ ಮಟ್ಟಿಗಾದರೂ ಬೇರೊಬ್ಬನನ್ನು ವಿವಾಹವಾಗಿ ಆತನಿಂದ ತಲಾಖ್ ಪಡೆದು ಮೂರು ತಿಂಗಳು ಕಾದು ಅವಳಿಗೆ ಗರ್ಭವೇನಾದರೂ ನಿಂತಿದೆಯೇ ಎಂದು ತಿಳಿದು ನಂತರ ಅವಳು ಮೊದಲಿನ ಗಂಡನ ಜೊತೆಗೆ ವಿವಾಹವಾಗಬಹುದು ಎಂದಿದೆ. ಆದರೆ ಇಂತಹ ಸಂಬಂಧ ಜೋಹರಳಿಗೆ ಬೇಡವಾದರೂ ಮಕ್ಕಳ ಭವಿಷ್ಯಕ್ಕಾಗಿ ಒಪ್ಪಿಕೊಳ್ಳುತ್ತಾಳೆ. ಆದರೆ ಹೆರಿಗೆಯಾದ ನಂತರ ಋತುಸ್ನಾನವಾಗದೇ ಇರುವುದರಿಂದ ಒಂದು ದಿನದ ಮದುವೆಗೆ ಅಡ್ಡಿಯಾಗುತ್ತದೆ ಎಂದು ತಿಳಿದು ನಾಟಿ ಔಷಧಿ ಕೊಡಿಸಿದಾಗ ರಕ್ತಸ್ರಾವ ಹೆಚ್ಚಾಗಿ ಸಾವನ್ನಪ್ಪುತ್ತಾಳೆ. ಹೀಗೆ ಇಂತಹ ಇಸ್ಲಾಂ ಧರ್ಮದ ನಿಯಮಗಳಿಂದ ಹಾಗೂ ಪುರುಷರ ಸ್ವಾರ್ಥದಿಂದ ತಲಾಖ್ ಹೆಣ್ಣು ಮಕ್ಕಳ ಜೀವನವೇ ಬಲಿಯಾಗುತ್ತದೆ.

ಇಸ್ಲಾಂ ಸಮಾಜದ ಧಾರ್ಮಿಕ ನಿಯಮಗಳು ಮಹಿಳೆಯರ ವಿಷಯದಲ್ಲಿ ಕಠಿಣವಾಗಿದೆ ಮತ್ತು ಪುರುಷರ ವಿಷಯದಲ್ಲಿ ಅನುಕೂಲವಾಗಿರುವುದನ್ನು 'ಗೋಡೆ' ಕತೆಯಲ್ಲಿ ಚರ್ಚಿಸಲಾಗಿದೆ. ತಾಯಿಯ ಮಾತನ್ನು ಕೇಳಿ ಶಾಫಿ ಫರೀದಾಗೆ ತಲಾಖ್ ನೀಡುತ್ತಾನೆ. ಇದರಿಂದ ಫರೀದಾ ತನ್ನ ಮಗಳನ್ನು ಹನ್ನೆರಡು ವರ್ಷದ ನಂತರ ಶಫಿಗೆ ಒಪ್ಪಿಸಬೇಕಾಗುತ್ತದೆ. ಇವಳ ಸಾಕಿ ಬೆಳೆಸಿದ ಮಗಳ ಮದುವೆಗೂ ಫರೀದಾ ಹೋಗುವಂತಿಲ್ಲ. ಈ ತಲಾಖ್ ನಿಯಮದಿಂದಾಗಿ ಫರೀದಾ ಶಫಿಯ ಮನೆಗೆ ಹೋಗುವಂತಿಲ್ಲದ ಕಾರಣದಿಂದ ಇಲ್ಲಿ ತಾಯಿ ಮಗಳ ಮಧ್ಯ ಈ ತಲಾಖ್ ಮುಳ್ಳು ಬೇಲಿಯಾಗುತ್ತದೆ. ನಂತರ ಜಮೀಲಾ ತನ್ನ ಹೆರಿಗೆಯ ನೆಪದಲ್ಲಾದರೂ ತನ್ನ ತಾಯಿಯನ್ನು ತನ್ನ ತಂದೆಯ ಮನೆಗೆ ಕರೆಯಿಸಿಕೊಂಡು ಅವರ ಇಬ್ಬರನ್ನು ಒಂದು ಮಾಡಲು ಪ್ರಯತ್ನಿಸಿ ವಿಫುಲಳಾಗುತ್ತಾಳೆ. ಹೀಗೆ ಫರಿದಾ ಕೊನೆಗೂ ತನ್ನ ಗಂಡನ ಸ್ವಭಾವ ತಿಳಿದು ನಿರಾಸಕ್ತಳಾಗುತ್ತಾಳೆ. ಹೀಗೆ ಪುರುಷರು ಇಸ್ಲಾಂ ಧಾರ್ಮಿಕ ನಿಯಮಗಳನ್ನು ತಮ್ಮ

ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಂಡು ಸ್ತ್ರೀಯರನ್ನು ಶೋಷಣೆ ಮಾಡುವುದನ್ನು ಕಾಣಬಹುದಾಗಿದೆ 'ಬಿರುಗಾಳಿ' ಕತೆಯ ನಾಯಕಿ ಫರೀದಾ ತಲಾಖ್ ಹೊಂದಿದ ಮಹಿಳೆ ತನ್ನ ಕುಟುಂಬವನ್ನು ನಿರ್ವಹಿಸುವ ಸಲುವಾಗಿ ಶ್ರೀಮಂತರ ಮನೆಯಲ್ಲಿ ಕೆಲಸ ಮಾಡುತ್ತಾಳೆ. ಹಾಗೆ ತನ್ನ ಮಕ್ಕಳಿಬ್ಬರು ಹಡಗಿನಲ್ಲಿ ಕೆಲಸ ಮಾಡುತ್ತಿದ್ದರಿಂದ ಒಂದು ಸಲ ಸಮುದ್ರದಲ್ಲಿ ಹಡಗು ಮುಳುಗಿ ತನ್ನ ಮಕ್ಕಳನ್ನು ಕಳೆದುಕೊಳ್ಳುತ್ತಾಳೆ. ಅವಳ ಬದುಕು ಇದರಿಂದ ಬಿರುಗಾಳಿಯಾಗುತ್ತದೆ. ಕೊನೆಗೆ ಶ್ರೀಮಂತರು ಫರೀದಾಗೆ ಪರಿಹಾರ ಧನವನ್ನು ಕೊಡದೇ ಸತಾಯಿಸುತ್ತಾರೆ. ಹೀಗೆ ತಲಾಖ್ ಪಡೆದ ಮಹಿಳೆಯನ್ನು ತಲಾತಲಾಂತರಗಳಿಂದಲೂ ಒಂದಲ್ಲ ಒಂದು ರೀತಿಯಾಗಿ ಶೋಷಣೆ ಮಾಡುತ್ತಾ ಬಂದಿರುವುದನ್ನು ಬಿರುಗಾಳಿ ಕತೆ ಪ್ರತಿಬಿಂಬಿಸುತ್ತದೆ. ಹೀಗೆ ತಲಾಖ್ ನಿಯಮದಿಂದಾಗಿ ಮಹಿಳೆಯರು ತಮ್ಮ ಬಾಳನ್ನೇ ಕಳೆದುಕೊಂಡರೆ, ಬಹುಪತ್ನಿತ್ವ ಪದ್ಧತಿಯು ಆ ಸಮಾಜದ ಹೆಣ್ಣು ಮಕ್ಕಳನ್ನು ಮತ್ತೊಂದು ರೀತಿಯಾಗಿ ಶೋಷಣೆ ಮಾಡುವುದನ್ನು ಸಾರಾ ಅವರ ಕಥನ ಸಾಹಿತ್ಯದಲ್ಲಿ ಗುರುತಿಸಬಹುದು. ಇಸ್ಲಾಂ ಧರ್ಮ ಬಹುಪತ್ನಿತ್ವಕ್ಕೆ ಅವಕಾಶ ನೀಡಿದೆ. ಒಬ್ಬ ಪುರುಷನಿಗೆ ಒಂದಕ್ಕಿಂತ ಹೆಚ್ಚು ಪತ್ನಿಯರ ಅವಶ್ಯಕತೆಯಿದೆ ಮತ್ತು ಎರಡನೆಯ ವಿವಾಹವನ್ನು ಬಯಸುವುದರಲ್ಲಿ ಪ್ರಾಮಾಣಿಕನು ಹಾಗೂ ಮೊದಲನೆಯ ಪತ್ನಿಗೆ ನೋವುಂಟು ಮಾಡುವುದು ಅವರ ಉದ್ದೇಶವಲ್ಲವೆಂದಾದರೆ ಅವನಿಗೆ ಗರಿಷ್ಠ ನಾಲ್ಕು ಪತ್ನಿಯರನ್ನು ಹೊಂದುವ ಅನುಮತಿ ನೀಡಲಾಗಿದೆ. "ಸ್ತ್ರೀಯರ ಪೈಕಿ ನೀವು ಮೆಚ್ಚಿದ ಇಬ್ಬರನ್ನೋ, ಮೂವರನ್ನೋ, ನಾಲ್ವರನ್ನೋ ವಿವಾಹ ಮಾಡಿಕೊಳ್ಳಿರಿ"[೫] (ಅನ್ನಿಸಾ ೪-೩) ಎನ್ನುತ್ತದೆ. ಇಸ್ಲಾಂಮಿನ ಧಾರ್ಮಿಕ ನಿಯಮ ಸಾರಾ ಅವರು ತಮ್ಮ ಕಥನ ಸಾಹಿತ್ಯದ ಮೂಲಕ ಈ ಬಹುಪತ್ನಿತ್ವ ಇಸ್ಲಾಂ ಧರ್ಮದ ಸಮ್ಮತವಿದ್ದರೂ ಈ ಪದ್ಧತಿಯಿಂದ ಸ್ತ್ರೀಯರ ಮನಸ್ಸಿನಲ್ಲಿ ಉಂಟಾಗುವ ನೋವು ಹತಾಶೆಯನ್ನು ತಮ್ಮ ಕಥನ ಸಾಹಿತ್ಯದಲ್ಲಿ ಬಿಂಬಿಸಿದ್ದಾರೆ. 'ಸಹನಾ' ಈ ಕಾದಂಬರಿಯ ನಾಯಕಿ "ನಸೀಮಾ ಪುಸ್ತಕದ ಶೀರ್ಷಿಕೆಯಾದ ಸಹನಾ ಆಗದೆ ಆ ಸಹನೆಯನ್ನು ಮೀರಿ ಬದುಕಿನ ಹೋರಾಟದಲ್ಲಿ ತನ್ನನ್ನು ಗುರುತಿಸಿಕೊಳ್ಳುವುದರಿಂದ ಗಮನ ಸೆಳೆಯುವ ಪಾತ್ರವಾಗಿ ಕಾಣುತ್ತಾಳೆ."[೬] ಅಪ್ರೌಢ ವಯಸ್ಸಿನಲ್ಲಿಯೇ ವಿವಾಹವಾಗಿ ಹದಿನಾಲ್ಕು ವರ್ಷಕ್ಕೆ ಒಂದು ಮಗುವಿನ ತಾಯಿಯಾಗಿ ನಂತರ ಒಂದಾದ ಮೇಲೊಂದರಂತೆ ಗರ್ಭಧರಿಸಿದ್ದರಿಂದ ಅವಳ ಆರೋಗ್ಯ ಹದಗೆಡುತ್ತದೆ. ನಸೀಮಾ ಸಾವು ಬದುಕಿನ ಮಧ್ಯ ಹೋರಾಡುತ್ತಿರುವಾಗಲೇ ತನ್ನ ಕಣ್ಣೆದುರಿಗೆ ಪಾಷ ಮತ್ತೊಂದು ವಿವಾಹ ಹೊಸ ಹೆಂಡತಿಯೊಂದಿಗಿನ ಸರಸ ಸಲ್ಲಾಪ ಕೇಳಿ ನಸೀಮಾನ ಮನಸ್ಸು ನುಚ್ಚುನೂರಾಗುತ್ತದೆ. ಇಷ್ಟೇ ಅಲ್ಲದೆ ಗಂಡ ಅತ್ತೆ ಅವಳ ಮನೆಯವರು ಎಷ್ಟು ಕಷ್ಟಕೊಟ್ಟರು

---

೫. ಪು.ಸಂ. ೧೧೦, ಮಹಿಳಾ ಚಳುವಳಿ, ಡಾ.ಹಾಲತಿ ಸೋಮಶೇಖರ್

೬. ಪು.ಸಂ. ೪೪, ಹೊಸದಿಕ್ಕು, ಡಾ.ಬಸವರಾಜ ಸಬರದ

ತಾಯಿಯ ಮುಂದೆ ಒಂದು ದೂರನ್ನು ಕೊಡದೆ, ತನ್ನ ಕಷ್ಟದಲ್ಲಿಯೇ ಕನಸುಗಳನ್ನು ಮುಚ್ಚಿಕೊಂಡು ಅವರ ಜೊತೆ ಒಂದಾಗಿ ಬದುಕಲು ಪ್ರಯತ್ನಿಸಿದಳು. ಆದರೆ ಅವಳ ಗಂಡ ಮಾನವೀಯತೆ ತೋರದೆ ತನ್ನ ಎದುರಿನಲ್ಲಿಯೇ ಇನ್ನೊಂದು ವಿವಾಹವಾಗುವುದನ್ನು ಮಾತ್ರ ಸಹಿಸದೆ ಬಂಡೇಳುತ್ತಾಳೆ. ಕೊನೆಗೆ "ಗಂಡನಲ್ಲಿ ಎಷ್ಟು ಒತ್ತಡವಿದ್ದರೂ ಹಿಂದಿರುಗದೆ ಮಗಳ ಭವಿಷ್ಯದಲ್ಲಿ ಕಣ್ಣಿಟ್ಟುಕೊಂಡು ಸ್ವತಂತ್ರ್ಯವಾಗುಳಿಯುತ್ತಾಳೆ. ಸುಕೀನಾ, ನಸೀಮಾ, ರೋಸಿ, ಈ ಮೂರು ತಲೆಮಾರುಗಳ ಜೀವನದೊಂದಿಗೆ ಇಲ್ಲಿಯ ಬಂಡಾಯ ಹೆಣೆದು ಕೊಂಡಿದೆ"[೭] ಎಂದು ವಿಜಯ ದಬ್ಬೆಯವರು ಅಭಿಪ್ರಾಯ ಪಡುತ್ತಾರೆ. ಹೀಗೆ "ಪ್ರವಾಹ-ಸುಳಿ" ಕಾದಂಬರಿಯಲ್ಲಿ ಮಮ್ಮುಟಿ ಬೊಂಬಾಯಿ ತನ್ನ ಇನ್ನೊಂದು ಸಂಸಾರವನ್ನು ಕರೆದುಕೊಂಡು ಬಂದಾಗ ರುಖ್ಯಾಬಿಯ ಮೂಲಕ ನಿರೂಪಕಿ ಆಡುವ ಮಾತುಗಳಲ್ಲಿ ಹೆಣ್ಣಿನ ಮನಸ್ಸಿನ ತೋಳಲಾಟವನ್ನು ಕಾಣಬಹುದು. ಹವಾನಿಯಂತ್ರಿತ ಕೊಠಡಿಯೂ ಆಕೆಯ ಪಾಲಿಗೆ ಅಗ್ನಿ ಕುಂಡವೇ ಆಯಿತು ಎನ್ನುವಲ್ಲಿ ರುಖ್ಯಾಬಿಯ ಮನಸ್ಸಿನಲ್ಲಿ ಆಗುವ ನೋವು ಹತಾಶಯ ಸಂಕಟವನ್ನು ಹೇಳುತ್ತದೆ.

ವಸ್ತ್ರಧಾರಣೆಯ ವಿಷಯದಲ್ಲಿ ಪುರುಷರಿಗಿಂತ ಸ್ತ್ರೀಯರಿಗೆ ಹೆಚ್ಚಾಗಿ ನಿಯಮಗಳನ್ನು ಹಾಕಲಾಗಿದೆ. ಇಸ್ಲಾಂ ಧರ್ಮದ ಕುರ್‌ಆನ್ ಆದೇಶ ಈ ರೀತಿಯಾಗಿದೆ. "ಓ ಪ್ರವಾದಿಗಳೇ ನಿಮ್ಮ ಪತ್ನಿಯರಿಗೂ ಪುತ್ರಿಯರಿಗೂ ಸತ್ಯ ವಿಶ್ವಾಸಿಗಳಾದ ಸ್ತ್ರೀಯರಿಗೂ ತಮ್ಮ ಚಾದರಗಳನ್ನು ಹೊದ್ದುಕೊಳ್ಳುವಂತೆ ಆಜ್ಞಾಪಿಸಿರಿ. ಇದು ಅವರು ಗುರುತಿಸಲ್ಪಡಲು ಮತ್ತು ಸತಾಯಿಸಲ್ಪಡದಿರಲು ಉತ್ತಮ ವಿಧಾನವಾಗಿದೆ"[೮](ಪವಿತ್ರ ಕುರ್‌ಆನ್ ೨೨: ೫೯). ಹಾಗಾಗಿ ಸಾರಾ ಅವರು ತಮ್ಮ ಕಥನ ಸಾಹಿತ್ಯದ ಮೂಲಕ ಪರ್ದಾ ನಿಯಮದಿಂದ ಆ ಸಮಾಜದ ಮಹಿಳೆಯರು ಅನುಭವಿಸಬೇಕಾದ ನೋವು ತಳಮಳವನ್ನು ಕಾದಂಬರಿಗಳಲ್ಲಿ ಚರ್ಚಿಸಿದ್ದಾರೆ.

ಹೀಗೆ ಘೋಷ ಪದ್ಧತಿಯಿಂದ ಸ್ತ್ರೀಯರು ಮನೆಯ ಒಳಕೋಣೆಯಲ್ಲಿಯೇ ಇರಬೇಕಾಗುವುದರಿಂದ ಅಲ್ಲಿನ ಸ್ತ್ರೀಯರಿಗೆ ಹೊರಗಿನ ಪ್ರಪಂಚದ ಜ್ಞಾನದ ಅರಿವು ಇಲ್ಲದ್ದರಿಂದ ಅನೇಕ ತೊಂದರೆಗಳಿಗೆ ಒಳಗಾಗುವುದು. "ನೀಲಿ ಚಿತ್ರ ಕೆಂಪು ಬಣ್ಣ", ಚಂದ್ರಗಿರಿ ತೀರದಲ್ಲಿ, ವಜ್ರಗಳು, ಸುಳಿಯಲ್ಲಿ ಸಿಕ್ಕವರು." ಕಥನ ಸಾಹಿತ್ಯದ ಮೂಲಕ ಪರ್ದಾ ಪದ್ಧತಿಯ ಕುರಿತು ಚರ್ಚಿಸಲಾಗಿದೆ. "ಚಂದ್ರಗಿರಿಯ ತೀರದಲ್ಲಿ" ಪರ್ದಾ ಪದ್ಧತಿಯ ಕಾರಣದಿಂದ ರಶೀದ್ ನದಿ ಆಚೆ ನಿಂತು ಕರೆದರು ನಾದಿರಾ ಹೋಗುವುದಿಲ್ಲ. "ವಜ್ರಗಳು" ಕಾದಂಬರಿಯಲ್ಲಿ ಹುಸೇನ ತನ್ನ ಚಿಕ್ಕಮ್ಮ ನಫೀಸಾ ಪರ್ದಾ ಧರಿಸದೆ ಸುತ್ತಾಡುವುದನ್ನು ವಿರೋಧಿಸಿ ತನ್ನ ತಂಗಿಯನ್ನು ಹೊಡೆಯುತ್ತಾನೆ. ಇದನ್ನು ತಡೆಯಲು ಹೋದ

---

೭. ಪು.ಸಂ. ೮, ಮಹಿಳೆ ಸಾಹಿತ್ಯ ಸಮಾಜ, ವಿಜಯಾ ದಬ್ಬೆ

೮. ಪು.ಸಂ. ೧೧೨, ಮಹಿಳಾ ಚಳುವಳಿ, ಡಾ.ಹಾಲತಿ ಸೋಮಶೇಖರ್

ನಫೀಸಳಿಗೂ ಹುಸೇನ್ ಅವಮಾನ ಮಾಡುತ್ತಾನೆ. ಹಾಗಾಗಿ ನಫೀಸಾ, "ನಮ್ಮ ತಲೆಯಲ್ಲಿ ಬಟ್ಟೆ ಇಲ್ಲದಿದ್ದರೆ ಪರಪುರುಷರ ಮುಂದೆ ನಿಂತರೆ ನಾವು ನರಕಕ್ಕೆ ಹೋಗುತ್ತೇವೆ. ಅಷ್ಟೇ ತಾನೇ? ಆದರೆ ನೀನು ಮತ್ತು ನಿನ್ನಂತಹವರೊಂದಿಗಿನ ಸ್ವರ್ಗಕ್ಕಿಂತ ನರಕವೇ ವಾಸಿ ನಮಗಿರಲಿ!"[೯] ಎಂದು ನಫೀಸಾ ಹೇಳುವಲ್ಲಿ ಪರ್ದಾ ಪದ್ಧತಿಯ ವಿರೋಧವನ್ನು ಕಾಣಬಹುದು. ಕೊನೆಗೆ ಹುಸೈನ ಪರ್ದಾ ನಿಯಮ ಎಷ್ಟು ಕಠೋರವಾಗಿದೆ ಎಂದರೆ ತನ್ನ ಏಳು ವರ್ಷದ ಮಗಳಿಗೂ ಪರ್ದಾ ಧರಿಸುವುದನ್ನು ಕಲಿಸುತ್ತಾನೆ. ಹಾಗೇ ತನ್ನ ಹೆಂಡತಿಯು ಹೆರಿಗೆಯ ನೋವಿನಿಂದ ನರಳುತ್ತಿದ್ದಾಗ ನಫೀಸಾ ವೈದ್ಯರ ಬಳಿ ಕರೆದೊಯ್ಯಬೇಕೆಂಬ ಸಲಹೆ ನೀಡಿದಾಗ ನಿಮಗೆಲ್ಲ ತಲೆ ಸರಿ ಇಲ್ಲವೇ ನಮ್ಮ ಹೆಂಗಸರು ಅನ್ಯ ಪುರುಷನನ್ನು ನೋಡುವುದೇ ಎಂದು ಹೇಳುತ್ತಾನೆ. ಇಸ್ಲಾಂ ಧರ್ಮದ ಈ ನಿಯಮದಿಂದ ಮಹಿಳೆಯರು ತಮ್ಮ ಜೀವವೇ ತೆತ್ತಬೇಕಾಗುವುದನ್ನು ಕಾಣುತ್ತೇವೆ. ಆಧುನಿಕ ವಿದ್ಯಾವಂತರು ಸಹ ಘೋಷಾ ಪದ್ಧತಿಯನ್ನು ಒಪ್ಪಿಕೊಂಡಿರುವುದನ್ನು ಬೆನ್ನಟ್ಟುವ ಭೂತಗಳು ಕತೆಯಲ್ಲಿ ಕಾಣುತ್ತೇವೆ. ಆಯಿಷಳ ಗಂಡ ಒಬ್ಬ ವಿದ್ಯಾವಂತ ಅಧಿಕಾರಿಯಾದರೂ ತನ್ನ ಹೆಂಡತಿ ಬುರ್ಕಾ ಧರಿಸಿ ಪ್ರಯಾಣ ಮಾಡಬೇಕು ಎಂದು ಬಯಸುತ್ತಾನೆ. ಹೀಗೆ ಮುಸ್ಲಿಂ ಸಮಾಜದಲ್ಲಿ ಮಹಿಳೆಯರು ಸಮಾಜ ಜೀವಿ ಎಂದು ಭಾವಿಸದೇ ಸಮಾಜ ಸ್ತ್ರೀಯರಿಗೆ ಯಾವುದೇ ರೀತಿಯಾದ ಆಶೆ ಆಕಾಂಕ್ಷೆಗಳು ಇಲ್ಲದೆ ಕೇವಲ ಕೀಲಿಯ ಗೊಂಬೆಯನ್ನಾಗಿಸಿ ಭೋಗದ ವಸ್ತುವನ್ನಾಗಿಸಿ ಹೆರುವ ಯಂತ್ರವನ್ನಾಗಿ ಮಾಡಿ ನಾಲ್ಕು ಗೋಡೆಯ ಮಧ್ಯ ಕೂಡಿಹಾಕಿರುವುದನ್ನು ಕಾಣುತ್ತೇವೆ. ಹೀಗೆ ಮುಸ್ಲಿಂ ಸಮಾಜದಲ್ಲಿ ತಲಾಖ್, ಬಹುಪತ್ನಿತ್ವ, ಪರ್ದಾ ಪದ್ಧತಿ ಸಾಮಾನ್ಯವಾಗಿದೆ. "ಸುಳಿ" ಕಾದಂಬರಿಯಲ್ಲಿ ಮಮ್ಮುಟ ಬೊಂಬಾಯಿಂದ ಬಂದಾಗ ತನ್ನ ತಾಯಿ ಮತ್ತು ಹೆಂಡತಿಗೆ "ಬುರ್ಖಾ" ಧರಿಸಿಕೊಳ್ಳಲು ಕಡ್ಡಾಯ ಮಾಡುತ್ತಾನೆ ಇಲ್ಲಿ ಬುರ್ಕಾ ಬದುಕಿನ ಅಂತಸ್ತಿನ ಸಂಕೇತವಾಗಿರುವುದನ್ನು ಕಾಣುತ್ತೇವೆ.

---

೯. ಪು.ಸಂ. ೧೧೨, ವಜ್ರಗಳು, ಸಾರಾ ಅಬೂಬಕ್ಕರ್

ಅಧ್ಯಾಯ : ೪

ಸಾರಾ ಅವರ ಕಥನ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆ

ಅಧ್ಯಾಯ : ೪

ಸಾರಾ ಅವರ ಕಥನ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆ

ಪ್ರಸ್ತುತ ಅಧ್ಯಯನದಲ್ಲಿ ಸಾರಾ ಅವರ ಕಥನ ಸಾಹಿತ್ಯದಲ್ಲಿ ಬಿಂಬಿತವಾದ ಮಹಿಳಾ ಸಮಸ್ಯೆಯ ನೆಲೆಯಲ್ಲಿ ಅವಳು ಎತ್ತುವ ಪ್ರಶ್ನೆ ಕುರಿತಾಗಿ ಚರ್ಚಿಸಲಾಗಿದೆ. ಸಾರಾ ಅವರ ಇಡೀ ಕಥನದ ಮೂಲ ದ್ರವ್ಯ ಮಹಿಳಾ ಪ್ರಶ್ನೆ. ಸ್ತ್ರೀಯರಿಗೆ ಸರಿಸಮಾನವಾದ ಸ್ಥಾನ ಮತ್ತು ಸ್ವಾತಂತ್ರ್ಯವನ್ನು ಕಲ್ಪಿಸಿಕೊಡದೇ ಇರುವುದು. ಆಸ್ತಿಯಲ್ಲಿ ಹಕ್ಕಿಲ್ಲದಿರುವುದು. ಹೀಗೆ "ಮಹಿಳೆಯರ ಬದುಕನ್ನು ಶೋಚನೀಯವಾಗಿಸಿದ ಇಸ್ಲಾಂ ಸಮಾಜವು ಧರ್ಮದ ಹೆಸರಿನಲ್ಲಿ ಮಹಿಳೆಯನ್ನು ತಲಾತಲಾಂತರಗಳಿಂದಲೂ ಗುಲಾಮಗಿರಿಗೆ ತಳ್ಳಿದೆ."[೧] ಇದಕ್ಕೆ ಪೂರಕವಾಗಿ ಇಬ್ರಾಹಿಂ ಸಈದ್ ಮತ್ತು ಹಾಲತಿ ಸೋಮಶೇಖರ್ ಅವರುಗಳು ರಚಿಸಿದ "ಮುಸುಕಿನಲ್ಲಿ ಮುಸ್ಲಿಂ ಮಹಿಳೆ" ಕೃತಿಯಲ್ಲಿ ಮುಸ್ಲಿಂ ಮಹಿಳೆ ಎಂಬ ಲೇಖನದಿಂದ 'ಕುರಾಆನ್' ಕೆಲವು ನಿಯಮಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಅರಬ್ ದೇಶದಲ್ಲಿ ಹೆಣ್ಣು ಮಗು ಹುಟ್ಟಿದರೆ ಎಷ್ಟು ಕೆಟ್ಟದೆಂದು ಭಾವಿಸುತ್ತಿದ್ದರೆಂದರೆ "ಅವನು ತನ್ನ ಜನಾಂಗದಿಂದ ಮುಖ ಮರೆಸಿಕೊಳ್ಳುತ್ತಾರೆ. ನಿಂದ್ಯೆತೆಯನ್ನು ಸಹಿಸುತ್ತಾ ಮಗುವನ್ನು ಉಳಿಸಬೇಕೆ? ಅಥವಾ ಮಣ್ಣಿನಡಿ ಹೂತು ಬಿಡಬೇಕೆ ಎಂದು ಯೋಚಿಸುತ್ತಿರುತ್ತಾನೆ(ಪವಿತ್ರ ಕುರಾನ್ ೧೬: ೫೮-೫೯). ಹೀಗೆ ಇಸ್ಲಾಂ ಧರ್ಮದಲ್ಲಿ ಮಹಿಳೆಗೆ ಆಸ್ತಿಯಲ್ಲಿ ಹಕ್ಕಿರಲಿಲ್ಲ. ಇದನ್ನು ತಿಳಿದ ಮಹಮ್ಮದ್ ಪೈಗಂಬರರು ಕೆಲವು ಜೀವನ ಸಂದೇಶವನ್ನು ಸಾರಿದರು.

೧. ಎಲ್ಲಾ ಮಾನವರೂ ಅಲ್ಲಾನ ಕುಟುಂಬದ ಸದಸ್ಯರು.

೨. ಎಲ್ಲರೂ ಸಹೋದರ ಸಹೋದರಿಯರು.

೩. ಎಲ್ಲರೂ ಸರ್ವಸಮಾನರು.

---

೧. ಪು.ಸಂ. ೧೦೫, ಮಹಿಳಾ ಚಳುವಳಿ, ಡಾ.ಹಾಲತಿ ಸೋಮಶೇಖರ್

೪. ಅನ್ಯರಿಗೆ ಸಹಾಯ ಮಾಡಬೇಕು.

೫. ಮಹಿಳೆಯರನ್ನು ಸದಾ ಗೌರವಿಸಬೇಕು ಎಂದು ಹೇಳುತ್ತದೆಯಾದರೂ ಸ್ತ್ರೀಯರ ವಿಷಯದಲ್ಲಿ ಕೆಲವೊಂದು ಸಾಮಾಜಿಕ ನಿಯಮಗಳನ್ನು ಕುರ್‌ಆನ್ ಮೂರನೇ ಭಾಗದಲ್ಲಿ ಹೇಳಲಾಗಿದೆ.

೧. ಗೌರವ ಗಾಂಭೀರ್ಯದೊಂದಿಗೆ ಮನೆಯಲ್ಲಿ ಕುಳಿತಿರಿ, ಸಲ್ಲದ ಶೃಂಗಾರಗಳನ್ನು ಮಾಡಿ ಬೀದಿಗಿಳಿಯಬೇಡಿ, ಪರ ಪುರುಷರ ಜೊತೆ ಮಾತನಾಡಬೇಕಾಗಿ ಬಂದರೆ ಆತನ ಮನದಲ್ಲಿ ನಿಮ್ಮ ಕುರಿತು ಸಲ್ಲದ ಆಸೆಗಳು ಅಂಕುರಿಸುವ ರೀತಿಯಲ್ಲಿ ಮೋಹಕ ದನಿಯಲ್ಲಿ ಮಾತನಾಡಬೇಡಿ ಎಂದು ಪ್ರವಾದಿ ಪತ್ನಿಯರಿಗೆ ಆಜ್ಞಾಪಿಸಲಾಯಿತು(ಆಯತ ೩೨ -೩೩).

೨. ಪ್ರವಾದಿ ವರ್ಯರ ಮನೆಗೆ ಅನುಮತಿ ವಿನಾ ಪರ ಪುರುಷರು ಪ್ರವೇಶಿಸುವುದನ್ನು ನಿಷೇಧಿಸಲಾಯಿತು. ಪ್ರವಾದಿ ಪತ್ನಿಯರೊಂದಿಗೆ ಏನಾದರೂ ಕೇಳಲಿಕ್ಕಿದ್ದರೆ ಪರದೆಯ ಹಿಂದಿನಿಂದ ಕೇಳಬೇಕೆಂದು ಆದೇಶಿಸಲಾಯಿತು(ಅಯತ, ೫೩).

೩. ಮನೆಯಿಂದ ಹೊರ ಹೋಗಬೇಕಾದಾಗ ಸರಿಯಾದ ಚದ್ದರ ಹೊದ್ದು, ಮುಸುಕು ಹಾಕಿಕೊಂಡು ಹೋಗಬೇಕೆಂದು ಎಲ್ಲ ಮುಸ್ಲಿಂ ಮಹಿಳೆಯರಿಗೆ ಆಜ್ಞೆ ಕೊಡಲಾಯಿತು"[೨](ಅಯತ, ೫೯).

ಇಲ್ಲಿ ಪುರುಷರಿಗಿಲ್ಲದ ನಿಯಮಗಳನ್ನು ಸ್ತ್ರೀಯರಿಗೆ ಹಾಕಲಾಗಿದೆ. ಹೀಗೆ ಇಸ್ಲಾಂ ಧರ್ಮದಲ್ಲಿ ಮಹಿಳೆಯರಿಗೂ ಪುರುಷನಷ್ಟೇ ಸಮಾನವಾದ ಸ್ಥಾನಮಾನಗಳಿವೆ ಎಂದು ಹೇಳಿದರೂ ಇಸ್ಲಾಂ ಧರ್ಮದ ಪುರುಷರಿಗೆ ಮಹಿಳೆಯರ ಮೇಲೆ ಒಂದು ಪದವಿ ಪ್ರಾಪ್ತವಾಗುತ್ತದೆ ಎಂದು ಹೇಳುತ್ತದೆ. ಅದಕ್ಕೆ ಕುರ್‌ಅನ್ ನಲ್ಲಿ ಹೇಳುವ ವಿವರಣೆ ಎಂದರೆ "ಸ್ತ್ರೀ ಪುರುಷರು ವಾಹನದ ಎರಡು ಗಾಲಿಗಳಿದ್ದಂತೆ ಅವರಿಬ್ಬರ ಪೈಕಿ ಒಬ್ಬರಿಗೆ ಕುಟುಂಬದ ನಾಯಕತ್ವ ಇರಬೇಕಾದುದ್ದು ಅವಶ್ಯಕ. ಅವನು ಕುಟುಂಬದ ಸಂರಕ್ಷಕ ಮತ್ತು ವ್ಯವಸ್ಥಾಪಕನೂ ಆಗಿರಬೇಕು. ಈ ಸ್ಥಾನವನ್ನು ಪುರುಷನಿಗೆ ವಹಿಸಿಕೊಡಲಾಗಿದೆ. ಆದ್ದರಿಂದ ಅಲ್ಲಾಹನು ಹೇಳುತ್ತಾನೆ. ಪುರುಷರು ಸ್ತ್ರೀಯರ ಮೇಲೆ ಕವ್ವಾಮ್ (ಮೇಲ್ವಿಚಾರಕ) ಅಂದರೆ ಅಜ್ಞಾಧಿಕಾರಿಗಳಾಗಿರುತ್ತಾರೆ. ಇದು ಅಲ್ಲಾಹನು ಕೆಲವರಿಗೆ ಕೆಲವರ ಮೇಲೆ ಶ್ರೇಷ್ಠತೆ ಪ್ರಧಾನ ಮಾಡಿದುದರಿಂದ ಶ್ರೇಷ್ಠತೆಯ ಸ್ಥಾನ ಮತ್ತು ಸ್ತ್ರೀಯರ ಮೇಲೆ ಅಧಿಕಾರ ಪ್ರಾಪ್ತವಾಗಿದೆ"[೩] ಎನ್ನಲಾಗಿದೆ. ಮಹಮ್ಮದ್ ಪೈಗಂಬರರ ಕಾಲದಲ್ಲಿ ಸ್ತ್ರೀಯರಿಗೆ ಗೌರವ-ಸ್ಥಾನ ಮಾನಗಳನ್ನು ಕೊಡಲಾಗಿತ್ತು. ಆಗಿನ ಕಾಲದ ಸ್ತ್ರೀಯರು ಕೋಣೆಯಲ್ಲಿಯೇ ಕುಳಿತುಕೊಳ್ಳುತ್ತಿರಲಿಲ್ಲ. ಬದಲಾಗಿ ಸ್ತ್ರೀಯರು ಪುರುಷನೊಂದಿಗೆ

---

೨. ಪು.ಸಂ. ೧೦೫, ಮಹಿಳಾ ಚಳುವಳಿ, ಡಾ.ಹಾಲತಿ ಸೋಮಶೇಖರ್

೩. ಪು.ಸಂ. ೧೦೯, ,, ,,

ಕುದುರೆ ಏರಿ ಕುಳಿತು ಯುದ್ಧಕ್ಕೆ ಹೋಗುತ್ತಿದ್ದರು ಎಂದು ಸಾರಾ ಅವರ ಆತ್ಮಚರಿತ್ರೆಯ ಮೂಲಕ ತಿಳಿಯಬಹುದು. ಮಹಮ್ಮದ್ ಪೈಗಂಬರರು ಕಾಲವಾದ ನಂತರ ಎರಡು ಶತಮಾನಗಳವರೆಗೆ ಮಹಿಳೆಯರಿಗೆ ಸ್ವತಂತ್ರ್ಯವನ್ನು ಕೊಡಲಾಯಿತು. ಆದರೆ ಮುಂದೆ ಬಂದ ಮುಸ್ಲಿಂ ಮೂಲಭೂತವಾದಿಗಳು ಮತ್ತೆ ಮೊದಲಿನ ಸ್ಥಿತಿಗೆ ಮಹಿಳೆಯನ್ನು ತಳ್ಳಿದರು.

ಮಹಮ್ಮದ್ ಪೈಗಂಬರರು ಸ್ತ್ರೀ, ಪುರುಷರು ಇಬ್ಬರೂ ವಿದ್ಯೆ ಪಡೆಯಬೇಕು ಎಂಬುದನ್ನು ಸಾರಾ ಅವರು ತಮ್ಮ ಆತ್ಮಚರಿತ್ರೆಯ ಮೂಲಕ ಹೇಳಿರುವುದನ್ನು ಗಮನಿಸಬಹುದು. ಆದರೆ ಮಹಮ್ಮದ್ ಪೈಗಂಬರರ ಈ ಭೋಧನೆಯನ್ನು ತಳ್ಳಿಹಾಕಿ ಮಹಿಳೆಯನ್ನು ವಿದ್ಯೆಯಿಂದ ವಂಚಿತರನ್ನಾಗಿ ಮಾಡಿ ಅಜ್ಞಾನದ ಕೂಪದಲ್ಲಿ ಕೆಡವಿದರು. ಆದರೆ ಆಧುನಿಕ ಕಾಲದಲ್ಲಿ ಮಹಿಳೆಯರ ಸ್ಥಾನ ಮಾನಗಳು ಬದಲಾಗುತ್ತಿರುವುದನ್ನು ಗ್ರಹಿಸಬಹುದು. ಕೇವಲ ಪುರುಷನಿಗೆ ಮಾತ್ರವೇ ಸೀಮಿತವಾಗಿದ್ದ ವಿದ್ಯೆ ಮುಂತಾದ ವಿಷಯಗಳಲ್ಲಿ ಸ್ತ್ರೀಯರು ಪುರುಷರೊಂದಿಗೆ ಸ್ಪರ್ಧಿಸಿ ಜಯಗಳಿಸಿರುವುದನ್ನು ನೋಡುತ್ತೇವೆ. ಒಂದು ಕಾಲದಲ್ಲಿ ಮಹಿಳೆಯರು ಹೊರಗಡೆ ಬರದಂತಹ ಕಾಲವೊಂದಿತ್ತು. ಇಂದು ಮಹಿಳೆ ಮನೆಯ ಒಳಗೂ ಹೊರಗೂ ತಮ್ಮ ಕರ್ತವ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುವುದನ್ನು ಗಮನಿಸಬಹುದು. ಹೀಗೆ ಸಾರಾ ಅವರು ತಮ್ಮ ಕಥನ ಸಾಹಿತ್ಯದ ಮೂಲಕ ಆ ಸಮಾಜದ ಮಹಿಳೆಯರ ಸ್ಥಿತಿಗತಿಯನ್ನು ಅನಾವರಣಗೊಳಿಸಿರುವುದನ್ನು ಚರ್ಚಿಸಲಾಗಿದೆ.

ಚಂದ್ರಗಿರಿಯ ತೀರದಲ್ಲಿ ಕಾದಂಬರಿಯ ನಾಯಕಿ ನಾದಿರಾ ಹೆಣ್ಣು ಎಂಬ ಕಾರಣಕ್ಕೆ ಹೊರಗಡೆ ಹೋಗಲಾರದಂತಹ ಅತಂತ್ರ ಸ್ಥಿತಿ. ಇಂತಹ ಸ್ಥಿತಿಯಿಂದ ಆ ನಾದಿರಾ ತನ್ನ ಬದುಕನ್ನೇ ಒತ್ತೆ ಇಡಬೇಕಾಗುತ್ತದೆ. ನಾದಿರಾಳ ತಾಯಿ ಫಾತಿಮಾಳ ಸ್ವಾತಂತ್ರ್ಯ ಹೀನ ಬದುಕು ಪತಿಯ ನೆರಳಲ್ಲಿಯೇ ಬದುಕು ಕೊಂಡುಕೊಳ್ಳುವ ಅನಿವಾರ್ಯತೆ. ಅವಳೊಂದು ಹೆಣ್ಣಾಗಿಯೂ ಕೂಡ ತನ್ನ ಮಗಳಿಗೆ ತನ್ನ ಗಂಡನಿಂದ ಅನ್ಯಾಯವಾಗುತ್ತಿದ್ದರೂ ಅದನ್ನು ಪ್ರತಿಭಟಿಸದ ಅಸಹಾಯಕತೆ ಇಷ್ಟಾಗಿಯೂ ಫಾತಿಮ ಮಗಳಿಗೆ ತಂದೆಯ ಆರ್ಶೀವಾದವನ್ನು ಪಡೆದುಕೊಂಡು ಗಂಡನ ಮನೆಗೆ ಹೋಗಬೇಕೆಂದು ಫಾತಿಮ ಹೇಳುವಂತಹ ಸ್ಥಿತಿ ಗಮನಾರ್ಹವಾಗಿದೆ. ಹೀಗೆ ಹೆತ್ತ ತಂದೆಯ ಸ್ವಾರ್ಥ, ತಾಯಿಯ ಅಸಹಾಯಕತೆ ಗಂಡನ ವ್ಯವಸ್ಥೆಯ ಕುರಿತು ಅಜ್ಞಾನದಿಂದಾಗಿ ತಲಾಖ್ ಮಡುವಿನಲ್ಲಿ ಬೀಳುವ ವಿಚಿತ್ರ ಸ್ಥಿತಿ ಹೀಗೆ ಇದೆಲ್ಲವನ್ನು ಮೊದಲಿನಿಂದಲೂ ಸಹಿಸುತ್ತಾ ಬಂದ ನಾದಿರಾ ಯಾಂತ್ರಿಕವಾಗಿ ಬದುಕು ಸಾಗಿಸುತ್ತಾಳೆ ವಿನಃ ತಂದೆ ಗಂಡನನ್ನು ಪ್ರಶ್ನಿಸುವ ಮನೋಬಲ ಬೆಳೆಸಿಕೊಳ್ಳುವುದಿಲ್ಲ. ಹಾಗೆ ನಾದಿರಾಳ ತಂದೆ ಬೇರೆ ವಿವಾಹದ ವಿಷಯ ಮಾತನಾಡಿದಾಗ ಮಾತ್ರ ನಾದಿರಾ ಪ್ರತಿಭಟಿಸುತ್ತಾಳೆ. ಈ ಪ್ರತಿಭಟನೆ ಅಸಹಾಯಕತೆಯಿಂದ ಹೊರಹೊಮ್ಮಿದ್ದು "ನೀವು ನನಗೆ ಒಂದು ಮದುವೆ ಮಾಡಿಸಿದ್ದು ಸಾಕು, ನೀವೇನಾದರೂ ನನಗೆ ಇನ್ನೊಮ್ಮೆ ಮದುವೆ ಮಾಡಲು ಪ್ರಯತ್ನಿಸಿದರೆ ನಾನು ಚಂದ್ರಗಿರಿಯಲ್ಲಿ ಬಿದ್ದು

ಪ್ರಾಣ ಕಳೆದುಕೊಳ್ಳುತ್ತೇನೆ.''[೪] ವ್ಯವಸ್ಥೆಯ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುವ ಸಂದರ್ಭದಲ್ಲಿ ಉದ್ಭವವಾದ ಪ್ರತಿಭಟನಾ ಸ್ವರೂಪದ ಪ್ರಶ್ನೆ ಮೊದಲೇ ಗೋಚರಿಸಿದ್ದರೆ ಒಂದು ತೀರ ಸಿಕ್ಕುತ್ತಿತ್ತು ಎನಿಸುತ್ತದೆ. ಮೌನವಾಗಿ ನೋವನ್ನೆಲ್ಲ ಸಹಿಸಿಕೊಂಡರೂ ಮತ್ತೆ ಅದಕ್ಕೊಂದು ಬರೆ ಬಿದ್ದರೆ ಎಂದ ಹಾಗಾಗಿದೆ. ಸಹನೆ ಪ್ರತಿಭಟನೆಯಾಗುವಿಕೆಯಲ್ಲಿನ ಹಂತ ಇಲ್ಲಿ ಗೋಚರಿಸಿದೆ. ಆದರೂ ಇದನ್ನೆಲ್ಲಾ ಸಹಿಸಿಕೊಂಡು ಕೊನೆಗೆ ರಶೀದ್, ಪಾಪುವನ್ನು ಸೇರಲೇಬೇಕೆಂಬ ಒತ್ತಾಸೆಯಿಂದಾಗಿ ಇನ್ನೊಂದು ಮದುವೆ ಸಂಕೇತಿಕವಾಗಿ ಒಪ್ಪುತ್ತಾಳಾದರೂ ಕೊನೆಗೆ ಅವಳಲ್ಲಿ ನೈತಿಕ ಪ್ರಜ್ಞೆ ಜಾಗೃತಗೊಳ್ಳುತ್ತದೆ.

ನೈತಿಕ ಪ್ರಜ್ಞೆ ಜಾಗೃತಗೊಂಡು ಆ ಬಲೆಯಿಂದ ತಪ್ಪಿಸಿಕೊಳ್ಳುವ ಹಂತದಲ್ಲಿ ಆಕೆ ಸಾವನ್ನಪ್ಪುತ್ತಾಳೆ. ನೈತಿಕತೆ ಪ್ರಶ್ನೆ ಆಕೆಯ ಜೀವನ್ಮರಣದ ಪ್ರಶ್ನೆಯಾಗಿ ಕಾಡುತ್ತದೆ. ಆದರೂ ಪ್ರಶ್ನೆಯನ್ನು ಸಮಾಜಕ್ಕೆ ಕೇಳಿಸುವ ಹಾಗೆ ಕೇಳುವ ಧೈರ್ಯವಿಲ್ಲದೆ ಅಥವಾ ಅವಳ ಪ್ರಶ್ನೆ ಸಮಾಜಕ್ಕೆ ಕೇಳಿಸದೆ ಅದು ಅರಣ್ಯರೋಧನವಾಗುವಿಕೆಯ ಮಹತ್ವದ ಘಟ್ಟವನ್ನಿಲ್ಲಿ ನಾವು ಕಾಣಬಹುದು. ಮೊದಲಿನಿಂದಲೂ ಅವಳಲ್ಲಿ ಪ್ರಶ್ನೆಗಳ ಮಹಾಪೂರವೇ ಇದೆ. ನಾನು ಮಾಡದ ತಪ್ಪಿಗೆ ತಲಾಖ್ ಎಂಬ ಶಿಕ್ಷೆ ಏಕೆ? ಒಂದೊಮ್ಮೆ ರಶೀದನೊಡನೆ ಮತ್ತೊಮ್ಮೆ ಒಂದಾಗುವುದಾದರೆ ಧರ್ಮದ ನಿಯಮದಂತೆ ತನ್ನದಲ್ಲದ ತಪ್ಪಿಗೆ ತಾನೇಕೆ ಇನ್ನೊಬ್ಬನೊಂದಿಗೆ ಒಂದುದಿನ ಇರಬೇಕು ಏಕೆ? ಅಥವಾ ಇದಕ್ಕೂ ಮೊದಲು ತಾನು ಮಾಡದ ತಪ್ಪಿಗೆ ತಲಾಖ್ ಶಿಕ್ಷೆ ಒಂದಾದರೆ ತನ್ನ ಜೀವನದ ಸುರಕ್ಷಿತತೆಗೆ ಇನ್ನೊಂದು ಮದುವೆ ಆಗಲೇಬೇಕು ಏಕೆ? ಹೀಗೆ ಅವಳ ಮನದಾಳದ ಪ್ರಶ್ನೆಗೆ ಅವಳೇ ಹೇಳುವ ಹಾಗೆ ಅಲ್ಲಾನ ನ್ಯಾಯಾಲಯದಲ್ಲಿ ಮಾತ್ರ ನಿರ್ಣಯ ಸಿಗುವ ಸಾಧ್ಯತೆ ಹೀಗೆ ಹಲವಾರು ನೆಲೆಗಳಿಂದ ಯೋಚನಾರ್ಹವಾದ ಈ ವಸ್ತು ವಿಷಯ ನಿಜಕ್ಕೂ ಮಹಿಳೆಯ ಜೀವನವೇ ಒಂದು ಬಿಗ್ ಪ್ರಶ್ನೆಯೇ? ಅದಕ್ಕೆ ಉತ್ತರವಿಲ್ಲವೇ ಎನ್ನುವಂತಹ ಅಮಾಯಕ ಸ್ಥಿತಿಯಲ್ಲಿ ನಿಲ್ಲಿಸುತ್ತದೆ. ಹೀಗೆ ಅತ್ಯಂತ ವಿವೇಚನಾಪೂರ್ಣ, ಭಾವನಾತ್ಮಕವಾಗಿ ಕೂಡ ಇದು ಗಮನಾರ್ಹ ಸಂಗತಿ. ಹೀಗೆ ನಾದಿರಾಳ ಸುಂದರವಾದ ಬದುಕನ್ನು ಧರ್ಮದ ಹೆಸರಿನಲ್ಲಿ ಬಲಿತೆಗೆದುಕೊಳ್ಳುವುದನ್ನು ಕಾಣುತ್ತೇವೆ. ಹಾಗೆ ಅವಳು ತನ್ನ ಮಗುವನ್ನು ಎತ್ತಿಕೊಳ್ಳಲು ಹೋದಾಗ ಆ ಮಗು ನಾದಿರಾಳ ಮುಖ ನೋಡಿ ತನ್ನ ಅಜ್ಜಿಯನ್ನು ಅಪ್ಪಿಕೊಳ್ಳುತ್ತದೆ. ಅವಳ ಮಗು ತಾಯಿಯನ್ನೇ ಗುರುತಿಸದಂತಾಗುತ್ತದೆ ಆದರೂ ಅವಳು ಯೋಚಿಸುತ್ತಾಳೆ. ಆದರೂ ಮೂರು ಸಲ ತಲಾಖ್ ಎಂದು ಹೇಳಿ ವಿವಾಹದ ಬಂಧನವನ್ನು ಕಳಚಿಕೊಳ್ಳಬಹುದು. ಆದರೆ ರಕ್ತ ಸಂಬಂಧ ಮಾತ್ರ ಮುರಿದು ಬೀಳಲು ಸಾಧ್ಯವಿಲ್ಲ ''ಮೂರು ಸಲ ತಲಾಖ್ ಎಂದು ಹೇಳಿ ''ತೂ'' ಎಂದು ಬಿಟ್ಟರೆ ಎಂದೆಂದಿಗೂ ಮುರಿದು

---

೪. ಪು.ಸಂ. ೧೪೧, ಚಂದ್ರಗಿರಿಯ ತೀರದಲ್ಲಿ, ಸಾರಾ ಅಬೂಬಕ್ಕರ್

ಬೀಳಲು ಅದು ನಿಕಾಹ ಅಲ್ಲವಲ್ಲ? ಇಲ್ಲಿ ಬಂಧಿಸಿರುವುದು ರಕ್ತ ಸಂಬಂಧ"[೫] ಎಂದು ತನ್ನ ಮಗುವಿನ ಬಗ್ಗೆ ಎತ್ತುವ ನಾದಿರಾಳ ವಾಸ್ತವಿಕ ಪ್ರಶ್ನೆಗಳು ಬಹಳ ಅರ್ಥಪೂರ್ಣವಾಗಿವೆ. ಹಾಗೆ ನಾದಿರಾ ತನ್ನ ಮೇಲೆ ವಿನಾಕಾರಣ ಆಗುತ್ತಿರುವ ಶೋಷಣೆಗೆ ಯಾವ ಪರಿಹಾರವನ್ನು ಕಾಣದೆ ಧಾರ್ಮಿಕ ವ್ಯವಸ್ಥೆಯ ಸಂಕೇತವಾದ ಮಸಿದೀಯ ಕೊಳಕ್ಕೆ ಬಿದ್ದು ಸಾಯುತ್ತಾಳೆ. ಹೀಗೆ ತನ್ನ ಇಷ್ಟದ ವಿರುದ್ಧ ಮಾಡಲ್ಪಟ್ಟ ಮದುವೆಗೆ ನಾದಿರಾ ತೋರಿದ ಅಂತಿಮ ಪ್ರತಿರೋಧವಿದು.

"ಸಹನಾ" ಸ್ತ್ರೀಯರ ದುಃಖಕ್ಕೆ ಕಾರಣವಾಗುವ ಹಲವಾರು ಸಂದರ್ಭಗಳಿಗೆ ಕಾರಣವಾಗುವ ಪುರುಷ ಮತ್ತು ಪುರುಷ ಪ್ರಧಾನ ಸಮಾಜದ ರೀತಿ ನೀತಿಗಳೆನ್ನುವುದು ಲೇಖಕಿಯ ಅಭಿಪ್ರಾಯವಾಗಿದೆ. ಪುರುಷರು ತಮ್ಮ ಸ್ವಾರ್ಥಕ್ಕಾಗಿ ಮಹಿಳೆಯರನ್ನು ಬಳಸಿಕೊಂಡು ಅನಂತರ ತಲಾಖ್, ಬಹುಪತ್ನಿತ್ವದ ಮೂಲಕ ಹೆಣ್ಣು ಮಕ್ಕಳನ್ನು ಅಮಾನವೀಯತೆಗೆ ಪ್ರತಿಕ್ರಿಯಿಸುವ ಅಮಾನವೀಯವಾಗಿ ನಡೆಸಿಕೊಳ್ಳುವ ರೀತಿಯನ್ನು ಅವರು ಪ್ರಶ್ನಿಸುತ್ತಾರೆ. ಹೆಣ್ಣಿನ ಹೃದಯದಂತೆ ಇವರು ಸ್ಪಂದಿಸುವುದೇ ಇಲ್ಲ. ಎರಡನೆಯವಳು ಬಂದ ಮೇಲೆ ಮೊದಲ ಹೆಂಡತಿ ಮಕ್ಕಳು ಯಾರಿಗೆ ಬೇಕಾಗಿಲ್ಲ? ನಾಲ್ಕು ಹೆಂಡತಿಯರನ್ನು ಇಟ್ಟುಕೊಳ್ಳಬಹುದು ಎಂದು ಕುರ್‌ಆನ್‌ನಲ್ಲಿ ಹೇಳಿದೆಯಲ್ಲ? ಅಂದರೆ ಪ್ರಾಣಿಗಳಿಗೂ ಈ ಗಂಡಸರಿಗೂ ಹೆಚ್ಚು ವ್ಯತ್ಯಾಸವಿಲ್ಲವೆಂದ ಹಾಗಾಯಿತು. ಒಂದೇ ವ್ಯತ್ಯಾಸ ಪ್ರಾಣಿಗಳು ಮದುವೆ ಅಥವಾ ನಿಕಾಹ್ ಮಾಡಿಕೊಳ್ಳುವುದಿಲ್ಲ"[೬] ಸಹನಾ ಕಾದಂಬರಿಯಲ್ಲಿ ಕೇವಲ ಲೈಂಗಿಕ ಸುಖಕ್ಕಾಗಿ ವಿವಾಹವಾಗುತ್ತಾನೆ.

ವಿದ್ಯಾವಂತೆಯಲ್ಲದಿದ್ದರೂ ಗಂಡನ ಧೋರಣೆಯನ್ನು ಪ್ರಶ್ನಿಸಿ ತನ್ನತನವನ್ನು ಉಳಿಸಿಕೊಳ್ಳುತ್ತಾಳೆ. ಚಿಕ್ಕ ವಯಸ್ಸಿನಲ್ಲಿಯೇ ವಿವಾಹವಾಗಿ ಒಂದಾದ ಮೇಲೊಂದರಂತೆ ಗರ್ಭಧರಿಸಿ ತನ್ನ ಆರೋಗ್ಯವನ್ನು ಹದಗೆಡೆಸಿಕೊಳ್ಳುತ್ತಾಳೆ. ಕಷ್ಟದಲ್ಲಿ ಹುಟ್ಟಿ ಕಷ್ಟದಲ್ಲಿ ಬೆಳೆದ ನಸೀಮಾ ಗಂಡನ ಮನೆಯ ಕಷ್ಟಗಳನ್ನು ಸಹಿಸಿಕೊಂಡು ತನ್ನ ಚಿಕ್ಕ ಮೂರು ಕನಸುಗಳಿಗೂ ಕಡಿವಾಣ ಹಾಕಿ ಎಲ್ಲರೊಡನೆ ಹೊಂದಿಕೊಂಡು ಸಹನೆಯಿಂದ ಜೀವನ ನಡೆಸುತ್ತಾಳೆ. ಆದರೆ ಇವಳ ಆರೋಗ್ಯ ಹದಗೆಟ್ಟಿತ್ತು ಎಂಬ ಕಾರಣ ಒಡ್ಡಿ ಪಾಷಾ ಇನ್ನೊಂದು ವಿವಾಹವಾಗಿ ಹೊಸ ಹೆಂಡತಿಯನ್ನು ಮನೆಗೆ ಕರೆದುಕೊಂಡು ಬಂದಾಗ ಮಾತ್ರ ನಸೀಮಾಳ ಮನಸ್ಸು ಅಗ್ನಿ ಜ್ವಾಲೆಯಾಗಿ ಉರಿಯುತ್ತದೆ. ನಂತರ ಆಕೆ ತನ್ನ ಸಹನೆಯ ಪರದೆಯನ್ನು ಕಿತ್ತೆಸೆದು ಹೊರಬರುತ್ತಾಳೆ. ನಸೀಮಾಳನ್ನು ಪಾಷ ಮತ್ತೆ ತನ್ನ ಮನೆಗೆ ಕರೆದುಕೊಂಡು ಹೋಗಲು

---

೫. ಪು.ಸಂ. ೬೨, ಚಂದ್ರಗಿರಿಯ ತೀರದಲ್ಲಿ, ಸಾರಾ ಅಬೂಬಕ್ಕರ್

೬. ಪು.ಸಂ. ೧೫೨, ಸಹನಾ, ಸಾರಾ ಅಬೂಬಕ್ಕರ್

ಬಂದಾಗ ನಸೀಮಾ ಪಾಷನನ್ನು ಕೇಳುವ ಪ್ರಶ್ನೆ ಇಡೀ ಮುಸ್ಲಿಂ ಸಮಾಜಕ್ಕೆ ಕೇಳುವ ಪ್ರಶ್ನೆಯೇ ಹಾಗಿದೆ. "ನಾನು ರೋಗಿಯಾಗಿ ಸಾಯುತ್ತಾ ಬಿದ್ದಿದ್ದಾಗ ನನ್ನೊಡನೆ ಒಂದು ಮಾತನಾಡುವಷ್ಟು ಹೋಗಲಿ ನನ್ನ ಬಳಿ ಕುಳಿತು ಒಮ್ಮೆ ನನ್ನ ತಲೆನೇವರಿಸುವಷ್ಟು ನಿಮಗೆ ಸಹನೆಯಿರಲಿಲ್ಲ. ನಾನು ರೋಗಿಯಾಗಿದ್ದಾಗ ನಿಮ್ಮಿಂದ ಸಹಾನುಭೂತಿಯ ಒಂದು ಮಾತನ್ನು, ಕರುಣೆಯ ಒಂದು ನೋಟವನ್ನು ಬಯಸಿದ್ದೆ. ನಿಮ್ಮೆದೆಯಲ್ಲಿ ತಲೆಯಿಟ್ಟು ಸಾಯಲು ನಾನು ಸಿದ್ಧಳಿದ್ದೆ. ನನಗೆ ನಿಮ್ಮ ಅಗತ್ಯ ತೀರ ಹೆಚ್ಚಾಗಿದ್ದಾಗ ನಿಮ್ಮ ಸಹಾಯ ಮತ್ತು ಸ್ನೇಹಕ್ಕಾಗಿ ನಾನು ಕಾತರಿಸುತ್ತಿದ್ದಾಗ ನಿಮಗೆ ಮಾತ್ರ ನಾನು ತೀರ ಬೇಡದ ವ್ಯಕ್ತಿಯಾಗಿದ್ದೆ. ನನ್ನನ್ನು ಸುಖವಾಗಿ ಸಾಯಲೂ ಬಿಡದೆ ನನ್ನ ಕಣ್ಣೆದುರಿಗೇ ನೀವು ಇನ್ನೊಬ್ಬಳನ್ನು ಕರಕೊಂಡು ಬಂದಿರಲ್ಲ? ಆ ದಿನವೇ ನನ್ನ ಹೃದಯದ ಆ ವಿಶಾಲವಾದ ಹೂದೋಟ ಬೆಂಕಿಗಾಹುತಿಯಾಯಿತೆಂದು ಬಹುಶಃ ನಿಮಗೆ ತಿಳಿದಿರಲಾರದು. ನೀವಾಗ ಇನ್ನೊಬ್ಬಳ ತೋಳತೆಕ್ಕೆಯಲ್ಲಡಗಿ ಪ್ರಪಂಚವನ್ನು ಮರೆತಿದ್ದಿರಿ. ನಿಮ್ಮ ಕೋಣೆಯಿಂದ ತೇಲಿಬರುತ್ತಿದ್ದ ಆ ಪಿಸುಮಾತುಗಳೂ, ಕಿಲ ಕಿಲ ನಗುವೂ ನನ್ನ ಪಾಲಿಗೆ ಕೆಂಡದ ಉಂಡೆಗಳಾಗಿ ನನ್ನಡೆಗೆ ಬಂದು ಅವು ನನ್ನನ್ನು ಜೀವಂತ ಸುಡುತ್ತಿದ್ದವೆಂದು ನಿಮಗೆ ಹೊಳೆಯಲೇ ಇಲ್ಲ. ಅಲ್ಲವೇ? ಒಂದು ವೇಳೆ ನೀವೇ ರೋಗಿಯಾಗಿ ಹಾಸಿಗೆ ಹಿಡಿದಿದ್ದು ನಾನು ಇನ್ನೊಬ್ಬರೊಡನೆ ಹೋಗಿದ್ದರೆ ಹೇಗಿರುತ್ತಿತ್ತೆಂದು ನೀವು ಎಂದಾದರೂ ಯೋಚಿಸಿದ್ದೀರಾ?"[೭] ಎಂದು ಕೇಳುವ ಪ್ರಶ್ನೆಗೆ ನಸೀಮಾಳ ಮೂಲಕ ಸಾರಾ ಅವರು ಪುರುಷ ಪ್ರಧಾನ ಮುಸ್ಲಿಂ ಸಮುದಾಯವನ್ನು ಬಡಿದ್ದೇಳಿಸಿರುವುದನ್ನು ಕಾಣುತ್ತೇವೆ. ಕೊನೆಗೆ ನಸೀಮಳ ಬದುಕುವ ಛಲ, ಸ್ವಾಭಿಮಾನ, ಬದುಕು ಉತ್ಸಾಹ ನಿಜಕ್ಕೂ ದಂಗುಬಡಿಸುತ್ತದೆ. ಶತಮಾನಗಳಿಂದ ಸಹನಾ ಕಾದಂಬರಿಯೂ ನಫೀಸಾ ತನ್ನ ಕಷ್ಟಗಳಿಂದ ಕನಸುಗಳಿಗೆ ಕಡಿವಾಣ ಹಾಕಿಕೊಂಡು ಸೌಮ್ಯವಾಗಿ ಸಹನಾ ಮೂರ್ತಿಯಾಗಿ ಬೆಳೆದು ಕೊನೆಗೆ ತಾನು ಹಾಕಿಕೊಂಡ ನಿಯಮಗಳನ್ನು ಮುರಿಯುವುದರ ಮೂಲಕ ಬದುಕಿನ ವಾಸ್ತವತೆಯನ್ನು ಕಾಣುತ್ತಾಳೆ. ಇಲ್ಲಿ ಬರೀ ಮುಸ್ಲಿಂ ಮಹಿಳೆಯ ಶೋಷಣೆಯಾಗದೆ ಇಡೀ ಮಹಿಳಾ ಸಮುದಾಯದ ಅಸ್ತಿತ್ವದ ಪ್ರಶ್ನೆಯಾಗುತ್ತದೆ. ಹೀಗೆ "ಸಹನಾ ಮೂರ್ತಿಯಂತಿದ್ದ ಹೆಣ್ಣೆಂದು ಇಂತಹ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೆ, ಪುರುಷ ಪ್ರಧಾನ ಸಂಸ್ಕೃತಿ ಹೇಗೆ ಬದುಕನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದುಕೊಂಡು ಗಹಗಹಿಸುತ್ತದೆ ಎಂಬ ಸತ್ಯವನ್ನು ಲೇಖಕಿ ಇಲ್ಲಿ ಪ್ರಾಮಾಣಿಕವಾಗಿ ದಾಖಲಿಸಿದ್ದಾರೆ"[೮] ಎಂದು ಡಾ.ಬಸವರಾಜ ಸಬರದ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

---

೭. ಪು.ಸಂ. ೧೫೨, ಸಹನಾ, ಸಾರಾ ಅಬೂಬಕ್ಕರ್

೮. ಪು.ಸಂ. ೪೭, ಹೊಸದಿಕ್ಕು, ಡಾ.ಬಸವರಾಜ ಸಬರದ

ಮುಸ್ಲಿಂ ಸಮಾಜದಲ್ಲಿ ಹೆಣ್ಣಿನ ಸುಖ ಬಯಸುವ ಪುರುಷರಿಗೆ ಮಹಿಳೆಯರ ಜವಾಬ್ದಾರಿ ಬೇಕಾಗಿರುವುದಿಲ್ಲ. ಹೆಣ್ಣು ಹುಟ್ಟಿತೆಂದರೆ ತಿರಸ್ಕಾರದಿಂದ ನೋಡುವ ಪುರುಷನನ್ನು ತರಾಟೆಗೆ ತೆಗೆದುಕೊಳ್ಳುವ ಲೇಖಕಿಯ ಆಶಯ ಅವರ ಕಾದಂಬರಿಗಳಲ್ಲಿ ಮೂಡಿ ಬಂದಿದೆ. "ಹೆಣ್ಣು ಯಾರಿಗೂ ಬೇಡವಾಗಿದೆಯೇ? ಹೆಣ್ಣಿನ ಸಂಪರ್ಕವಿಲ್ಲದೇ ಹೆಚ್ಚು ದಿನ ಇರಲು ಸಾಧ್ಯವಿಲ್ಲ. ಅಂದರೆ ಗಂಡಸರಿಗೆ ಹೆಣ್ಣಿನ ಸುಖ ಬೇಕು ಜವಾಬ್ದಾರಿ ಮಾತ್ರ ಬೇಡ. ಹುಟ್ಟುವ ಮಕ್ಕಳೆಲ್ಲ ಗಂಡಾಗಿಯೇ ಹುಟ್ಟಿದರೆ ಆಗ ಈ ಗಂಡಸರೇನು ಮಾಡುತ್ತಿದ್ದರು"[೯] ಎಂದು ಕೇಳುವ ನಸೀಮಾ ಪುರುಷರ ಗಂಡಿನ ಸ್ವಾರ್ಥ ಬುದ್ಧಿಯನ್ನು ಬಯಲಿಗೆಳೆಯುತ್ತಾಳೆ. ಸ್ವಾರ್ಥಿಗಳಾದ ಗಂಡಸರು ಇಂಥ ಮನೋಧರ್ಮದಿಂದ ಮಹಿಳೆಯರ ನೋವು ಕಷ್ಟಗಳಲ್ಲಿ ತೊಳಲಾಡುವಂತಾಗಿದೆ. ಪುರುಷರ ಇಂತಹ ಸ್ತ್ರೀ ವಿರೋಧಿ ಮನಃಸ್ಥಿತಿಯಿಂದ ಮುಕ್ತರಾಗಿ ಪತ್ನಿಯರನ್ನು ಸಹ ಜೀವಿಗಳಾಗಿ ಕಂಡು ಅವಳಿಗೂ ಸಂಸಾರದಲ್ಲಿ ಸಮಾನವಾದ ಸ್ಥಾನ-ಮಾನಗಳನ್ನು ಕೊಡಬೇಕೆಂಬುದು ಲೇಖಕಿಯ ಅಪೇಕ್ಷೆಯಾಗಿದೆ.

ಹೀಗೆ ಶತಮಾನಗಳಿಂದ ಸಂಪ್ರದಾಯದಲ್ಲಿ ಬಂಧಿಯಾಗಿ ಮಾತು ಕಳೆದುಕೊಂಡ ನಸೀಮಾಳಂಥವರು ಇಲ್ಲಿ ಧ್ವನಿ ಎತ್ತಿ ಮಾತನಾಡುವುದರ ಜೊತೆ ಮುಖವೆತ್ತಿ ಬಾಳುವುದನ್ನು ಕಾಣುತ್ತೇವೆ.

ಮುಸ್ಲಿಂ ಸಮಾಜದ ಪುರುಷ ಪರವಾದ ಏಕಮುಖ ನೀತಿಯ ವಿಶ್ಲೇಷಣೆಯಿದೆ. ಹಲವು ನೋವುಗಳನ್ನುಂಡು ಹೊತ್ತು, ಹೆತ್ತು ಮಗುವಿಗೂ ತಾಯಿಗೂ ಯಾವುದೇ ಸಂಬಂಧವಿಲ್ಲದಂತೆ ಮಾಡುವ ಅತ್ಯಂತ ಅಮಾನವೀಯ ನೀತಿಗಳು ಪರಿವರ್ತನೆ ಹೊಂದಬೇಕು ಎಂದು ಲೇಖಕಿ ಆಶಿಸುತ್ತಾರೆ. ಇದೇ ರೀತಿಯಾಗಿ ಗಂಡಸರ ಹಾಗೂ ಸಮಾಜದ ಏಕಮುಖ ನೀತಿಯನ್ನು ಸುಳಿಯಲ್ಲಿ ಸಿಕ್ಕವರು ಕಾದಂಬರಿಯಲ್ಲಿ ಬರುವ ಮರಿಯಮ್ಮ ಪ್ರಶ್ನಿಸುತ್ತಾಳೆ "ಏನು? ನಾನು ಒಂಭತ್ತು ತಿಂಗಳು ಹೊಟ್ಟೆಯಲ್ಲಿಟ್ಟು ಅದನ್ನು ಹೆತ್ತು ಎರಡು ವರ್ಷ ಸಾಕಿ ಆಮೇಲೆ ಅವರಿಗೆ ಕೊಡಬೇಕಾ? ಅದನ್ನು ಕತ್ತು ಹಿಸುಕಿ ಕೊಲ್ಲುತ್ತೇನೆಯೇ ಹೊರತು ಅವರಿಗೆ ಕೊಡುವುದಿಲ್ಲ. ನಾನು ಹೆತ್ತ ಮಗು ನನ್ನದೆ. ನಾನೆ ಅದನ್ನು ಸಾಕುತ್ತೇನೆ. ತಂದೆ ಎನ್ನುವವನು ಸತ್ತು ಹೋದ ಎನ್ನುತ್ತೇನೆ. ಇದೆಂತಹ ಅರ್ಥವಿಲ್ಲದ ನ್ಯಾಯ?"[೧೦] ಎಂದು ಕಠೋರವಾಗಿ ನುಡಿಯುವ ಮರಿಯಮ್ಮ ಪುರುಷನಿಗೆ ನೀಡಿದ ಮುಸ್ಲಿಂ ಸಮಾಜದ ಷರತ್ತುಗಳಿಂದ? ಸಮಾಜದಲ್ಲಿ ತಪ್ಪು ಕಲ್ಪನೆಯಿರುವ ಕಾರಣಕ್ಕಾಗಿ ತನಗಾದ ಅನ್ಯಾಯಕ್ಕೆ ಈ ರೀತಿ ಪ್ರತಿಕ್ರಿಯಿಸುವುದನ್ನು ಕಾಣುತ್ತೇವೆ. ಹೀಗೆ ಮರಿಯಮ್ಮ ನಸೀಮಾಳಂತೆ ಮುಸ್ಲಿಂ ಮಹಿಳೆಯರೆಲ್ಲರೂ ಜಾಗೃತರಾದರೆ ಸಮಾಜದಲ್ಲಿ

---

೯. ಪು.ಸಂ. ೧೫೦, ಸಹನಾ, ಸಾರಾ ಅಬೂಬಕ್ಕರ್

೧೦. ಪು.ಸಂ. ೧೦೧, ಪ್ರವಾಹ ಸುಳಿ, ಸಾರಾ ಅಬೂಬಕ್ಕರ್

ಸ್ತ್ರೀಯರಿಗೆ ಇರುವ ಸ್ಥಾನಮಾನಗಳನ್ನು ಪರಿವರ್ತನೆ ಮಾಡಲು ಸಾಧ್ಯವಾಗುತ್ತದೆ ಎಂದು ಸಮಾಜದ ದಿನನಿತ್ಯದ ಸಂಬಂಧಗಳನ್ನು ತಮಗೆ ತೋಚಿದಂತೆ ಹೇಳುವ ರೀತಿಯನ್ನೇ ಇಲ್ಲಿ ಮರಿಯಮ್ಮ ಪ್ರಶ್ನಿಸುತ್ತಾಳೆ. ತನಗಾದ ಅನ್ಯಾಯದ ನೋವೊಂದನ್ನು ಹೊರಹಾಕುವ/ಪ್ರತಿಭಟಿಸುವ ನೆಲೆಯಾಗಿ ಈ ಪ್ರಶ್ನೆ ಉದ್ಭವಿಸುತ್ತದೆ.

"ಧ್ವನಿಯಿಲ್ಲದ ನೋವುಗಳು" ಕತೆಯಲ್ಲಿ ಜರೀನಾ ಚಿಕ್ಕವಳಿದ್ದಾಗಲೇ ಮುಸ್ತಾಫನೊಡನೆ ವಿವಾಹವಾಗಿ ಏನನ್ನೂ ದುಡಿಯದೆ, ಸೋಮಾರಿಯಾಗಿ ತಂದೆ ಮನೆಯಿಂದ ಹೊರದೂಡಲ್ಪಟ್ಟ ಮುಸ್ತಾಫ, ಜರೀನಾ ತವರು ಮನೆಗೆ ಬಂದು ಸೇರುತ್ತಾನೆ. ನಂತರ ಜರೀನಾಳ ಅಣ್ಣ ಮುಸ್ತಾಫನಿಗೆ ಕೊಲ್ಲಿ ರಾಷ್ಟ್ರದಲ್ಲಿ ಕೆಲಸವೊಂದನ್ನು ದೊರಕಿಸಿಕೊಡುತ್ತಾನೆ. ಮಾವ ಮೌಲ್ವಿಯವರ ಆಸೆಯಂತೆ ಎರಡು ವರ್ಷಗಳ ಕಾಲ ದುಡಿಯುತ್ತಾ ಹೆಂಡತಿಗೆ ಬೇಕಾದ ಬಟ್ಟೆ, ಒಡವೆಗಳನ್ನು ಕಳುಹಿಸುತ್ತಿದ್ದ ಮುಸ್ತಾಫನ ಬಗ್ಗೆ ಜರೀನಾಳಿಗೆ ಹೆಮ್ಮೆ ಮೂಡಿತು.

ಮುಸ್ತಾಫ ಊರಿಗೆ ಬಂದಾಗ ಅತ್ತೆಯವರ ಮನೆಗೆ ಹೋಗಿ ಬರಬೇಕು ಎಂದು ಆಸೆ ಪಟ್ಟಿದ್ದ ಜರೀನಾಳಿಗೆ ಪತ್ರವೊಂದು ಬರುತ್ತದೆ. ಮುಸ್ತಾಫ ವಿನಾಕಾರಣ ಜರೀನಾಳಿಗೆ ತಲಾಖ್ ಕಳುಹಿಸುತ್ತಾನೆ. ಇವಳ ಇನ್ನೊಂದು ಮದುವೆಗೆ ಹಣ ಸಹಾಯ ಮಾಡುವುದಾಗಿ ಹೇಳುತ್ತಾನೆ. ಇದನ್ನು ತಿಳಿದ ಜರೀನಾಳಿಗೆ ಆಘಾತವಾಗುತ್ತದೆ. ಆಲೋಚನ ಶಕ್ತಿ ಇರುವ ಜರೀನಾ ತಾನು ಮಾಡದ ತಪ್ಪಿಗೆ ಈ ಶಿಕ್ಷೆ ಯಾಕೆಂದು ಅರ್ಥವಾಗದೆ ಅಳುತ್ತಾಳೆ. ನಂತರ ಧರ್ಮಗ್ರಂಥವನ್ನು ದುರುಪಯೋಗ ಪಡಿಸಿಕೊಂಡ ಮುಸ್ತಾಫನ ಮೇಲೆ ಹಾಗೂ ಧರ್ಮದ ವಿಚಾರದಲ್ಲಿ ಆಕ್ರೋಶವನ್ನು ವ್ಯಕ್ತಪಡಿಸುತ್ತಾಳೆ. ಅನಂತರ ಅವಳು ತನ್ನ ಅಣ್ಣ ಮೌಲ್ವಿಗಳನ್ನು ಅಣ್ಣಾ ಒಂದೂವರೆ ವರ್ಷಗಳಿಂದ ಒಮ್ಮೆಯೂ ನನ್ನ ಮುಖ ನೋಡದೆ ಕಡಲಾಚೆಗಿದ್ದರು. ನನ್ನ ಯಾವ ತಪ್ಪು ಇಲ್ಲದೆ ನ್ಯಾಯ ವಿಚಾರಣೆಯನ್ನು ಮಾಡದೆ ನನ್ನನ್ನು ಸಮರ್ಥಿಸಿಕೊಳ್ಳಲು ನನಗೆ ಒಂದು ಅವಕಾಶವನ್ನು ಕೊಡದೆ ಒಂದೇ ಸಾರಿ ಮೂರು ತಲಾಖ್‌ಗಳನ್ನು ಹೇಳಿ ಬಿಡುಗಡೆ ಮಾಡಬಹುದು ಎಂದು ಧರ್ಮಗ್ರಂಥ ಬೋಧಿಸುತ್ತದೆಯೇ?"[೧೧] ಎಂದು ಜರೀನಾ ಪ್ರಶ್ನಿಸುತ್ತಾಳೆ. ಹೀಗೆ ಪುರುಷ ಕೇಂದ್ರಿತ ವ್ಯವಸ್ಥೆಯ ವಿರುದ್ಧ ತನ್ನ ಧ್ವನಿಯನ್ನು ಎತ್ತಿದ್ದರೂ ಜರೀನಾಳಲ್ಲಿ ಪ್ರತಿಭಟನೆಯ ಸ್ವರೂಪ ಕಾಣಬಹುದಾದರೂ ಈ ವ್ಯವಸ್ಥೆಯನ್ನು ಮೀರಿ ನಿಲ್ಲುವ ಸೂಚನೆ ಕಾಣುವುದಿಲ್ಲ. ಹೀಗೆ ಲೇಖಕಿ ಇಲ್ಲಿ ತಲಾಖ್ ಎಂಬ ಈ ಪದ್ಧತಿಗೆ ಧರ್ಮ ವ್ಯಾಖ್ಯಾನವನ್ನು ಪರೋಕ್ಷವಾಗಿ ಜರೀನಾಳ ಮೂಲಕ ಪ್ರಶ್ನೆ ಮಾಡುತ್ತಾರೆ. ಇಲ್ಲಿ ಜರೀನಾಳ ಅಣ್ಣ ಒಬ್ಬ ಮಸೀದಿಯ

---

೧೧. ಪು.ಸಂ. ೩೦, ಧ್ವನಿಯಿಲ್ಲದ ನೋವುಗಳು, ಸಾರಾ ಅಬೂಬಕ್ಕರ್

ಮೌಲ್ವಿಯೇ ಆಗಿದ್ದರೂ ತನ್ನ ತಂಗಿಯ ಬಾಳನ್ನು ಸರಿ ಮಾಡಲು ಆಗುವುದಿಲ್ಲ. ಧಾರ್ಮಿಕ ಕೇಂದ್ರದ ಪ್ರತಿನಿಧಿಯಂತಿರುವ ಮೌಲ್ವಿಯೇ ವ್ಯವಸ್ಥೆಯ ಸುಳಿಯಲ್ಲಿ ಸಿಕ್ಕಿ ಆ ವ್ಯವಸ್ಥೆಯ ವಿರುದ್ಧ ಹೋರಾಡದೇ ಅಲ್ಲಿಯೇ ಆ ವ್ಯವಸ್ಥೆಯ ಕ್ರೌರ್ಯದಲ್ಲಿ ಮೌನಿಯಾಗುವುದು ಅವರ ಅಸಹಾಯಕತೆಯನ್ನು ತೋರಿಸುತ್ತದೆ. "ಅಂಕುರ" ಕತೆಯಲ್ಲಿಯೂ ತಲಾಖ್ ಮುಂದುವರೆದ ಭಾಗವಾಗಿ ಲೇಖಕಿ ಚರ್ಚಿಸಿದ್ದಾರೆ. ಬಡ ಕುಟುಂಬದಲ್ಲಿ ಹುಟ್ಟಿದ ಶಕೀಲ, ಕೊಲ್ಲಿ ರಾಷ್ಟ್ರದಲ್ಲಿ ಕೆಲಸ ಮಾಡುತ್ತಿದ್ದಾನೆಂಬ ಹೆಮ್ಮೆಯಿಂದ ಸಲೀಂನನ್ನು ಮದುವೆಯಾಗಿ ಕೆಲವು ದಿನಗಳು ಕಳೆಯುವುದರೊಳಗೆ, ಒಪ್ಪಿಗೆಯಾಗಿದ್ದಷ್ಟು ಚಿನ್ನವನ್ನು ಕೊಟ್ಟಿಲ್ಲವೆಂಬ ಕಾರಣವನ್ನೂ ಅತ್ತೆ ಮತ್ತು ಗಂಡನ ಅಣ್ಣನಾದ ಕರೀಂ ಮಾತನ್ನು ಹೇಳಿದಾಗ, ಸಲೀಂನೇ ಇನ್ನು ಸ್ವಲ್ಪ ದಿನ ಕಾಯೋಣ ಎಂದು ಹೇಳಿ ಶಕೀಲಳಿಗೆ ತೊಂದರೆ ಕಡಿಮೆಯಾಗುವಂತೆ ಮಾಡುತ್ತಾನೆ. ಸಲೀಂ ಕೊಲ್ಲಿ ರಾಷ್ಟ್ರಕ್ಕೆ ಹಾರಿದ ಕೂಡಲೇ ಅತ್ತೆ ಮತ್ತು ಭಾವ ಶಕೀಲಳಿಗೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಹೀಗೆ ಶಕೀಲಾಳ ಹೆಸರಿನಲ್ಲಿ ಸಲೀಂ ತನ್ನ ಮಗುವಿನ ಖರ್ಚಿಗಾಗಿ ಸ್ವಲ್ಪ ಹಣವನ್ನು ಶಕೀಲಳ ಹೆಸರಿಗೆ ಕಳುಹಿಸುವುದರಿಂದ ಕರೀಂ ಕೋಪೋದ್ರಿಕ್ತನಾಗಿ ಗಂಡನ ಮನಸ್ಸು ಕೆಡಿಸಿ, ನನ್ನ ಹೆಸರಿಗೆ ಬರುತ್ತಿದ್ದ ಹಣವನ್ನು ಬರದಂತೆ ಮಾಡಿದ್ದೀಯ ಎಂದು ಹೇಳಿ ಇವಳ ಮೇಲೆ ಸೇಡು ತೀರಿಸಿಕೊಳ್ಳುವಂತೆ ಇದರ ಪರಿಣಾಮವಾಗಿ ಶೀಲಗೆಟ್ಟವಳೆಂಬ ಅಪವಾದ ಹೊರಿಸಿ ಸಲೀಂಗೆ ಇವಳ ಬಗ್ಗೆ ಅನುಮಾನ ಬರುವಂತೆ ಮಾಡಿ ತಲಾಖ್ ಕೊಡಿಸುತ್ತಾನೆ. ನಂತರ ಶಕೀಲಳನ್ನು ಕುರಿಯಂತೆ, ಕೈಕಾಲು ಕಟ್ಟಿಹಾಕಿ ಅವಳ ತಂದೆಯ ಮನೆಗೆ ಎಳೆದು ತಂದು ಹಾಕುತ್ತಾನೆ. ಮಕ್ಕಳನ್ನಾದರೂ ಕೊಡಿ ಎಂದು ಕೇಳುವ ಶಕೀಲಳ ತಂದೆ ಕೇಳಿದಾಗ "ಮಕ್ಕಳ ಹಕ್ಕು ತಂದೆಗೇ ಹೊರತು ತಾಯಿಗಲ್ಲ. ಈಗಿನ ಹೊಸ ನಿಯಮದ ಪ್ರಕಾರ ನಿಮ್ಮ ಮಗಳಿಗೆ ಜೀವನಾಂಶವನ್ನೂ ಕೊಡಬೇಕಾದ್ದಿಲ್ಲ"[೧೨] ಎಂದು ಹೇಳುವ ಮಾತಿಗೆ ಹುಟ್ಟಿದಂದಿನಿಂದಲೂ ಒಂದು ವರ್ಷದವರೆಗೂ ಅವುಗಳ ಮುಖವನ್ನೂ ನೋಡದ ತಂದೆ ಎನ್ನಿಸಿಕೊಂಡವನು ಹೇಗೆ ಪೂರ್ಣ ಹಕ್ಕುದಾರನಾಗುತ್ತಾನೆ? ಎಂದು ಕೇಳುತ್ತಾಳೆ. ಹಾಗೆ ಧರ್ಮ ಎಂದರೇನು? ಎಂದು ಪ್ರಶ್ನಿಸುತ್ತಾಳೆ. ಹೀಗೆ ಪುರುಷರ ಸ್ವಾರ್ಥದ ಮುಂದೆ ಮಹಿಳೆಯ ಧ್ವನಿ ಕಮರಿ ಹೋಗುವುದನ್ನು ಕಾಣುತ್ತೇವೆ. ಈ ಮೂಲಕ ಕತೆಯ ನಿಜವಾದ ಧರ್ಮಶೋಧನೆಗೆ ತೊಡಗಬೇಕೆಂಬುದು ಲೇಖಕಿಯ ಆಶಯವಾಗಿದೆ.

ಸಾರಾ ಅವರ ಮುಖ್ಯ ಪ್ರಶ್ನೆ. "ತಲಾಖ್" ವಿಧಿ ವಿಧಾನಗಳಿಗೆ ಕುರಾನ್‌ನಲ್ಲಿರುವ ಸರಿಯಾದ ವ್ಯಾಖ್ಯಾನ ಏನು? ಈ ನಿಯಮವನ್ನು ಮಹಿಳೆಯರ ಮೇಲೆ ಕ್ರೂರ ಅಸ್ತ್ರವಾಗಿ ಬಳಸಲ್ಪಡುತ್ತಿರುವುದು ಸರಿಯೆ ಎಂಬ ಜಿಜ್ಞಾಸೆಗೆ ಇಲ್ಲಿನ ಕತೆಗಳು ತೊಡಗುತ್ತವೆ.

---

೧೨. ಪು.ಸಂ. ೩೫, ಅಂಕುರ, ಸಾರಾ ಅಬೂಬಕ್ಕರ್

"ಚಪ್ಪಲಿಗಳು" ಈ ಕತೆಯಿಂದ ಇಡೀ ಮಹಿಳೆಯ ಅಸ್ತಿತ್ವಕ್ಕೆ ಮುಸ್ಲಿಂ ಸಮಾಜ ಸ್ತ್ರೀಯರಿಗೆ ಕೊಟ್ಟ ಸ್ಥಾನಮಾನ ಅದರ ಹಿಂದಿನ ಭೀಕರತೆಯ ವಾಸ್ತವತೆಯನ್ನು ಹೇಳುತ್ತದೆ. ಮುಸ್ಲಿಂ ಸಮಾಜದಲ್ಲಿ ಹೆಣ್ಣನ್ನು ಕೇವಲ ಸಂತಾನದ ಅನಿವಾರ್ಯತೆಗೆ ಅವಳನ್ನು ಸೀಮಿತವಾಗಿಸಿ ದುಡಿಯುವ ಯಂತ್ರವನ್ನಾಗಿ ಮಾಡಲಾಗಿದೆ. ಈ ಕತೆಯಲ್ಲಿ ಬರುವ ಸಮೀರಳ ತಾಯಿ, ಫಾತಿಮಾ, ತನ್ನ ಗಂಡನ ಅಪಾಯಕಾರಿ ಆಸಕ್ತಿಗಳನ್ನು ವಿರೋಧಿಸಲು ಸಾಧ್ಯವಾಗದೇ ಇರುವುದರಿಂದ ಅವಳ ಗಂಡ ಹೇಳುವುದನ್ನು ಮೌನವಾಗಿ ಸ್ವೀಕರಿಸಿ ಬರಿ ಮನೆಗೆಲಸ ಮತ್ತು ಹೆರುವ ಪ್ರಕ್ರಿಯೆಗೆ ಮಾತ್ರ ಸೀಮಿತಳಾಗುತ್ತಾಳೆ. ಇದರಿಂದ ಇವಳ ಮಗಳ ಬಾಳಿಗೆ ಮುಳುವಾಗುತ್ತದೆ. ಸಮೀರಳ ತಂದೆ ಕಟ್ಟಾ ಮುಸ್ಲಿಂ ಧರ್ಮಪಾಲಕ, ತನ್ನ ಮಗಳನ್ನು ಚಿಕ್ಕವಯಸ್ಸಿನಲ್ಲಿಯೇ ತನ್ನ ತಂಗಿಯ ಮಗನ ಜೊತೆಗೆ ವಿವಾಹ ಮಾಡುತ್ತಾನೆ. ಸಮೀರಳ ಗಂಡ ವರ್ಷಕ್ಕೊಮ್ಮೆ ರಜೆಯಲ್ಲಿ ಬಂದು ಹೋಗುತ್ತಿದ್ದ. ಗಂಡ ಹತ್ತಿರ ಇದ್ದಾಗಲೆಲ್ಲ ಅವಳು ತುಂಬಾ ಲವಲವಿಕೆಯಿಂದ ಚಟುವಟಿಕೆಯಿಂದ ಇರುತ್ತಿದ್ದಳು. ಶಬೀರ ಕೊಲ್ಲಿ ರಾಷ್ಟ್ರಕ್ಕೆ ದುಡಿಯಲು ಹಿಂದಿರುಗಿದಾಗ ತಂದೆಯ ದಬ್ಬಾಳಿಕೆಗೆ ಹೆದರಿ ಅಂತರ್ ಮುಖಿಯಾಗುತ್ತಿದ್ದಳು. ಮೌನವಾಗಿ ತನ್ನ ತಂದೆ ತಾಯಿಯ ವಿರುದ್ಧ ಮೌನವಾಗಿ ಪ್ರತಿಭಟಿಸುತ್ತಿದ್ದಳು. ಆದರೂ ಅದು ತನ್ನ ಅತ್ತೆ ಮತ್ತು ಗಂಡನ ಮುಕ್ತ ಚಿಂತನೆ ಇವರ ಬೆಂಬಲದ ಹಿನ್ನೆಲೆಯಲ್ಲಿ ಅವಳ ಮೌನ ಪ್ರತಿಭಟನೆ ಅರ್ಥ ಪಡೆದುಕೊಳ್ಳುತ್ತದೆ.

"ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು ಬೇಕಾದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಡಬೇಕು. ಅದು ಬಿಟ್ಟು ತಲೆಯ ಮೇಲಿಟ್ಟುಕೊಂಡರೆ ಹೇಗೆ? ಚಪ್ಪಲಿಯನ್ನು ಎಲ್ಲಿಡಬೇಕೋ ಅಲ್ಲೇ ಬಿಡಬೇಕು"[೧೩] ಎನ್ನುವಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಗುರುತಿಸಬಹುದು. "ಇದರಿಂದಾಗಿ ಹೊರಗಿನ ಪ್ರಪಂಚವನ್ನು ಸುತ್ತಿ ಬಂದ ಚಿಂತನಶೀಲ ಯುವ ಜನಾಂಗದ ಮನಸ್ಸಿನಲ್ಲಿ ಮೂಡುವ ಪ್ರಶ್ನೆಗಳು ಸಹಿತ ಹೊರಗೆ ಬರದೇ ಅಲ್ಲಿಯೇ ಉಳಿಯುತ್ತವೆ. ಆದರೂ ಅಳಿಯ, ಮಾವನ ಉಪದೇಶಕ್ಕೆ ಮೌನವಾಗಿ ಪ್ರತಿಕ್ರಿಯಿಸುತ್ತಾನೆ. "ನಾನು ಚಪ್ಪಲಿಗೆ ಹುಟ್ಟಲಿಲ್ಲ ನನಗೆ ಜನ್ಮ ನೀಡಿದವಳು ಒಂದು ಹೆಣ್ಣು"[೧೪] ಎನ್ನುತ್ತಾನೆ. ಇದರಿಂದ ಮುಸ್ಲಿಂ ಸಮುದಾಯದ ಯುವ ಜನಾಂಗ ಬದಲಾವಣೆಯಾಗುತ್ತಿರುವುದನ್ನು ಕಾಣುತ್ತೇವೆ. ಮುಸ್ಲಿಂ ಸಮುದಾಯದ ಧಾರ್ಮಿಕ ವಿಧಿ-ವಿಧಾನಗಳನ್ನು ತಮ್ಮದೇ ಆದ ನೆಲೆಯಲ್ಲಿ ಅರ್ಥೈಸುವ ಸಮಾಜದ ಪುರುಷ ವರ್ಗವನ್ನು ಲೇಖಕಿ ಅಲ್ಲಲ್ಲಿ ಸೃಜನಾತ್ಮಕ ಪಾತ್ರಗಳ ಮೂಲಕ ಪ್ರಶ್ನಿಸುವ ಬಗೆ ಎಲ್ಲ ಕಥೆಗಳಲ್ಲಿ ಗೋಚರಿಸುತ್ತದೆ. ಆದರೆ ಚಪ್ಪಲಿಗಳು ಕಥೆಯಲ್ಲಿ ಈ ಸಮುದಾಯದಲ್ಲೂ ಪರಿವರ್ತನೆಯ ಗಾಳಿ ಬೀಸಿರುವುದನ್ನು ಗಮನಿಸಬಹುದು. ಹೆಣ್ಣಿನ

---

೧೩. ಪು.ಸಂ. ೧೭, ಚಪ್ಪಲಿಗಳು, ಸಾರಾ ಅಬೂಬಕ್ಕರ್

೧೪. ಪು.ಸಂ. ೧೮, ,, ,,

ವಿಚಾರದಲ್ಲಿ ಮಾವ ಹೇಳಿರುವ ಮಾತುಗಳನ್ನು ಕೇಳಿಸಿಕೊಳ್ಳದೆಯೆ ಅಳಿಯ ಪ್ರತಿಕ್ರಿಯಿಸುವ ಬಗೆ ವ್ಯವಸ್ಥೆಯ ನೈಜ ಚಿತ್ರಣವನ್ನು ಕೊಡುತ್ತದೆ. ನೇರವಾದ ಪ್ರಶ್ನೆಯಾಗದಿದ್ದರೂ ಹೆಣ್ಣಿನ ಕುರಿತ ಸಹಾನುಭೂತಿಯ ಇಲ್ಲವೆ ಹೆಣ್ಣಿನ ಪರವಾದ ಧ್ವನಿ ವ್ಯಕ್ತಗೊಳ್ಳುತ್ತದೆ. ಹೆಣ್ಣೊಬ್ಬಳು ಕೇಳಬೇಕಾದ ಪ್ರಶ್ನೆಯನ್ನು ಅವಳ ಮೂಕ ಧ್ವನಿಯ ಒತ್ತಾಸೆಯಾಗಿ ಪ್ರತಿಕ್ರಿಯಿಸಿದಂತಾಗಿದೆ.

"ಧರ್ಮ ಬಲೆ ಬೀಸಿದಾಗ" ಖತೀಜಾಬಿ ತುಂಬಾ ಸುಂದರವಾಗಿದ್ದಳು. ಇದರಿಂದ ಇವಳನ್ನು ಕಲೀಂಸಾಬನ್ನು ಮದುವೆಯಾಗಿ ಬಂದಾಗಿನಿಂದಲೂ ಊರವನಾದ ಇಬ್ರಾಹಿಂ ಕಣ್ಣು ಇತ್ತು. ಕೆಲವು ಕಾಲದ ನಂತರ ಕರೀಂಸಾಬ ತನ್ನ ಮಗನನ್ನು ಕರೆದುಕೊಂಡು ದುಡಿಯಲು ಬೊಂಬಾಯಿಗೆ ಹೋಗುತ್ತಾನೆ. ಇಲ್ಲಿ ಊರಲ್ಲಿ ಖತೀಜಾಬಿ ತನ್ನ ಮಗಳು ಸೊಸೆಯೊಂದಿಗೆ ಗೌರವದಿಂದ ಬದುಕುತ್ತಿರುತ್ತಾಳೆ. ಹೀಗೆ ಮೊದಲಿನಿಂದಲೂ ಖತೀಜಾಬಿಯ ಮೇಲೆ ಕಣ್ಣಿಟ್ಟಿದ ಇಬ್ರಾಹಿಂ ಈಗ ಅವಳನ್ನೇ ಹೋಲುವ ಆಕೆಯ ಮಗಳನ್ನು ವಿವಾಹವಾಗಲು ಬಯಸುತ್ತಾನೆ. ಇದಕ್ಕೆ ಒಪ್ಪದ ಖತೀಜಾಬಿಯನ್ನು ಧರ್ಮದ ಬೆದರಿಕೆ ಹಾಕುತ್ತಾನೆ. ಅಷ್ಟೇ ಅಲ್ಲದೆ ಧರ್ಮದ ಅಧಿನಿಯಮದ ಪ್ರಕಾರ ಅವಳು ಮಸೀದಿಗೆ ಬಂದು ಚಡಿ ಏಟು ತಿಂದು ಕ್ಷಮೆ ಕೇಳಬೇಕು ಎಂದು ಮೌಲ್ವಿಗಳ ಮುಖಾಂತರ ಹೇಳಿ ಕಳುಹಿಸುತ್ತಾನೆ. ಇದಕ್ಕೂ ಖತೀಜಾಬಿ ಹೆದರದೆ, ತನ್ನ ಗಂಡನನ್ನು ಬೊಂಬಾಯಿಂದ ಕರೆಯಿಸಿಕೊಂಡು ಎಲ್ಲ ವಿಚಾರವನ್ನೂ ಹೇಳುತ್ತಾಳೆ. ಆದರೆ 'ಜಮಾ ಅತ್'ನ್ನು ಎದುರು ಹಾಕಿಕೊಳ್ಳಲು ಮೊದಲು ಕರೀಂ ಹೆದರುತ್ತಾನೆ. ಇದರಿಂದ ತನ್ನ ಹೆಂಡತಿಗೆ ಕ್ಷಮೆ ಕೇಳುವಂತೆ ಒತ್ತಾಯಿಸುತ್ತಾನೆ. ಆಗ ಖತೀಜಾಬಿ "ಹೆಡೆ ತುಳಿಸಿಕೊಂಡ ಹಾವಿನಂತೆ ಬುಸುಗುಟ್ಟುತ್ತಾ ಏನಂದ್ರಿ, ಏನಂದ್ರಿ? ನಾನು ಮಸೀದಿಗೆ ಹೋಗಿ ಆ ನೀಚರ ಕೈಯಿಂದ ಪೆಟ್ಟು ತಿನ್ನಬೇಕೆ? ಮಸೀದಿಗೆ ಹೋಗಿ ಪೆಟ್ಟು ತಿಂದು ನಾನು ಮಾಡದ ತಪ್ಪನ್ನು ಒಪ್ಪಿಕೊಳ್ಳಲೇ? ಎಂದು ಸ್ವಾಭಿಮಾನ ಶೂನ್ಯನಾದ ಗಂಡನಿಗೆ ಪ್ರಶ್ನೆ ಹಾಕುತ್ತಾಳೆ. ನಂತರ ಕರೀಂ ತನ್ನ ಹೆಂಡತಿ ಮಾತಿನಿಂದ ವಕೀಲರ ಬಳಿಹೋಗಿ ಸಮಸ್ಯೆಯನ್ನು ಹೇಳುತ್ತಾನೆ. ಅವರ ಸಲಹೆಯಂತೆ ಪೋಲೀಸ ಠಾಣೆಯಲ್ಲಿ ದೂರು ಕೊಡುತ್ತೇನೆ ಎಂದಾಗ ಆಗ ಜಮಾತ್‌ನವರು ಗಾಳಿಹೋದ ಬಲೂನಿನಂತಾಗಿ ತಮ್ಮ ಮಾತನ್ನು ಬದಲಿಸುತ್ತಾರೆ. ಹೀಗೆ ಬುರಕಾದ ಒಳಗಿದ್ದ ಮಹಿಳೆ ಈ ರೀತಿಯಾಗಿ ಸಿಡಿದೆದ್ದು ಇಡೀ ಧರ್ಮವನ್ನು ಪ್ರಶ್ನಿಸಿ ಅದಕ್ಕೆ ಸವಾಲೆಸೆದು ಪ್ರಜಾಪ್ರಭುತ್ವದಡಿಯಲ್ಲಿಯೇ ಅದಕ್ಕೆ ಉತ್ತರ ಕಂಡುಕೊಂಡ ವಿಚಾರವನ್ನು ಹೇಳುವ ಧೋರಣೆ ವಿಚಾರಶೀಲವಾದುದು"[೧೫] ಎಂದು ಹೇಳಬಹುದು.

"ನಿಯಮ ನಿಯಮಗಳ ನಡುವೆ" ಯ ಜೊಹರಾ ಚಿಕ್ಕಂದಿನಿಂದಲೇ ಶಾಲೆಗೆ ಹೋಗದೆ, ಶ್ರೀಮಂತರ ಮನೆಯಲ್ಲಿ ದುಡಿದು ಆ ಮನೆಯ ಒಡತಿಯಿಂದ ಬೈಗುಳು ಏಟು ತಿಂದು ಬಂದ

---

೧೫. ಪು.ಸಂ. ೨೪, ಧರ್ಮ ಬಲೆ ಬೀಸಿದಾಗ, ಸಾರಾ ಅಬೂಬಕ್ಕರ್

ಆದಾಯದಿಂದ ಜೀವನ ಸಾಗಿಸುತ್ತ ಇವಳ ತಾಯಿ ಜೋಹರಳಿಗೆ ಕಿವಿಯ ಆಭರಣ ಮಾಡಿಸಿರುತ್ತಾಳೆ. ಇವಳು ವಿವಾಹವಾದ ಮೇಲೆ ಇವಳ ಗಂಡ ಶಾಫಿ ಆ ಆಭರಣವನ್ನು ಕೊಡು ಎಂದು ಕೇಳಿದಾಗ ಇದನ್ನು ತಾಯಿಯ ಅನುಮತಿ ಪಡೆಯದೆ ಕೊಡುವುದಿಲ್ಲ ಎಂಬ ಕಾರಣಕ್ಕೆ ಇವಳಿಗೆ ತಲಾಖ್ ಕೊಡುತ್ತಾನೆ. ನಂತರ ಮಕ್ಕಳನ್ನು ಬಿಟ್ಟಿರಲು ಸಾಧ್ಯವಿಲ್ಲವೆಂದಾಗ ಇವಳನ್ನು ಮತ್ತೆ ವಿವಾಹವಾಗಲು ಬಯಸುತ್ತಾನೆ. ಇಸ್ಲಾಂ ಧಾರ್ಮಿಕ ನಿಯಮದ ಪ್ರಕಾರ, ಒಮ್ಮೆ ತಲಾಖ್ ಪಡೆದ ಮಹಿಳೆ ಮತ್ತೆ ತನ್ನ ಮೊದಲಿನ ಗಂಡನ ಜೊತೆ ವಿವಾಹವಾಗಬೇಕಾದರೆ ಒಂದು ದಿನದ ಮಟ್ಟಿಗಾದರೂ ಬೇರೊಬ್ಬನನ್ನು ವಿವಾಹವಾಗಿ ಆತನಿಂದ ತಲಾಖ್ ಪಡೆಯಬೇಕು. ಇದನ್ನು 'ಒಜ್ಜಿತ್' ಎಂದು ಕರೆಯಲಾಗುತ್ತದೆ. ಆದರೆ ಜೋಹರಳಿಗೆ ಈ ರೀತಿಯಾಗಿ ತನ್ನ ವಿವಾಹವಾಗುವುದು ಇಷ್ಟವಿಲ್ಲದೆ ಮೊದಲು ನಿರಾಕರಿಸುತ್ತಾಳೆ. ನಂತರ ಇವಳ ತಾಯಿಯ ಒತ್ತಡ ಬಲವಂತದಿಂದ ಮಕ್ಕಳ ಭವಿಷ್ಯಕ್ಕಾಗಿ ಆರ್ಥಿಕ ಸಹಾಯಕತೆಯಿಂದ ಒಂದು ದಿನದ ವಿವಾಹಕ್ಕೆ ಒಪ್ಪಿಗೆ ನೀಡುತ್ತಾಳೆ. ಆದರೆ ಇವಳು ಹೆರಿಗೆಯಾದ ಮೇಲೆ ಋತುಸ್ನಾನವಾಗದೇ ಇರುವುದರಿಂದ ಒಂದು ದಿನದ ವಿವಾಹಕ್ಕೆ ಅಡ್ಡಿಯಾಗುತ್ತದೆ ಎಂದು ಇವಳ ತಾಯಿ ಜೋಹರಳಿಗೆ ನಾಟಿ ಔಷಧಿಯನ್ನು ಕೊಡಿಸುತ್ತಾಳೆ. ಆದರೆ ಇದರಿಂದ ಅವಳಿಗೆ ರಕ್ತಸ್ರಾವ ಹೆಚ್ಚಾಗಿ ಸಾವನ್ನಪ್ಪುತ್ತಾಳೆ. ಹೀಗೆ ಪುರುಷರು ಧಾರ್ಮಿಕ ನಿಯಮಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಕಾರ್ಯರೂಪಕ್ಕೆ ತರುವಾಗ ಪುರುಷರ ಹಿತವೇ ಮುಖ್ಯವಾಗುತ್ತದೆಯೇ ಹೊರತು ಹೆಣ್ಣಿನ ಮನಸ್ಸು ಅರ್ಥಮಾಡಿಕೊಳ್ಳುವುದಿಲ್ಲ. ಬೇಕೆನಿಸಿದಾಗ ಒಪ್ಪಿಕೊಳ್ಳುವ ಬೇಡವೆನಿಸಿದಾಗ ದೂರ ಸರಿಸುವ ಪುರುಷರ ದೌರ್ಜನ್ಯಕ್ಕೆ ಹೆಣ್ಣು ಮಕ್ಕಳು ಬಲಿಪಶುವಾಗುವುದನ್ನು ಈ ಕತೆ ತೋರಿಸುತ್ತದೆ. ಮಹಿಳೆಯ ಬದುಕು ಗಂಡಿನ ಅಡಿಯಲ್ಲಿ ನಡೆಯಬೇಕಾಗಿರುವಂತಹ ಪರಿಸ್ಥಿತಿಯು ಧರ್ಮದ ಹೆಸರಿನಲ್ಲಿ ನಿರ್ಮಾಣವಾಗಿರುವುದನ್ನು ಲೇಖಕಿ ಸೂಕ್ಷ್ಮವಾಗಿ ಪ್ರಶ್ನಿಸುತ್ತಾರೆ. ಈ ಪ್ರಕೃತಿಯ ನಿಯಮವನ್ನೇ ನಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವುದೇ ಎಂಬ ಅಮೀನಳ ಪ್ರಶ್ನೆ ಅತ್ಯಂತ ಮಹತ್ವಪೂರ್ಣವೆನಿಸುತ್ತದೆ.

"ಉರಿ ಬಿಸಿಲು" ಬಾಲ್ಯದಿಂದಲೂ ಓದಿನಲ್ಲಿ ಆಸಕ್ತಿ ಹೊಂದಿದ್ದ ಅಮೀನಾ ತನ್ನ ಸಮುದಾಯದ ಸಂಪ್ರದಾಯದ ಬಗ್ಗೆ ತನ್ನ ಕುಟುಂಬದ ಮೌಢ್ಯತೆಯ ಬಗ್ಗೆ ಪ್ರತಿಭಟನೆಯ ಧ್ವನಿ ಎತ್ತಿದ್ದವಳು. ಮದುವೆಯಾದ ನಂತರ ತನ್ನ ಆದರ್ಶಗಳನ್ನು ತನ್ನ ಬದುಕಿನಲ್ಲಿ ತರಲು ಬಯಸುತ್ತಾಳೆ. ಸಾಕಷ್ಟು ಗಾಳಿ ಬೆಳಕು ಬರುವಂತೆ ಮನೆಗೆ ಕಿಟಕಿ ಬಾಗಿಲುಗಳನ್ನು ಇಡಬೇಕು, ಎರಡೇ ಮಕ್ಕಳು ಸಾಕು. ಪೌಷ್ಠಿಕ ಆಹಾರ ಬೇಕೆನ್ನುವ ಅವಳ ಬಯಕೆ ಇವಳ ಗಂಡನ ಮನೆಯವರಿಗೆ ಮತ್ತು ಇವಳ ಸುತ್ತಮುತ್ತಲಿರುವವರಿಗೆ ಹಠಮಾರಿಯಾಗಿ ಕಾಣುತ್ತದೆ. ಇದು ಅಮೀನಾಳ ಗಂಡನಿಗೆ ಕೋಪ ಬರುವಂತೆ ಮಾಡುತ್ತದೆ. ಇದರಿಂದ ಅಮೀನಾಳ ಗಂಡ ಇದೆ ನೆಪವೊಡ್ಡಿ ಇನ್ನೊಂದು ವಿವಾಹವಾಗುತ್ತಾನೆ.

"ಈ ನಾಲ್ಕಕ್ಷರ ಕಲಿತ ಹುಡುಗಿಯನ್ನು ಮದುವೆಯಾಗಿ ನನ್ನ ಮಗ ಹಾಳಾದ"[೧೬] ಎಂದು ಅಮೀನಳ ಅತ್ತೆಯ ಮಾತುಗಳಿಂದ ವಿದ್ಯಾವಂತ ಮಹಿಳೆಯರ ವಿರುದ್ಧ ಈ ಧೋರಣೆ ಬದಲಾವಣೆಯನ್ನು ತಿರಸ್ಕರಿಸುವುದರ ಮೂಲಕ ಹೆಣ್ಣನ್ನು ಮೌಢ್ಯದಲ್ಲೇ ಉಳಿಸಿ ಅವಳ ಆಂತರಿಕ ಹಂಬಲವನ್ನು ಆದರ್ಶ ಸ್ವತಂತ್ರ್ಯವನ್ನು ಹತ್ತಿಕ್ಕುವುದು ಒಂದು ಹುನ್ನಾರವಾಗಿದೆ. ಅಮಿನಾ ತನ್ನ ತಂದೆ ಇಬ್ಬರು ಹೆಂಡತಿಯನ್ನು ವಿವಾಹವಾಗಿರುವುದನ್ನು ವಿರೋಧಿಸುತ್ತಿದ್ದ ಅಮೀನಾ ತನ್ನ ಗಂಡನೇ ಇನ್ನೊಬ್ಬಳನ್ನು ಕಟ್ಟಿಕೊಂಡು ಈಕೆಯನ್ನು ನಿರಾಕರಿಸುವುದರಿಂದ ಅಮೀನಾ ಹೇಳುವಂತೆ "ನನ್ನ ಮೇಲೆ ಕಲ್ಲೆಸೆಯುವವರೂ, ಈ ಅನ್ಯಾಯಕ್ಕೆ ಒಳಗಾಗುವವರೂ ಸ್ತ್ರೀಯರೇ ಎಂಬುದನ್ನು ಯೋಚಿಸಿದಾಗ ನನಗೆ ಇವರ ಕುರಿತು ಜಿಗುಪ್ಸೆಯಾಗುತ್ತದೆ."[೧೭] ಪುರುಷರು ತಮ್ಮ ಸ್ವಾರ್ಥಕ್ಕೆ ಒಂದು ಹೆಣ್ಣನ್ನು ಹತ್ತಿಕ್ಕಲು ಇನ್ನೊಂದು ಹೆಣ್ಣನ್ನು ಬಳಸಿಕೊಳ್ಳುವುದು ಕೂಡ ಪುರುಷರ ಸ್ವಾರ್ಥವೇ ಆಗಿದೆ. ಹೀಗೆ ಪುರುಷರ ಇಂತಹ ಶೋಷಣೆಗೆ ಮತ್ತೆ ಮತ್ತೆ ಮಹಿಳೆಯರೇ ಬಲಿಯಾಗುವುದನ್ನು ಕಾಣುತ್ತೇವೆ. ಹೆಣ್ಣಿಗೆ ಹೆಣ್ಣೆ ಶತ್ರುಗಳು ಎಂಬಂತೆ ನಡೆದುಕೊಳ್ಳುವುದರ ನಿರೂಪಕಿಯೇ ಹೇಳುವಂತೆ "ಓರ್ವ ಹೆಣ್ಣನ್ನು ಹತ್ತಿಕ್ಕಲು ಇನ್ನೊರ್ವ ಹೆಣ್ಣನ್ನು ಬಳಸಿದ ಅಮೀನಾಳ ಗಂಡನಿಗಿಂತಲೂ ಇನ್ನೋರ್ವ ಹೆಣ್ಣೆ ನನ್ನ ತಿರಸ್ಕಾರ ಮತ್ತು ದ್ವೇಷಕ್ಕೆ ಗುರಿಯಾದಳು. ಇದೂ ಕೂಡ ಗಂಡನ ಸಾಧನೆಯಲ್ಲವೇ? ಒಡೆದು ಆಳುವ ನೀತಿ"[೧೮] ಪುರುಷ ಸ್ವಾರ್ಥವನ್ನು ಬಿಚ್ಚಿ ತೋರಿಸುತ್ತದೆ ಎನ್ನುವ ಪ್ರತಿಕ್ರಿಯೆ ಒಂದು ಸವಾಲಾಗಿ ಅಥವಾ ಬಗೆಹರಿಯದ ಪ್ರಶ್ನೆಯಾಗಿ ತೋರುತ್ತದೆ.

"ವಿಜ್ಞಾನ ಭವಿಷ್ಯ ನುಡಿದಾಗ" ಕತೆಯಲ್ಲಿ ಪುರುಷ ಕೇಂದ್ರ ವ್ಯವಸ್ಥೆ ಹೆಣ್ಣು ಗಂಡು ಮಗುವನ್ನೇ ಹೆರಬೇಕು ಇದರಿಂದಲೇ ಅವಳಿಗೆ ಮುಕ್ತಿ, ಇಲ್ಲವೆ ಅವಳ ಬಾಳು ನರಕ ಎಂಬುದನ್ನು ಸಾರಾ ಅವರು ಈ ಕತೆಯ ಮೂಲಕ ಚಿತ್ರಿಸಿದ್ದಾರೆ. ಮಕ್ಕಳೆರಡು ಸಾಕೆಂದು ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂಬ ಹಂಬಲ ಹೊಂದಿದ್ದ ಮಾಲಿನಿ ಇವಳಿಗೆ ಮೊದಲೆರಡು ಹೆಣ್ಣು ಮಕ್ಕಳಾಗಿದ್ದರಿಂದ ಗಂಡಾದ ಬಳಿಕವೇ ಶಸ್ತ್ರ ಚಿಕಿತ್ಸೆ ಮಾಡಿಸಿ ಕೊಳ್ಳಬೇಕೆಂಬುದು ಇವಳ ಗಂಡನ ನಿಯಮ. ಹೆಂಡತಿಯಿಂದ ಗಂಡುಮಗುವನ್ನು ನಿರೀಕ್ಷಿಸುವ ಮತ್ತು ಹೆಣ್ಣಾದರೆ ಭ್ರೂಣಾವಸ್ಥೆಯಲ್ಲಿ ಅದನ್ನು ನಾಶಪಡಿಸಬೇಕೆಂಬ ಒತ್ತಡ ಹೆಂಗಸರನ್ನು ಯಾವ ಸ್ಥಾನದಲ್ಲಿ ಇಟ್ಟಿದ್ದಾರೆಂಬುದನ್ನು ನೋಡಬಹುದು. ಗಂಡು ಮಗುವನ್ನು ಹೆತ್ತರೆ ಅವಳಿಗೆ ಪುರಸ್ಕಾರ ದೊರೆಯುತ್ತದೆ. ಹೆಣ್ಣು ಹೆತ್ತರೆ ತಿರಸ್ಕಾರ ಹೆಂಡತಿ ಎಂದರೆ ಗಂಡನ ಎಲ್ಲ ಆಸೆಗಳನ್ನು ಪೂರೈಸುವ ಹಾಗೂ ಭಾವನೆಗಳೇ ಇಲ್ಲದೆ ಅವಳ ಗರ್ಭದಲ್ಲಿ ಹೆಣ್ಣಿನ ಲಕ್ಷಣವೇನಾದರೂ ಕಂಡರೆ

---

೧೬. ಪು.ಸಂ. ೨೬, ಉರಿ ಬಿಸಿಲು, ಸಾರಾ ಅಬೂಬಕ್ಕರ್

೧೭. ಪು.ಸಂ. ೮೦, ,, ,,

೧೮. ಪು.ಸಂ. ೮೦, ,, ,,

ಗರ್ಭಪಾತ ಮಾಡಿಸಿಕೊಳ್ಳಲು ಸಿದ್ಧಳಿರಬೇಕು. ನಿರ್ಧಾರಗಳನ್ನು ವಿಷಾದದಿಂದ ಚಿತ್ರಿಸಿದ್ದಾರೆ. ಈ ಕತೆಯಲ್ಲಿ ಸಾರಾ ಅವರು ಹಿಂದೂ ಸಮಾಜದ ಒಳಗಿನ ಈ ಸಂಘರ್ಷವನ್ನು ತಮ್ಮ ಮತೀಯ ಆವರಣದಿಂದ ದೂರ ಇದ್ದೂ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಭಾರತೀಯ ಸಂಪ್ರದಾಯದಂತೆ ಗಂಡು ಮಾತ್ರ ವಂಶದ ಉದ್ಧಾರಕನೆಂದು ಹೇಳಿರುವುದರಿಂದ ಹೆಣ್ಣಿನ ಜೀವನ ಕಣ್ಣೀರಿನ ಕತೆಯಾಗಿ ಕೊನೆಯವರೆಗೂ ಉಳಿಯುತ್ತದೆ. ವೈದ್ಯಕೀಯ ಆವರಣದೊಳಗೂ ನಿರ್ಣಯಾತ್ಮಕವಾಗಿ ಸಮ್ಮತಿಯ ಹಕ್ಕು ಗಂಡಿನದೇ ಆಗಿರುವುದರಿಂದ ಗಂಡಿನ ತೀರ್ಮಾನವೇ ಅಂತಿಮವಾಗಿಸಿಕೊಳ್ಳುತ್ತವೆ. ಆದರೆ ಅವು ವೈಯಕ್ತಿಕವಾಗಿ ಮಾಲಿನಿಯ ಅಸ್ತಿತ್ವವನ್ನು ತಿರಸ್ಕರಿಸುವ ನೆಲೆಗೆ ಸರಿಯುತ್ತವೆ. ಇಲ್ಲಿ ಮಾಲಿನಿಯ ಅಸ್ತಿತ್ವದ ಪ್ರಶ್ನೆ ಎದುರಾಗುತ್ತದೆ. ಇದನ್ನು ವಿರೋಧಿಸುವ ಆಕೆಯ ಪ್ರಯತ್ನ ಯಶಸ್ವಿಯಾಗುವುದಿಲ್ಲ.

ಬೇಕು ಬೇಡಗಳ ಸಂಘರ್ಷದಲ್ಲಿ ಕರುಳಿನ ಕುಡಿ ನಶಿಸಿ ಹೋಗಿತ್ತು. ಆದ ಗಾಯದ ಮೇಲೆ ಬರೆ ಎಳೆದಂತೆ ಎಲ್ಲರ ನಿರೀಕ್ಷೆಯ ಗಂಡು ಕೂಸೇ ಬಲಿಯಾದ ಸುದ್ದಿ ತಿಳಿದಾಗ ಮಧುಕರನಿಗೆ ಹೆರುವ ಕರುಳಿನ ವೇದನೆ ತಟ್ಟಿರುವುದನ್ನು ಕಾಣುತ್ತೇವೆ. ಆದರೆ ವೈದ್ಯಕೀಯ ವ್ಯವಸ್ಥೆಯೊಳಗಿನ ನಿರ್ಲಕ್ಷ್ಯ ಸೂಚಿಸುತ್ತದೆ. ವಿಜ್ಞಾನ ಎಷ್ಟೇ ಪ್ರಗತಿ ಸಾಧಿಸಿದರೂ ಕೆಲವೊಮ್ಮೆ ಇಂತಹ ಅಚಾತುರ್ಯವಾಗುತ್ತವೆ. ಇಂಥ ಒತ್ತಡಗಳನ್ನು ವಿಜ್ಞಾನ ಹೇರುತ್ತದೆ. ತನ್ನೊಡನೆ ಇರುವ ಸಾಕು ಪ್ರಾಣಿಗಳಲ್ಲಿ ಹೆಣ್ಣನ್ನು ಬಯಸುವ ಮಾನವನ ಆಶಯ ತನ್ನ ಬದುಕಿನ ಸಂದರ್ಭದಲ್ಲಿ ಅದನ್ನು ತಿರಸ್ಕರಿಸುತ್ತದೆ. ಇದಕ್ಕೆ ಕಾರಣ ಗಂಡು ಬದುಕಿಗೆ ಮೂಲಭೂತವಾದುದು. ಹೆಣ್ಣು ತನ್ನ ಆಶಯಗಳನ್ನು ಅವನಷ್ಟೇ ಪ್ರಬಲವಾಗಿ ಪ್ರತಿಪಾದಿಸದಿರುವುದು ಆದ್ದರಿಂದ ಮಾಲಿನಿ ತೋರುವ ಪ್ರತಿಭಟನೆ ಸಾಂಪ್ರದಾಯಿಕ ಮೌಲ್ಯಗಳಿಗೆ ತೋರಿದ ಪ್ರತಿಭಟನೆಯಾಗಿದೆ. ಗಂಡಿನ ಇಷ್ಟಕ್ಕೆ ಅನುಗುಣವಾಗಿ ಗರ್ಭತೆಗೆಸಿಕೊಳ್ಳುವ ಹಿಂಸೆಯು ಹೆಣ್ಣಿಗಷ್ಟೇ ಸೀಮಿತವಾಗಿ ಬಿಡುವುದರಿಂದ ಗಂಡು ಅದರ ಹಿಂಸೆ ಒತ್ತಡಗಳಿಂದ ಸುಲಭವಾಗಿ ತಪ್ಪಿಸಿಕೊಳ್ಳುತ್ತಾನೆ. ಹೀಗೆ ಇಲ್ಲಿ ಮಾಲಿನಿ ಮಧುಕರನ ತೀರ್ಮಾನವನ್ನು ಖಚಿತವಾಗಿ ತಿರಸ್ಕರಿಸಲು ಯಾಕೆ ಸಾಧ್ಯವಾಗುವುದಿಲ್ಲವೆಂದರೆ ಅವಳ ಬದುಕು ಪೂರ್ಣವಾಗಿ ಗಂಡನ ಮೇಲೆ ಆಧಾರವಾಗಿದೆ. ಆತನೇನಾದರೂ ನಿರ್ಲಕ್ಷ್ಯಿಸಿ ಬಿಟ್ಟರೆ ಆಕೆ ಸ್ಥಿತಿ ಈಗಿರುವುದಕ್ಕಿಂತಲೂ ಚಿಂತಾಜನಕವಾಗಬಹುದಾದ ಸಾಧ್ಯತೆ ಇರುವುದರಿಂದ ಮತ್ತು ಸಾಂಪ್ರದಾಯಿಕ ಆವರಣವು ಸೃಷ್ಟಿಸಿರುವ ಕೌಟುಂಬಿಕ ಬಂಧನವು ಸ್ವತಂತ್ರಳಲ್ಲದ ಹೆಣ್ಣಿಗೆ ಅನಿವಾರ್ಯವಾದುದರಿಂದ ಮಾಲಿನಿ ಗಂಡನ ಜೀವ ವಿರೋಧಿ ಆಶಯಗಳಿಗೆ ತಲೆಬಾಗಬೇಕಾಗುತ್ತದೆ. ಹೆಣ್ಣಿನ ಮೇಲೆ ಇಂಥ ಹಿಡಿತವನ್ನು ಸ್ಥಿರವಾಗಿಸಲು ಗಂಡು ಅವಳಿಗೆ ಆರ್ಥಿಕ ಹಕ್ಕನ್ನು ನೀಡಲು ನಿರಾಕರಿಸುತ್ತಾನೆ. ಮಧುಕರನ ಗಂಡು ಮಗುವಿನ ಬಯಕೆ ಎಷ್ಟು ಅಪಾಯಕಾರಿಯಾಗಿದೆ ಎಂದರೆ "ನೋಡಿ ಆ ದಿನ ವೈದ್ಯರಂದರಲ್ಲ ಬದುಕು ಕೊಟ್ಟಿದ್ದನ್ನು ಸ್ವೀಕರಿಸಬೇಕೂಂತ ನಿಮಗೆ ಇಬ್ಬರು ಮಕ್ಕಳಿದ್ದಾರೆ ನಮ್ಮ ಆದಾಯಕ್ಕೆ ಅವು ಧಾರಾಳ ಸಾಕು ಇಲ್ಲಿಗೆ ನಿಲ್ಲಿಸಿಬಿಡೋಣ ಎಂದ ತಕ್ಷಣ

ಮಧುಕರ "ಅದು ಹೇಗಾಗುತ್ತದೆ?"[೧೯] ಒಂದು ಗಂಡು ಮಗು ಇಲ್ಲಿ ಬೇಕೆ ಬೇಕು ಮಾಲಿನಿಯ "ಗರ್ಭ ಗಂಡಿನ ಲಕ್ಷಣ ತೋರಿದ ನಂತರ ಆಕೆ ಗರ್ಭಧರಿಸಬೇಕು ಮತ್ತು ಹೆಣ್ಣಿನ ಲಕ್ಷಣ ಬಂದಾಗಲೆಲ್ಲಾ ತೆಗೆಸಬೇಕು ಮಧುಕರನ ಈ ನಿರ್ಧಾರಗಳು ಆಕೆಯನ್ನು ಪ್ರತಿಕ್ರಿಯಿಸಲಾರದ ಅಸಹಾಯಕತೆಯ ಆಘಾತಕ್ಕೆ ದೂಡುತ್ತವೆ. ಕೌಟುಂಬಿಕ ಸನ್ನಿವೇಶದಲ್ಲಿ ಹೆಣ್ಣು ಗಂಡಿನ ಸಾಧ್ಯತೆಗಳನ್ನು ಅರ್ಥ ಮಾಡಿಕೊಂಡಿರುವುದಕ್ಕೆ ಹೆಣ್ಣಿನ ಆಶಯಗಳನ್ನು ಅವಳು ಮಾನವೀಯವಾಗಿ ಬದುಕುವ ನೆಲೆಗಳನ್ನು ಗಂಡು ಬೇಕೆಂದೇ ತಿರಸ್ಕರಿಸುತ್ತಾನೆ ಎಂಬುದು ಮಾಲಿನಿ "ಹೆಂಡತಿ ಎಂದರೇನು?" ಎಂದು ಕೇಳುವ ಪ್ರಶ್ನೆ ವಿಷಾದನೀಯವಾಗಿದೆ.

ಹಳೇಬೇರು ಹೊಸ ಚಿಗುರು ಕತೆಯಲ್ಲಿ ಎರಡು ತಲೆಮಾರುಗಳ ಸಂಘರ್ಷವನ್ನು ಕಾಣುತ್ತೇವೆ. ಈ ಕತೆಯಲ್ಲಿ ಬರುವ ಹುಸೇನ್ ತಂದೆ ಕಟ್ಟಾ ಸಂಪ್ರದಾಯಸ್ಥರು. ಹಾಗೆ ಹುಸೇನ್ ಬೊಂಬಾಯಿ ನಗರದ ಜೀವನಕ್ಕೆ ತಕ್ಕಂತೆ ಸಂಪ್ರದಾಯವನ್ನು ಬದಲಾವಣೆಗೊಳಿಸುವವನು. ಒಮ್ಮೆ ಇವರು ತಮ್ಮ ತಂದೆಯ ರಜದ ದಿನಗಳಲ್ಲಿ ಊರಿಗೆ ಬಂದಾಗ ಹುಸೇನ್‌ರ ಮಗಳು ನೂರಿ ತಮ್ಮ ಮನೆಯ ಮುಂದೆ ಇರುವ ಸಂಪಿಗೆ ಮರವನ್ನು ಹತ್ತಿ ಹೂವನ್ನು ಕೀಳುತ್ತಾಳೆ. ಇದನ್ನು ಸಂಪ್ರದಾಯಸ್ಥರಾದ ಇವಳ ಅಜ್ಜ ಇದನ್ನು ನೋಡಿ ಹುಡುಗಿಯರು ಹೀಗೆ ಮರ ಹತ್ತುವುದು ಎಂದರೇನು? ಎಂದು ತನ್ನ ಸೊಸೆ ಮೆಹರುನ್ನಿಸಾಳನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ಹಾಗೆ ಅಲ್ಲೇ ಇದ್ದ ನೂರುನ್ನಿಸಾ ಇದನ್ನು ಕೇಳಿಸಿಕೊಂಡು ತನ್ನ ಅಜ್ಜನಿಗೆ ತಣ್ಣಗೆ "ಉಪ್ಪಾಪ ಹುಡುಗಿಯರು ಮರ ಹತ್ತಬಾರದೆಂದು ಧರ್ಮಶಾಸ್ತ್ರ ಹೇಳುತ್ತದೆಯೇ?"[೨೦] ಎಂದು ಪ್ರಶ್ನೆ ಮಾಡುತ್ತಾಳೆ. ಇದು ನೂರುನ್ನಿಸಾಳ ಅಜ್ಜನಿಗೆ ಸಹಿಸಲು ಅಸಾಧ್ಯವಾಗುತ್ತದೆ. ಹೀಗೆ ಒಂದು ವ್ಯವಸ್ಥೆ ಬದಲಾವಣೆಗೆ ಹಾತೊರೆದರೆ ಇನ್ನೊಂದು ವ್ಯವಸ್ಥೆ ಸಂಪ್ರದಾಯದ ಮೌಢ್ಯದಲ್ಲಿಯೇ ಕೊಳೆತು ನಾರಲು ಹವಣಿಸುವುದು ವಿಷಾದನೀಯವಾಗಿದೆ.

ಸಾರಾ ಅವರು ತಮ್ಮ ಕಥನ ಸಾಹಿತ್ಯದಲ್ಲಿ ತಲಾಖ್ ಬಹುಪತ್ನಿತ್ವದ ಸಮಸ್ಯೆ ಅಷ್ಟೇ ಅಲ್ಲದೆ ಲಿಂಗ ತಾರತಮ್ಯವನ್ನು ಕುರಿತು ಬರೆದಿದ್ದಾರೆ. ಇವರ ಸುಣ್ಣ ಕತೆಯಲ್ಲಿ ಲಿಂಗ ತಾರತಮ್ಯವನ್ನು ಈ ಕತೆಯ ನಾಯಕಿಯ ಮುಖಾಂತರ ಪ್ರಶ್ನೆಯನ್ನು ಮಾಡುತ್ತಾರೆ. ಈ ಕತೆಯ ನಾಯಕಿ ಹೆಣ್ಣು ಎಂಬ ಕಾರಣಕ್ಕೆ ಇವಳನ್ನು ಇವಳ ತಂದೆ ತಿರಸ್ಕರಿಸುತ್ತಾನೆ. ಆದರೂ ಇವಳು ತನ್ನ ತಂದೆಯ ತಿರಸ್ಕಾರ ತಾಯಿಯ ವಾತ್ಸಲ್ಯದಿಂದ ತಾಯಿ ಬಳಿ ತಾನು ವಿದ್ಯೆ ಕಲಿತು ತನ್ನ ಯಾವುದಾದರೊಂದು ಕೆಲಸಕ್ಕೆ ಸೇರುತ್ತೇನೆ ಎಂದು ಹೇಳಿದಾಗ ಇವಳ ತಾಯಿ ಇದನ್ನು ತನ್ನ ಪತಿಯ ಮುಂದೆ ಹೇಳಿದಾಗ "ವಿದ್ಯೆಗೆ ಹಣ ಖರ್ಚು

---

೧೯. ಪು.ಸಂ. ೧೦೮, ವಿಜ್ಞಾನ ಭವಿಷ್ಯ ನುಡಿದಾಗ, ಸಾರಾ ಅಬೂಬಕ್ಕರ್

೨೦. ಪು.ಸಂ. ೪೩, ಹಳೇ ಬೇರು ಹೊಸ ಚಿಗುರು, ,,

ಮಾಡಿ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದಂತೂ ಇದ್ದೇ ಇದೆ. ಮದುವೆಯಾದ ಬಳಿಕ ಅವಳ ಪಾಡಿಗೆ ಅವಳು ಹೊರಟು ಹೋಗುತ್ತಾಳೆ. ಮುಪ್ಪಿನಲ್ಲಿ ನಮಗೊದಗುವ ಗಂಡು ಮಕ್ಕಳಿಗಾದರೆ ಖರ್ಚು ಮಾಡಬೇಕು"[೨೧] ಎಂದು ತನ್ನ ಪತ್ನಿಯ ಬಳಿ ಹೇಳುತ್ತಾನೆ. ಆದರೆ ಕೊನೆಗೆ ಮುದುಕನ ಈ ಧೋರಣೆ ತಲೆ ಕೆಳಗಾಗುತ್ತದೆ. ಮುದುಕನ ಪತ್ನಿ ತೀರಿಕೊಂಡಾಗ ಇವನ ಗಂಡು ಮಕ್ಕಳು ಮತ್ತು ಸೊಸೆಯರು ಮುದುಕನನ್ನು ತಿರಸ್ಕಾರದಿಂದ ನೋಡುತ್ತಾರೆ. ಆಗಲೇ ಮುದುಕನಿಗೆ ತನ್ನ ಪತ್ನಿ ಮತ್ತು ಹೆಣ್ಣು ಮಕ್ಕಳ ಬಗ್ಗೆ ಪ್ರೀತಿ ಬರುತ್ತದೆ. ನಂತರ ಇವಳ ತಂದೆ ಇವಳನ್ನು ಎಷ್ಟು ತಿರಸ್ಕಾರದಿಂದ ನೋಡಿದ್ದರು ಇವಳ ವಿವಾಹವನ್ನು ಒಬ್ಬ ಮೂರ್ಖನ ಜೊತೆ ಮಾಡಿದ್ದರೆಂದು ಬೇಸರ ಮಾಡಿಕೊಳ್ಳದೇ ತನ್ನ ಮನೆಗೆ ಕರೆದುಕೊಂಡು ಹೋಗಿ ಪ್ರೀತಿಯಿಂದಲೇ ನೋಡಿಕೊಳ್ಳುತ್ತಾಳೆ. ಆಗಲೇ ಮುದುಕನಿಗೆ ತನ್ನ ಮಗಳ ಬದುಕಿನ ಸ್ಥಿತಿ ಬಗ್ಗೆ ಅರಿವಾಗುತ್ತದೆ. ಹಾಗಾಗಿ ತನ್ನ ಸೊಸೆಯರಿಂದ ಬೇಸರಗೊಂಡು ತನ್ನ ಮಗಳ ಮನೆಯಲ್ಲಿಯೇ ಇರಲು ನಿರ್ಧಾರ ಮಾಡುತ್ತಾನೆ. ಈ ವಿಷಯವನ್ನು ತನ್ನ ಮಗನಿಗೆ ಹೇಳಿದಾಗ ಆಗ ನೀವು ಮಗಳ ಮನೆಗೆ ಹೋಗುವ ಮೊದಲು ಆಸ್ತಿಯ ವಿಲೇವಾರಿ ಮಾಡುವುದಾಗಿ ಹೇಳಿದಾಗ ಇದು ಮುದುಕನಿಗೂ ಸರಿ ಕಾಣುತ್ತದೆ. ಈ ವಿಷಯ ಮಗಳಿಗೆ ತಿಳಿದಾಗ ತನ್ನ ತಂದೆಯ ಮುಂದೆ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕಿಲ್ಲವೇ ಎಂದು ಪ್ರಶ್ನೆ ಮಾಡುತ್ತಾಳೆ. ಆಗ ಇವಳ ತಂದೆ ಮತ್ತು ಅಣ್ಣ ನಿಮಗೆ ಮದುವೆ ಮಾಡಿ ಕೊಟ್ಟಿಲ್ಲವೆ ಎಂದು ಕೇಳಿದಾಗ ತಂದೆ ಇದಕ್ಕೆ ಧ್ವನಿಗೂಡಿಸಿ ಇದೇ ತಾನೇ ಸಂಪ್ರದಾಯ ಎಂದು ಹೇಳುತ್ತಾರೆ. ಆಗ "ಅಪ್ಪಾ ಈ ಸ್ಥಿತಿಯಲ್ಲೂ ಸಂಪ್ರದಾಯಕ್ಕೆ ಅಂಟಿ ಕುಳಿತು ನಿಮ್ಮನ್ನು ಕಂಡು ನನಗೆ ಕನಿಕರವಾಗುತ್ತಿದೆ. ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಾಕಿದರೆ ಸುಣ್ಣ ಹಾಕಿದ ಕಣ್ಣು ಉರಿಯುತ್ತಿದೆ. ಅಪ್ಪಾ ಉರಿಯುತ್ತಿದೆ. ನಿಮ್ಮ ಸಂಪ್ರದಾಯದ ಮೂಟೆಯನ್ನು ನಿಮ್ಮ ಮಗನೆ ಹೊರಲಿ"[೨೨] ಎಂದು ಮುಸ್ಲಿಂ ಸಂಪ್ರದಾಯದ ಬಗ್ಗೆ ಮತ್ತು ಲಿಂಗ ಭೇದದ ಬಗ್ಗೆ ವಿರುದ್ಧ ಪ್ರಶ್ನೆ ಮಾಡುತ್ತಾಳೆ. ಕೊನೆಗೆ ಆಸ್ತಿಯಲ್ಲಿ ನಮಗೂ ಸಮಪಾಲು ಸಿಗಲೇಬೇಕು ಅದಕ್ಕಾಗಿ ನ್ಯಾಯಾಲಯಕ್ಕೆ ಹೋಗುವುದಾಗಿ ಹೇಳಿದಾಗ ಇವಳ ಅಣ್ಣ ಅಲ್ಲಿರುವುದು ಕೂಡ ನಾವೇ ಎಂದು ಮರೆತೆಯ ಎಂದು ಹೇಳುತ್ತಾನೆ. ಹೀಗೆ ಪುರುಷರ ಸ್ವಾರ್ಥ ಅಹಂಕಾರ ಮಹಿಳೆಯರನ್ನು ಹೇಗೆ ಶೋಷಣೆ ಮಾಡಿ ತುಳಿಯುತ್ತ ಬಂದಿರುವುದನ್ನು ಕಾಣುತ್ತೇವೆ.

"ಬೆನ್ನಟ್ಟುವ ಭೂತಗಳು" ಕತೆಯ ಆಯಿಷಾಳ ಗಂಡ ಸರಫುದ್ದೀನ ಕಾರ್ಯ ನಿರ್ವಾಹಕ ಇಂಜಿನಿಯರಾಗಿ ಕೆಲಸ ಮಾಡುತ್ತಿರುತ್ತಾರೆ. ಹೀಗೆ ಒಂದು ಸಾರಿ, ಇವರು ತಮ್ಮ ಕೆಲಸದ ಸಂದರ್ಭದಿಂದಾಗಿ

---

೨೧. ಪು.ಸಂ. ೭೫, ಸುಣ್ಣ, ಸಾರಾ ಅಬೂಬಕ್ಕರ್

೨೨. ಪು.ಸಂ. ೮೦, ,, ,,

ಬೇರೆ ಊರಿಗೆ ಹೋಗಬೇಕಾಗಿ ಬಂದಾಗ ಆಗ ಆಯಿಷಾ ತಾನು ನಿಮ್ಮ ಜೊತೆಗೆ ಬರುತ್ತೇನೆ. ಈ ಸಲವಾದರೂ ಶಿವನ ಸಮುದ್ರ ಜಲಪಾತವನ್ನು ನೋಡಿಕೊಂಡು ಬರುವುದಾಗಿ ತನ್ನ ಆಸೆಯನ್ನು ತನ್ನ ಗಂಡನ ಮುಂದೆ ಹೇಳಿದಾಗ ಮೊದ ಮೊದಲು ಸರಪುದ್ದೀನ ಇವಳ ಆಸೆಯನ್ನು ನಿರಾಕರಿಸಿದರು ಕೊನೆಗೆ ಆಯಿಷಾಳ ಹಟದಿಂದಾಗಿ ಕರೆದುಕೊಂಡು ಹೋಗುವುದಾಗಿ ಒಪ್ಪಿಗೆ ನೀಡುತ್ತಾನೆ. ಹೋಗುವಾಗಲೇ ಜಲಪಾತವನ್ನು ನೋಡಿಕೊಂಡು ಹೋಗುವುದಾಗಿ ಹೇಳಿದಾಗ ಆದರೆ ಸಮಯದ ಅಭಾವದಿಂದ ಸರಪುದ್ದೀನ ಹಿಂದಿರುಗಿ ಬರುವಾಗ ಜಲಪಾತವನ್ನು ನೋಡಿಕೊಂಡು ಬರುವುದಾಗಿ ಹೇಳಿ ಇವಳ ಆಸೆಗೆ ತಣ್ಣೀರು ಎರೆಚುತ್ತಾನೆ. ನಂತರ ಸರಪುದ್ದೀನ ತನ್ನ ಕೆಲಸದ ಒತ್ತಡದಿಂದಾಗಿ ಬೇಗನೆ ಬಂದು ಆಯಿಷಾಳನ್ನು ಕರೆದುಕೊಂಡು ಜಲಪಾತವನ್ನು ತೋರಿಸಬೇಕೆಂದುಕೊಂಡರೆ ಇವರ ಕಾರಿನಲ್ಲಿಯೇ ಬೆಂಗಳೂರಿಗೆ ಹೊರಡಲು ಇವನ ಸ್ನೇಹಿತರು ಬಂದು ಕುಳಿತುಕೊಳ್ಳುತ್ತಾರೆ. ಆದರೂ ಆಯಿಷಾಳಿಗೆ ಜಲಪಾತವನ್ನು ತೋರಿಸುವ ಆಸೆ ಮೂಡಿಸುತ್ತಾನೆ. ನಂತರ ಆಯಿಷಾಳ ಬೇಸರವನ್ನು ಹೋಗಲಾಡಿಸಲು ಸರಪುದ್ದೀನ, ಮೊದಲು ಯಾವುದನ್ನು ನೋಡುವೆ ಹೇಳು. ಹಾರುವ ಹಕ್ಕಿಯನ್ನು ನೋಡುತ್ತಿಯಾ ಇಲ್ಲವೆ ಹರಿಯುವ ನೀರನ್ನು ನೊಡುತ್ತಿಯೋ ಎಂದು ಕೇಳಿದಾಗ ಆಯಿಷಾ "ಹಾರುವ ಹಕ್ಕಿಯಾಗಲಿ ಹರಿಯುವ ನೀರಾಗಲಿ ಜಾತಿ ಅಥವಾ ಧರ್ಮದ ಕೊಳಚೆಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿಲ್ಲ ಅಲ್ಲವಾ? ಆದ್ದರಿಂದ ಅವನ್ನು ನಾವು ನೋಡಬಹುದು"[೨೩] ಎಂದು ಹೇಳುತ್ತಾಳೆ. ಆಗ ಇವರ ಜೊತೆ ಬಂದ ಶಾಸ್ತ್ರಿಯವರಿಗೆ ಆಯಿಷಾ ಬಂದಿದ್ದು ಸರಿ ಕಾಣುವುದಿಲ್ಲ ಎಂದು ಅವರ ವರ್ತನೆಯಿಂದಲೇ ಆಯಿಷಾ ಮನಗಂಡಿದ್ದಳು.

ನಂತರ ಕಾರು ಹೊರಟಾಗ ಶಾಸ್ತ್ರಿಯವರು ಕಾರು ಚಾಲಕನಿಗೆ ಜಲಪಾತದ ಕಡೆಗೆ ಹೋಗದಂತೆ ಮೊದಲು ಸೋಮನಾಥಪುರದ ದೇವಸ್ಥಾನದ ಕಡೆಗೆ ಹೋಗುವಂತೆ ಆಜ್ಞಾಪಿಸುತ್ತಾನೆ. ಇದರಿಂದ ಚಕಿತಗೊಂಡ ಆಯಿಷಾ ತನ್ನ ಗಂಡನೊಡನೆ ಜಲಪಾತದ ಕಡೆಗೆ ಹೋಗುವುದಿಲ್ಲವೆಂದು ಕೇಳಿದಾಗ ಮೊದಲು ಸೋಮನಾಥ ದೇವಸ್ಥಾನ ನೋಡಿಕೊಂಡು ನಂತರ ಜಲಪಾತದ ಕಡೆಗೆ ಹೋಗುವುದಾಗಿ ಹೇಳುತ್ತಾನೆ. ಆಗ ಶಾಸ್ತ್ರೀಯವರು ಪಾಳುಬಿದ್ದ ದೇವಸ್ಥಾನದ ಬಗ್ಗೆ ಉತ್ಸಾಹದಿಂದ ಹೇಳುತ್ತಲೇ ಕೊನೆಗೆ ಇದನ್ನು "ಈ ರೀತಿ ನಾಶ ಮಾಡಿದವನು ಘಜನಿ ಮಹಮ್ಮದನು ಎಂದು ಹೇಳುತ್ತಾನೆ ಇದನ್ನು ಗಮನಿಸಿದ ಆಯಿಷಾ ಶಾಸ್ತ್ರಿಯವರಿಗೆ ತಾಜಮಹಲಿನ ಒಂದೊಂದು ಕೆತ್ತನೆಗೂ ಬಣ್ಣ ಬಣ್ಣದ ಮುತ್ತಿನ ಚಿಪ್ಪುಗಳನ್ನು ಅಂಟಿಸಿದ್ದರಲ್ಲಾ? ಅಂತಹ ಒಂದೇ ಒಂದು ಮುತ್ತಿನ ಚಿಪ್ಪು ಕೂಡ ಇಂದು ತಾಜಮಹಲಿನಲ್ಲಿ ಕಾಣಸಿಗುತ್ತಿಲ್ಲ. ಅವೆಲ್ಲವನ್ನೂ ಇನ್ನೂರು ವರ್ಷಗಳ ವರೆಗೆ ನಮ್ಮನ್ನಾಳಿದ ಬ್ರಿಟೀಷರು ಎಂದೊ ಖಾಲಿ ಮಾಡಿದ್ದಾರೆಂದು ಕೇಳಿದ್ದೇನೆ. ಸಾಲದಕ್ಕೆ ಈ ಪಾಶ್ಚಿಮಾತ್ಯರು ಇಂದಿಗೂ ಭಾರತೀಯರನ್ನು ಹಲವು

---

೨೩. ಪು.ಸಂ. ೧೧೨, ಬೆನ್ನಟ್ಟುವ ಭೂತಗಳು, ಸಾರಾ ಅಬೂಬಕ್ಕರ್

ವಿಧಗಳಲ್ಲಿ ಸುಲಿಯುತ್ತಲೇ ಇದ್ದಾರಲ್ಲ ಇದಕ್ಕೆ ನೀವೇನಂತೀರಿ?"[೨೪] ಎಂದು ಶಾಸ್ತ್ರಿಯವರನ್ನು ಪ್ರಶ್ನೆ ಮಾಡುತ್ತಾಳೆ. ಕೊನೆಗೆ ಜಲಪಾತವನ್ನು ನೋಡುವ ಆಸೆ ಮಣ್ಣಾಗುತ್ತದೆ. ಕೊನೆಗೆ ಆಯಿಷಾ ನಿರಾಶೆಯಿಂದ "ಇತಿಹಾಸದ ಕಪ್ಪು ಕಲೆಗಳು ಹೀಗೇಕೆ ಮನುಷ್ಯರ ಬೆನ್ನು ಹತ್ತುತ್ತಿವೆ"[೨೫] ಎಂದು ಕೇಳುತ್ತಾಳೆ.

"ವಜ್ರಗಳು" ಕಾದಂಬರಿಯ ನಾಯಕಿ ನಫೀಸ ಹಳ್ಳಿ ಹುಡುಗಿ. ತಾಯಿಯ ಆಸೆಯಂತೆಯೇ ಪಟ್ಟಣದ ಹುಡುಗನನ್ನು ವಿವಾಹವಾಗುತ್ತಾಳೆ. ಆದರೆ ಬಬ್ರುದ್ದೀನ ಅವಳನ್ನು ಕಪ್ಪು ಹಳ್ಳಿಯ ಹುಡುಗಿ ಎಂದು ಜರಿದು ಒಂದು ಮಗುವಿನ ತಾಯಿಯಗುವಂತೆ ಮಾಡಿ ಬೊಂಬಾಯಿ ಸೇರುತ್ತಾನೆ. ಅವಳ ಬಾಲ್ಯದ ಗೆಳೆಯ ನಫೀಸಾಳನ್ನು ವಿವಾಹವಾಗಲು ಬಯಸಿದ್ದಾಗ ಮಗನ ಭವಿಷ್ಯಕ್ಕಾಗಿ ಅದನ್ನು ನಿರಾಕರಿಸುತ್ತಾಳೆ. ಆದರೆ ಅವಳ ಮೊದಲಿನ ಗಂಡನ ಮನೆಯವರು ಅವಳ ಮಗಳನ್ನು ಶಿಕ್ಷಣದ ನೆಪವೊಡ್ಡಿ ಇವಳಿಂದ ದೂರ ಮಾಡುತ್ತಾರೆ. ಇದರಿಂದ ಒಂಟಿಯಾದ ನಫೀಸಾ ಮಾನಸಿಕ ರೋಗಿಯಾಗುತ್ತಾಳೆ. ತವರಿನ ಮನೆಯಲ್ಲಿ ಅಣ್ಣ ಅತ್ತಿಗೆಯಿಂದ ಗಂಡ ಬಿಟ್ಟವಳೆಂದು ನಿಂದನೆಗೆ ಗುರಿಯಾಗುತ್ತಾಳೆ. ಇದರಿಂದ ಎರಡನೇ ವಿವಾಹಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲಿಯೂ ಅವಳನ್ನು ಶೋಷಣೆ ಮಾಡುತ್ತಾರೆ. ಮಗ "ಮುನ್ನ ಮದುವೆಗೆ ಬಂದು ಹೇಳಿದಾಗ, ಸಂಬಂಧ ಕಳೆದುಕೊಂಡ ಅವಳ ಮನಸ್ಸು ಬೆಂಕಿಯ ಜ್ವಾಲೆಯಂತೆ ಉರಿಯಿತು. ಅವಳಿಗೆ ಹೋಗಲು ಅವಕಾಶವಿಲ್ಲ. ಅವಳ ಮಾತಿನಲ್ಲಿ ಪ್ರಕಟವಾದ ನೋವು ಎಂತಹುದು ಎಂಬುದು ಅವಳು ಹೇಳುವ ಈ ಮಾತಿನಿಂದಲೇ ಗೊತ್ತಾಗುತ್ತದೆ. "ಮುನ್ನ ಒಂಭತ್ತು ತಿಂಗಳು ಹೊಟ್ಟೆಯಲ್ಲಿಟ್ಟು ಅವನಿಗೆ ರಕ್ಷಣೆ ನೀಡಿದವಳು ನಾನು ಮೂರು ವರ್ಷ ಹಾಲೂಡಿಸಿದವಳು, ನನ್ನದೆಲ್ಲವನ್ನೂ ಅವನಿಗಾಗಿ ತ್ಯಾಗ ಮಾಡಿದೆ. ಅವನ ತಪ್ಪುಗಳನ್ನೆಲ್ಲ ಅನುಭವಿಸಿದವಳು ನಾನು. ಇವತ್ತು ಅವನ ಸಂತೋಷದಲ್ಲಿ ಭಾಗಿಯಾಗಲು ಮಾತ್ರ ನನಗೆ ಹಕ್ಕಿಲ್ಲ ಅಲ್ಲವೇ? ಗಂಡು ಮಕ್ಕಳು ಹುಟ್ಟಿದೊಡನೆ ಕತ್ತು ಹಿಚುಕಿ ಕೊಲ್ಲಬೇಕು ಗಂಡಸರೆಲ್ಲರನ್ನೂ ನೀರಿನಲ್ಲಿ ಮುಳುಗಿಸಿ ಸಾಯಿಸಬೇಕು"[೨೬] ಎಂದು ಹೇಳುವಲ್ಲಿ ಪುರುಷರ ಶೋಷಣೆಯ ವಿರುದ್ಧ ಪ್ರತಿಭಟಿಸುವುದು ಕಂಡುಬರುತ್ತದೆ.

ಹೀಗೆ ಹೆಣ್ಣು ಮಕ್ಕಳನ್ನು ಭೋಗದ ವಸ್ತುಗಳನ್ನಾಗಿ ದುಡಿಯುವ ಯಂತ್ರಗಳನ್ನಾಗಿ ಮಾಡಿಕೊಂಡ ಪುರುಷರ ನೀತಿಯನ್ನು ಚರ್ಚೆಗೊಳಪಡಿಸುವ ಮೂಲಕ ಅನೇಕ ಸ್ತ್ರೀ ಸಂಬಂಧಿಸಿದ ಪ್ರಶ್ನೆಗಳನ್ನು

---

೨೪. ಪು.ಸಂ. ೧೧೫, ಬೆನ್ನಟ್ಟುವ ಭೂತಗಳು, ಸಾರಾ ಅಬೂಬಕ್ಕರ್

೨೫. ಪು.ಸಂ. ೧೧೬, ,, ,,

೨೬. ಪು.ಸಂ. ೧೬೬, ವಜ್ರಗಳು, ,,

ಚರ್ಚಿಸಲಾಗಿದೆ. ಪುರುಷರು ತಮ್ಮ ಸ್ವಾರ್ಥಕ್ಕಾಗಿ ಮತ್ತು ಸುಖ, ಸಂತಾನೋತ್ಪತ್ತಿಯ ಅಭಿಲಾಷೆಗಾಗಿ ಮದುವೆಯಾಗುವುದನ್ನು ನಂತರ ಮಹಿಳೆಯನ್ನು ಕಾಲ ಕಸವಾಗಿಸುವ ಗಂಡಿನ ಕ್ರೌರ್ಯವನ್ನು ಸಾರಾ ಅವರು ತಮ್ಮ ಕಥನ ಸಾಹಿತ್ಯದ ಮೂಲಕ ಚರ್ಚಿಸಿರುವುದನ್ನು ಗಮನಿಸಬಹುದಾಗಿದೆ.

ಹೀಗೆ ಮಹಿಳೆಯರು ಉದ್ಧಾರವಾಗಬೇಕಾದರೆ ಅವರನ್ನು ಸಮಾಜದ ಜೀವಿಯೆಂದು ಪರಿಗಣಿಸಬೇಕು. ಕುಟುಂಬದಲ್ಲಿ ಅವರಿಗೆ ಒಳ್ಳೆಯ ಸರಿಸಮಾನವಾದ ಸ್ಥಾನ ಕೊಡಬೇಕು ಹಾಗೆ ಪುರುಷರ ಸ್ವಾರ್ಥ ಪ್ರವೃತ್ತಿ ಬದಲಾಗಬೇಕು. ಮುಸ್ಲಿಂ ಸಮಾಜವು ಸ್ತ್ರೀಯರಿಗೊಂದು ನೀತಿ ಪುರುಷರಿಗೊಂದು ನೀತಿಯನ್ನು ದೂರ ಸರಿಸಿ ಸ್ತ್ರೀಯರನ್ನು ಸಮಾನ ಭಾವದಿಂದ ನೋಡಬೇಕು. ಅಲ್ಲದೇ ಸ್ತ್ರೀಯರು ಕೀಳರಿಮೆ ಬಿಟ್ಟು ಸ್ವಚ್ಛಂದ ಪರಿಸರದ ಜ್ಞಾನ ಪಡೆದು ಸ್ವಾವಲಂಬಿಗಳಾಗಬೇಕು. ಈ ರೀತಿ ಪ್ರಗತಿಯತ್ತ ಸಾಗಿದರೆ ಕುಟುಂಬದ ಹಿತ ಹಾಗೂ ಸಮಾಜದ ಹಿತವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ಅಧ್ಯಾಯ : ೫

ಸಾರಾ ಅವರ ಕಥನ ಸಾಹಿತ್ಯದಲ್ಲಿ ಹಿಂದೂ-ಮುಸ್ಲಿಂ ಸಾಮಾಜಿಕ ಸಂಬಂಧಗಳು

ಅಧ್ಯಾಯ : ೫

ಸಾರಾ ಅವರ ಕಥನ ಸಾಹಿತ್ಯದಲ್ಲಿ ಹಿಂದೂ-ಮುಸ್ಲಿಂ ಸಾಮಾಜಿಕ ಸಂಬಂಧಗಳು

ಸಾರಾ ಅವರು ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದ ಕುರಿತು ತಮ್ಮ ಕಾಳಜಿ, ಆತಂಕ ಮೊದಲಾದ ಅಂಶಗಳನ್ನು ತಮ್ಮ ಕಥನ ಸಾಹಿತ್ಯದ ಮೂಲಕ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ ಅಲ್ಲಲ್ಲಿ ಕೆಲವು ಕತೆ-ಕಾದಂಬರಿಗಳಲ್ಲಿ ಮುಸ್ಲಿಂಯೇತರ ವಸ್ತು ವಿಷಯಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಂದರೆ ಮುಸ್ಲಿಂಯೇತರ ಧರ್ಮವೊಂದರ ವಾಸ್ತವ ಪ್ರಪಂಚದ ಸೂಕ್ಷ್ಮ ನೋಟಗಳನ್ನು ಅರ್ಥೈಸಿಕೊಳ್ಳುವ ರೀತಿ ಇದಾಗಿದೆ. ಅಂದರೆ ಬೇರೊಂದು ಧರ್ಮದ ವ್ಯಕ್ತಿಯೊಡನೆ ಮುಸ್ಲಿಂ ಸಮುದಾಯದ ನಡೆ-ನುಡಿಗಳ ಬಗೆಗಿನ ತೌಲನಿಕ ಚರ್ಚೆಯಾಗಿದೆ. ಹಾಗಾಗಿ ಇದು ಕೂಡ ಮುಸ್ಲಿಂ ಕೇಂದ್ರದ ಅಥವಾ ಮುಸ್ಲಿಂ ಸಂವೇದನೆಯೊಂದಿಗೆ ಇನ್ನೊಂದು ಧರ್ಮದ ಸಂವೇದನೆ ತಳುಕು ಹಾಕಿಕೊಳ್ಳುವ ಬಗೆಯಾಗಿದೆ. ಹಾಗಾಗಿ ಈ ಎರಡು ಅಂಶಗಳ ನೆಲೆಯಲ್ಲಿ ಪ್ರಸ್ತುತ ಚರ್ಚೆಯನ್ನು ಬೆಳೆಸಲಾಗಿದೆ.

೧೦ನೇ ಶತಮಾನದ ಪಂಪನ ಕಾಲದಿಂದಲೂ ಜಾತಿ ವ್ಯವಸ್ಥೆಯು ಕಂಡು ಬಂದರು ಅದನ್ನು ಮೀರಿ ಆದಿ ಕವಿ ಪಂಪ "ಮನುಷ್ಯ ಜಾತಿ ತಾನೊಂದೆ ವಲಂ" ಮತ್ತು "ಕುಲಂ ಕುಲಮಲ್ತು ಛಲಂ ಕುಲಂ ಗುಣಂ ಕುಲವಂಭಿಮಾನವೊಂದೆ ಕುಲವಣ್ಣು ಕುಲಂ" ಎಂದು ಜಾತಿಯ ಹೊಸ ವ್ಯಾಖ್ಯಾನವನ್ನು ನೀಡಿದ್ದಾನೆ. ಮುಂದೆ ಬಂದ ೧೨ನೇ ಶತಮಾನದ ವಚನಕಾರರು ಧಾರ್ಮಿಕ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಇದರಿಂದ ಸಾಮಾಜಿಕ ಅಸಮಾನತೆಗಳು ತೊಲಗಿ ಸಮಾನತೆಯ ಸಮಾಜದ ನಿರ್ಮಾಣಕ್ಕೆ ನಾಂದಿಯಾಡಿದರು. ಕೀರ್ತನಾಕಾರರು ಸಹ ಅವರ್ಣಭೇದವನ್ನು ವಿರೋಧಿಸಿ ಎಲ್ಲರೂ ಸಮಾನರು ಎಂಬುದನ್ನು ಹೇಳುತ್ತಲೇ ಬಂದಿದ್ದಾರೆ. ಹೀಗೆ ೧೦ನೇ ಶತಮಾನದಿಂದಲೂ ಪಂಪ ತನ್ನ ಕಾಲದ ಸ್ಥಿತಿಗತಿಯನ್ನು ತಿಳಿಸಬೇಕಾದರೆ ಆ ಕಾಲದಲ್ಲಿಯೂ ಆ ಸಮಾಜದಲ್ಲಿ ಜಾತಿ, ವರ್ಣ, ವ್ಯವಸ್ಥೆಗಳಿಂದ ಜನರ ಶೋಷಣೆ ನಡೆಯುತ್ತಿರಬಹುದೆಂದು ಚರ್ಚಿಸಲಾಗುತ್ತದೆ. ವರ್ಣ ವ್ಯವಸ್ಥೆಯನ್ನು ಹೋಗಲಾಡಿಸಲು ಬಸವಣ್ಣ, ಗಾಂಧಿಜೀ ಮುಂತಾದವರು ಹೋರಾಡುತ್ತಲೇ ಬಂದಿದ್ದಾರೆ. ಆದರೂ ಸಮಾಜದಲ್ಲಿ ಉಳಿದುಕೊಂಡಿರುವ ವರ್ಣ ವ್ಯವಸ್ಥೆಯ ಮೂಲ ಬೇರುಗಳೇ ಮೌಲ್ಯಗಳಾಗಿ ಕೆಳಜಾತಿಯವರನ್ನು

ಕೀಳಾಗಿಸುತ್ತಲೇ ಬಂದಿವೆ. ಹಿಂದಿನ ಕಾಲದಿಂದ ನೋಡುತ್ತ ಬಂದರೇ ದಲಿತರು ಒಂದಲ್ಲ ಒಂದು ರೀತಿಯಿಂದ ಶೋಷಣೆಗೆ ಒಳಗಾಗುತ್ತ ಬಂದಿರುವುದನ್ನು ಕಾಣುತ್ತೇವೆ. ಅನೇಕರು ವಿದ್ಯೆ ಪಡೆದು ನಾಗರಿಕರಾಗಿದ್ದರೂ ಕೂಡ ದಲಿತರನ್ನು ಅಸ್ಪೃಶ್ಯರೆಂದೇ ದೂರವಿಟ್ಟು ನೋಡುತ್ತಿದ್ದಾರೆಂಬುದನ್ನು "ನಿಮ್ಮೊಡನೆಯಿದ್ದೂ" ಕಥೆ ಹೇಳುತ್ತದೆ. ದಲಿತ ಕುಟುಂಬದ ಡಾ.ಸುಕುಮಾರ ಮತ್ತು ಆತನ ಹೆಂಡತಿ ಆ ಸಮಾಜದಲ್ಲಿ ಇವರನ್ನು ನಡೆಸಿಕೊಳ್ಳುವ ರೀತಿ, ಅದರಿಂದ ಇವರು ಅನುಭವಿಸುವ ನೋವು ಸಂಕಟವನ್ನು ನಿರೂಪಿಸುವ ಸಾರಾ ಅವರು ಪರಂಪರಾಗತ ಜಾತಿ ಪದ್ಧತಿ ಸೃಷ್ಟಿಸಿರುವ ಅಸಮಾನತೆಯನ್ನು ವಿವರಿಸಿದ್ದಾರೆ. ಸರ್ಕಾರಿ ನೌಕರಿಯಲ್ಲಿರುವ ಹುದ್ದೆಗಳಲ್ಲಿರುವ ವಠಾರದಲ್ಲಿ ಎಲ್ಲ ಜಾತಿಯ ಧರ್ಮದ ಜನರು ವಾಸವಾಗಿದ್ದರು. ಅಲ್ಲಿ ಒಂದು ದಲಿತ ವರ್ಗಕ್ಕೆ ಸೇರಿದ ಕುಟುಂಬ ಇತ್ತು. ಇವರು ಆ ಮೇಲ್ವರ್ಗದ ಮನೆಗಳಲ್ಲಿ ನಡೆಯುವ ಯಾವುದೇ ರೀತಿಯಾದ ಕಾರ್ಯಕ್ರಮಗಳಿಗೆ ಹೋಗುವಂತೆ ಇಲ್ಲ. ಆದರೆ ಸುಕುಮಾರನ ಆಪ್ತ ಗೆಳೆಯ ರಾಜಣ್ಣನ ಮನೆಯಲ್ಲಿಯೂ ಅವರಿಗೆ ಅವಮಾನವಾಗುತ್ತದೆ. ಸರ್ಕಾರ ಎಷ್ಟೆಲ್ಲ ಕಾನೂನುಗಳನ್ನು ಮಾಡಿದರೂ ಅಸ್ಪೃಶ್ಯತೆ ಹೋಗಲಾಡಿಸಲು ಸಾಧ್ಯವಾಗದೆ ಸುಕುಮಾರನ ಹೆಂಡತಿ ಹೇಳುವಂತೆ, ಆ ಮೇಲ್ವರ್ಗದವರ ಮನೆಗೆ ಹೋಗಲು ಫಾತಿಮಾಳಿಗೆ, ಲಿಸ್ಸಿ ಮುಂತಾದವರಿಗೆ ಪ್ರವೇಶವಿದ್ದರೂ ಸಹ ನನ್ನ ಮಕ್ಕಳಿಗೆ ಪ್ರವೇಶವಿಲ್ಲ. ಬಹುಶಃ ಈ ರೀತಿಯ ಅವಮಾನ, ನೋವು, ಹಿಂಸೆ, ಯಾರಿಗೂ ಅರ್ಥವಾಗುವುದಿಲ್ಲ ಎಂದು ಲಲಿತ ಅಸಮಾಧಾನದಿಂದ ನುಡಿಯುತ್ತಾಳೆ. ಈ ರೀತಿ ತನ್ನ ಆಪ್ತಗೆಳೆಯನಿಂದಲೇ ಅವಮಾನ ತನ್ನ ಕುಟುಂಬಕ್ಕೆ ಆದ್ದರಿಂದ ಸುಕುಮಾರ ರಾತ್ರಿ ಕುಡಿದು ಬಂದು ಮನೆಯಲ್ಲಿ ಗಲಾಟೆ ಮಾಡುತ್ತಾನೆ. ಇದರಿಂದ ಅಲ್ಲಿನ ಸುತ್ತಮುತ್ತಲಿನ ಜನರು ಇವನ ಓದಿನ ಬಗ್ಗೆ ವ್ಯಂಗ್ಯ ಮಾಡುತ್ತಾರೆ. ಹೀಗೆ ಇದರಿಂದ ಅವಮಾನಿತನಾದ ಸುಕುಮಾರ ಊರು ಬಿಟ್ಟು ಹೋಗಲು ತೀರ್ಮಾನಿಸುತ್ತಾನೆ. ಆ ಸಂದರ್ಭದಲ್ಲಿ ಸಾಮಾಜಿಕ ಕಾಳಜಿಯುಳ್ಳ ಪಕ್ಕದ ಮನೆಯ ಮುಸ್ಲಿಂ ಕುಟುಂಬದ ಇಮ್ತಿಯಾಜ್ ಸುಕುಮಾರನಲ್ಲಿ ಆತ್ಮವಿಶ್ವಾಸ ಬೆಳೆಸುತ್ತಾನೆ. "ಅಲ್ಲೀ ಎಲ್ಲಾದರೂ ದೂರ ಹೋದರೆ ನಿಮ್ಮ ಸಮಸ್ಯೆ ಬಗೆಹರಿಯುತ್ತದೆಯೇ ಈಸಬೇಕು ಇದ್ದು ಜೈಸಬೇಕಲ್ಲದೆ ಓಡಿ ಹೋಗಬಾರದು. ಎಲ್ಲೋ ದೂರ ಹೋಗಿ ನಿಮ್ಮನ್ನು ನೀವು ಬಚ್ಚಿಟ್ಟುಕೊಂಡರೆ ಏನನ್ನು ಸಾಧಿಸಿದಂತಾಯಿತು? ಇದು ನಿಮ್ಮಿಬ್ಬರ ಸಮಸ್ಯೆಯಲ್ಲ ಇಡೀ ಸಮಾಜದ ಸಮಸ್ಯೆ ದೂರ ಹೋಗುವುದಕ್ಕಿಂತ ಇಲ್ಲೇ ಇದ್ದು ಕ್ರಿಯಾತ್ಮಕವಾಗಿ ಏನನ್ನಾದರೂ ಮಾಡಿ"[೧] ಎಂದು ಹೇಳುವುದರ ಮೂಲಕ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪ್ರೇರೇಪಿಸುತ್ತಾನೆ. ಆಗ ಸುಕುಮಾರನಿಗೆ ತಮಗೂ ಈ ಸಮಾಜದಲ್ಲಿ ಎಲ್ಲರಂತೆಯೇ ಬದುಕುವ ಅವಕಾಶವಿದೆ ಎಂಬ ತಾತ್ವಿಕ ವಿಚಾರವುಂಟಾಗುತ್ತದೆ. ಆಗ ಸುಕುಮಾರ "ಪಲಾಯನದಿಂದ ಏನನ್ನು ಸಾಧಿಸಿದಂತಾಗುವುದಿಲ್ಲ ಹೋರಾಟವೇ ಸರಿಯಾದ ಹಾದಿ ಇಲ್ಲಿದ್ದುಕೊಂಡೆ ನಮ್ಮ ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಲು ನಿರ್ಧರಿಸಿರಿ. ನಾವು

---

೧. ಪು.ಸಂ. ೨೩, ನಿಮ್ಮೊಡನಿದ್ದು, ಸಾರಾ ಅಬೂಬಕ್ಕರ್

ಎಲ್ಲಿಂದಲೋ ಬಂದವರಲ್ಲ ಈ ಮಣ್ಣಿನಲ್ಲೇ ಹುಟ್ಟಿ ಬೆಳೆದವರು ಇಲ್ಲಿ ಎಲ್ಲರಂತೆಯೇ ಬದುಕುವ ಹಕ್ಕು ನಮಗಿದ್ದೇ ಇದೆ. ಇನ್ನು ನಾವೇಕೆ ಓಡಿ ತಲೆಮರೆಸಿಕೊಳ್ಳಬೇಕು"[೨] ಎಂದು ತೀರ್ಮಾನಿಸುತ್ತಾನೆ. ಹೀಗೆ ಈ ಸಮಾಜದಲ್ಲಿ ದಲಿತರು ಒಬ್ಬ ಮನುಷ್ಯ. ಅವನು ಒಂದು ಸಮಾಜ ಜೀವಿ ಅವನಿಗೂ ಬದುಕುವ ಹಕ್ಕು ಇದೆ. ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು ಎಂಬುದನ್ನು ಚಿಂತನೆ ಮಾಡಿ ಹೋರಾಡಲು ಸುಕುಮಾರ ಪ್ರಯತ್ನಿಸುತ್ತಾನೆ. ಸುಕುಮಾರನಿಗೆ ಇಮ್ತಿಯಾಜ್‌ರು ತೋರಿಸುವ ಕಳಕಳಿ ದಲಿತರ ಉದ್ಧಾರ ಮತ್ತು ಅವರ ಬಗ್ಗೆ ಇರುವ ಮಾನವೀಯತೆಯನ್ನು ತೋರಿಸುತ್ತದೆ.

ಧರ್ಮದ ಹೆಸರುಗಳು ಬೇರೆ ಇದ್ದರೂ ಧರ್ಮ ಗ್ರಂಥಗಳು ಹೇಳುವುದು ಎಲ್ಲ ಧರ್ಮದ ನಿಯಮಗಳು ಒಂದೇ ಆಗಿರುತ್ತವೆ. ಅದರ ಪ್ರತಿಪಾದಕರು ಅದನ್ನು ತಮ್ಮ ತಮ್ಮ ಗ್ರಹಿಕೆಗೆ ತಕ್ಕ ಹಾಗೆ ಪ್ರತಿಪಾದಿಸುವುದರಿಂದ ಧರ್ಮದ ವಿಶಾಲವಾದ ಅರ್ಥಗಳು ಮತಧರ್ಮದ ಒಳಗೆ ಸಿಲುಕಿ ಸಂಕುಚಿತವಾಗುತ್ತಿರುವುದರಿಂದ ಮನುಷ್ಯರು ಮಾನವೀಯ ಅಂಶವನ್ನು ತೊರೆದು ತನ್ನೊಳಗೇ ತನಗರಿವಿಲ್ಲದಂತೆ ರಾಕ್ಷಸ ಗುಣಗಳನ್ನು ಬೆಳೆಸಿಕೊಂಡು ಯಾವುದೇ ಧರ್ಮ ಗ್ರಂಥವಾದರು ಎಲ್ಲರೂ ಸಮಾನರು ಎಲ್ಲರೂ ಪರಸ್ಪರ ಸಹಬಾಳ್ವೆಯಿಂದ ಬದುಕಬೇಕೆಂದು ಹೇಳುತ್ತದೆ. ಆದರೆ ಮನುಷ್ಯರು ಜಾತಿ, ಧರ್ಮದ ಹೆಸರಿನಲ್ಲಿ ತನ್ನ ಸುತ್ತಲು ಭದ್ರವಾದ ಕೋಟೆಯನ್ನು ನಿರ್ಮಿಸಿಕೊಳ್ಳತೊಡಗಿದ್ದಾನೆ.

ಹಿಂದೂ-ಮುಸ್ಲಿಂ ಸಮುದಾಯಗಳಲ್ಲಿ ಮನುಷ್ಯ ಸಂಬಂಧಗಳು ಎಷ್ಟೇ ಪ್ರೀತಿ-ಸ್ನೇಹ, ಆತ್ಮೀಯವಾಗಿದ್ದರೂ ಧರ್ಮದ ವಿಚಾರದಲ್ಲಿ ಮಾತ್ರ ಎರಡು ಪಂಗಡಗಳು ಅತಿ ಸೂಕ್ಷ್ಮವಾಗಿ ವರ್ತಿಸುವುದು ಇದನ್ನು ಕೆಲವು ಸಮಾಜದ ಮೂಲಭೂತವಾದಿ ಪುರುಷರು ತಮ್ಮ ಸ್ವಾರ್ಥಕ್ಕೆ ಧರ್ಮದ ಹೆಸರುಗಳನ್ನು ಬಳಸಿಕೊಳ್ಳುವುದನ್ನು "ಸಾರಾಂಶ" ಕತೆಯಲ್ಲಿ ಕಾಣುತ್ತೇವೆ. ಧರ್ಮದ ಹೆಸರಿನಲ್ಲಿ ಕೆಲವು ಧರ್ಮದ ಮುಖಂಡರು ಒಬ್ಬ ಹೆಣ್ಣು ಮಗಳನ್ನು ಹೇಗೆ ಶೋಷಣೆ ಮಾಡುತ್ತಾರೆ ಎಂಬುದನ್ನು ನೋಡಬಹುದು. ಈ ಕತೆಯಲ್ಲಿ ಬರುವ ನಾಯಕಿ ಯಮುನ ತಂದೆಯನ್ನು ಕಳೆದುಕೊಂಡವಳು. ಆದ್ದರಿಂದ ಇವಳು ತನ್ನ ಅಮ್ಮ ಮತ್ತು ಅಣ್ಣನ ಆಶ್ರಯದಲ್ಲಿ ಇರಬೇಕಾಗುತ್ತದೆ.

ಅಣ್ಣನು ತನ್ನ ತಂಗಿಯನ್ನು ತನ್ನ ಸ್ನೇಹಿತನಿಗೆ ಮೊದಲೆ ವಿವಾಹವಾಗಿದೆ ಎಂದು ತಿಳಿಸಿದರೂ ಯಮುನಾಳ ತಾಯಿ, ಮತ್ತು ಅಣ್ಣ ಅವನಿಗೆ ಮದುವೆ ಮಾಡಿಕೊಡುತ್ತಾರೆ. ಆದರೆ ಇವಳನ್ನು ವಿವಾಹವಾಗುವ ಹುಡುಗ ಇವಳ ಜೊತೆ ಪ್ರೀತಿಯ ನಾಟಕವಾಡಿ ಅವಳನ್ನು ಮೋಸ ಮಾಡುತ್ತಾನೆ. ಮೊದಲಿನ ಹೆಂಡತಿ ಅನಾರೋಗ್ಯ ಕಾರಣದಿಂದ ಯಮುನಾಳನ್ನು ವಿವಾಹವಾಗುವುದಾಗಿ ಇವರ ಮನೆಯವರನ್ನು ನಂಬಿಸುತ್ತಾನೆ. ಇದನ್ನು ಯಮುನಾಳ ಮನೆಯವರು ಅದರ ಬಗ್ಗೆ ಸತ್ಯವನ್ನು ತಿಳಿಯದೇ ಇವಳ ಮದುವೆಗೆ ಹೆಚ್ಚು ಖರ್ಚು ಆಗುವುದಿಲ್ಲವೆಂದು ತಿಳಿದು ಯಮುನಾಳನ್ನು ಅವನ

---

೨. ಪು.ಸಂ. ೨೩, ನಿಮ್ಮೊಡನಿದ್ದು, ಸಾರಾ ಅಬೂಬಕ್ಕರ್

ಜೊತೆಗೆ ವಿವಾಹ ಮಾಡುತ್ತಾರೆ. ಇಲ್ಲಿ ಅವಳ ಭವಿಷ್ಯ ಬದುಕಿಗಿಂತ ಅವರ ಕರ್ತವ್ಯ, ಅವಳ ವಿವಾಹದ ಖರ್ಚು ಕಡಿಮೆಯಾಗುವುದು ಮುಖ್ಯವಾಗುತ್ತದೆ.

ನಂತರ ಇವಳನ್ನು ವಿವಾಹವಾಗಿ ಮನೆಗೆ ಕರೆದುಕೊಂಡು ಬಂದಾಗ ಯಮುನಾಳಿಗೆ ಆಘಾತವಾಗುತ್ತದೆ. ಮೊದಲಿನ ಹೆಂಡತಿಯು ಯಾವುದೇ ರೀತಿಯಾದ ಕಾಯಿಲೆ ಇರದೇ ಇವಳು ಆರೋಗ್ಯದಿಂದ ಇರುತ್ತಾಳೆ. ಆಗ ಯಮುನಾ ಗಂಡನನ್ನು ಕೇಳಿದಾಗ ಮೊದಲಿನ ಹೆಂಡತಿ ಆರೋಗ್ಯವಾಗಿ ಇದ್ದರೂ ಕೂಡ ಏಕೆ ಸುಳ್ಳು ಹೇಳಿದಿರಿ ಎಂದು, ತನ್ನನ್ನು ಮೋಸ ಮಾಡಿದ ವಿಚಾರವನ್ನು ಕೇಳಿದಾಗ "ಮೊತ್ತ ಮೊದಲ ದಿನ ನಿನ್ನ ಭೇಟಿಯಾದಾಗ ನೀನು ದರ್ಪದಿಂದ ತಿರುಗಿಯೂ ನೋಡದೆ ಒಳನಡೆದೆಯಲ್ಲ? ಆ ನಿನ್ನ ಅಹಂಕಾರ ಮುರಿಯಲಿಕ್ಕೆ!"[೩] ಎಂದು ಹೇಳುತ್ತಾನೆ. ಇದರಿಂದ ಗಂಡಸರ ಸ್ವಾರ್ಥವನ್ನು ನೋಡಬಹುದು. ಇದರಿಂದ ಯಮುನಾಳ ಬದುಕು ಬೆಂಕಿಯಿಂದ ಬಾಣಲೆಗೆ ಬಿದ್ದಂತಾಗುತ್ತದೆ. ಹೀಗೆ ಯಮುನಾ ಅವನ ಮನೆಯಲ್ಲಿ ಜೀತದಾಳುವಿನಂತೆ ಹಗಲಿನಲ್ಲಿ ಮನೆಯ ಕೆಲಸ ಮತ್ತು ಅವನ ಹೆಂಡತಿ ಮಕ್ಕಳ ಚಾಕರಿ ಮಾಡಿ ಇರುಳಿನಲ್ಲಿ ಇವನ ಕಾಮತ್ವಕ್ಕೆ ಬಲಿಪಶುವಾಗುತ್ತಾಳೆ. ಇವಳ ಗರ್ಭದಲ್ಲಿರುವ ತನ್ನ ಮಗುವನ್ನೇ ವೈದ್ಯರ ಬಳಿ ಕರೆದೊಯ್ದು ನಾಶಪಡಿಸುತ್ತಾನೆ. ಯಮುನಾಳ ದೇಹದ ಜೊತೆಗೆ ಮನಸ್ಸನ್ನು ಖಾಲಿ ಮಾಡಿದ್ದಲ್ಲದೇ, ಆಕೆಯ ತವರು ಮನೆಯವರು ಕೊಟ್ಟ ಆಭರಣವನ್ನು ಮೋಸದಿಂದ ಖಾಲಿ ಮಾಡುತ್ತಾನೆ. ಇವಳನ್ನು ಏನು ಇಲ್ಲದಂತೆ ನಿರ್ಗತಿಕಳನ್ನಾಗಿ ಮಾಡುತ್ತಾನೆ.

ಹೀಗೆ ಪುರುಷರು ತಮ್ಮ ನೀಚ ಪ್ರವೃತ್ತಿಯಿಂದ ಹೆಣ್ಣನ್ನು ಬಲಿಪಶುವನ್ನಾಗಿ ಮಾಡಿಕೊಂಡು ಹೆಣ್ಣಿಗೆ ಹೆಣ್ಣೆ ಶತ್ರು ಎಂಬಂತೆ ಪರಿಸ್ಥಿತಿ ನಿರ್ಮಾಣ ಮಾಡಿ ಯಮುನಾಳನ್ನು ಮನೆಯ ಹೊರಗೆ ಹಾಕುವಂತೆ ಮಾಡುತ್ತಾನೆ. ಆಗ ಯಮುನಾ ಶಬನಾಳ ಆಶ್ರಯ ಪಡೆಯುತ್ತಾಳೆ. ಇಲ್ಲಿಯೂ ಅವಳನ್ನು ತನ್ನ ಪಾಡಿಗೆ ತಾನು ಯಾವುದೇ ಒಂದು ಕೆಲಸ ಮಾಡಿಕೊಂಡು ತನ್ನ ಉಪಜೀವನವನ್ನು ನಡೆಸುತ್ತಿರುತ್ತಾಳೆ. ಆದರೆ ಕೆಲವು ನಾಗರಿಕ ಸಮಾಜದ ವಿದ್ಯಾವಂತರು ಎನ್ನಿಸಿಕೊಂಡವರು ಸ್ತ್ರೀಯರ ಮೇಲೆ ಸೇಡು ತೀರಿಸಿಕೊಳ್ಳುವಂತೆ ಧರ್ಮದ ಹೆಸರನ್ನು ಹಿಡಿದು ಯಮುನಾಳಿಗೆ ಆಶ್ರಯ ನೀಡಿದ ಸಮಿಯುಲ್ಲಾ ಅವರನ್ನು ಕೋಮುಗಲಭೆಯ ಬೆದರಿಕೆ ಹಾಕಿ ಶಬನ ಮತ್ತು ಸಮಿಯುಲ್ಲಾರನ್ನು ಅಸಹಾಯಕರನ್ನಾಗಿ ಮಾಡಿ ಯಮುನಾಳನ್ನು ಅವರ ಮನೆಯಿಂದ ಹೊರ ಹಾಕುವಂತೆ ಮಾಡುತ್ತಾರೆ. ಆಗ ಶಬನಾ "ವಿದ್ಯಾವಂತ ನಾಗರಿಕ ಜಗತ್ತಿನ ನಡುವಳಿಕೆ ಕಂಡು ಆಶ್ಚರ್ಯಗೊಳ್ಳುತ್ತಾಳೆ. ನಿನ್ನೆ ಮುಸ್ಲಿಮರು, ಇಂದು ಹಿಂದೂಗಳು. ಓರ್ವ ಅನಾಥ ಹೆಣ್ಣನ್ನು ಸಂಪೂರ್ಣ ಬೆತ್ತಲೆ ಮಾಡಿ ಬೀದಿಗಟ್ಟುವುದರಲ್ಲಿ ಯಾರೂ ಹಿಂದೆ ಬೀಳಲ್ಲ!"[೪] ಅಸಹಾಯಕ ಹೆಣ್ಣುಮಕ್ಕಳನ್ನು ಗಂಡಸರು ತಮ್ಮ ಸ್ವಾರ್ಥಕ್ಕೆ ಕೋಮುಗಲಭೆಯ ನೆಪ ಒಡ್ಡುವ ತಂತ್ರವನ್ನು ಬಳಸಿ ಯಮುನಾಳನ್ನು ಶೋಷಣೆ ಮಾಡುವುದನ್ನು ಕಾಣುತ್ತೇವೆ.

---

೩. ಪು.ಸಂ. ೩೪, ಸಾರಾಂಶ, ಸಾರಾ ಅಬೂಬಕ್ಕರ್

೪. ಪು.ಸಂ. ೪೨, ,, ,,

"ಖೆಡ್ಡಾ" ಕತೆಯಲ್ಲಿ ಬರುವ ನಾಯಕಿಯ ತಂದೆ ಮೊದಲಿನಿಂದಲೂ ಕೆಳಜಾತಿಯವರನ್ನು ಕಂಡರೆ ನಿಕೃಷ್ಟ ದೃಷ್ಟಿಯಿಂದ ನೋಡುತ್ತಿದ್ದ ವ್ಯಕ್ತಿಯೊಬ್ಬ ಕಾರಣಾಂತರಗಳಿಂದ ಹೇಗೆ ಪರಿವರ್ತನೆಗೊಳ್ಳುತ್ತಾರೆ ಎಂಬುದನ್ನು ಕುರಿತು ಹೇಳುತ್ತಾರೆ. "ಈ ಜಾತಿ ಕಟ್ಟಿಕೊಂಡು ಪಡೆದ ಸುಖ ಅಷ್ಟರಲ್ಲೇ ಇದೆ. ಜಾತಿಗಿಂತ ಹೃದಯ ಮುಖ್ಯ. ಮನುಷ್ಯತ್ವವೆಂಬುದು ಜಾತಿಯಲಿಲ್ಲ ಮನುಷ್ಯನ ಹೃದಯದಲ್ಲಿದೆ ಎಂಬುದು ಈಗ ತಾನೇ ನನಗರ್ಥವಾಗುತ್ತಾ ಇದೆ"[೫] ಎಂದು ಹೇಳುವಲ್ಲಿ ಮಾನವೀಯ ಮೌಲ್ಯವನ್ನು ಕಾಣುತ್ತೇವೆ. ನರಸಿಂಹಯ್ಯನವರು ಕೆಳಜಾತಿಯವರನ್ನು ಕಂಡರೆ ಸಿಡಿಮಿಡಿಗೊಳ್ಳುತ್ತಿದ್ದರು. ಆದರೆ ಅವರ ಮಗ ಕೆಳಜಾತಿಯ ಹುಡುಗಿಯನ್ನು ಮದುವೆಯಾಗಿ ಮನೆಗೆ ಕರೆದುಕೊಡು ಬಂದಾಗ ತಮ್ಮ ಮರ್ಯಾದೆ ಹೋದಂತೆ ವರ್ತಿಸುತ್ತಾರೆ. ಆದರೆ ಸೊಸೆಯ ಗುಣ-ಸೌಮ್ಯವಾದ ಸ್ವಭಾವ ಮಾವನ ಬಗ್ಗೆ ಗೌರವ ಮನೆಯವರೊಂದಿಗಿನ ಪ್ರೀತಿಯನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅಲ್ಲದೆ ತಮ್ಮ ಮಗಳು ಶ್ವೇತಾಳನ್ನು ಸೊಸೆಯ ಸಹೋದರನ ಜೊತೆ ವಿವಾಹ ಮಾಡಲು ತೀರ್ಮಾನಿಸುತ್ತಾನೆ. ಹೀಗೆ ಜಾತಿ ವ್ಯವಸ್ಥೆ ಬದಲಾಗುತ್ತಿರುವುದನ್ನು ಈ ಕತೆಯಲ್ಲಿ ಕಾಣಬಹುದು.

ಕೋಮುವಾದಿ ಪ್ರವೃತ್ತಿಯಿಂದ ಎರಡು ಗುಂಪುಗಳಿಗೂ ಸುಖ ನೆಮ್ಮದಿ ಕೊಡಲು ಸಾಧ್ಯವಾಗುವುದಿಲ್ಲ ಎಂಬುದನ್ನು "ವಿಷ ಉಣಿಸುವವರು" ಕತೆಯಲ್ಲಿ ಗುರುತಿಸಬಹುದು. ಇಲ್ಲಿ ಮುಸ್ಲಿಂ ಹುಡುಗ ಹಿಂದೂ ಹೆಣ್ಣು ಕೇವಲ ಮಾತನಾಡುವ ಕಾರಣಕ್ಕೆ ಮತೀಯ ಸಂಘರ್ಷವನ್ನು ಕಾಣುತ್ತೇವೆ. ಮಾಧವ ಮತ್ತು ಜಾಫರ್ ಇಬ್ಬರ ನಡುವಿನ ಪರಿಚಯ ಸ್ನೇಹವಾಗಿ ಇದು ಕುಟುಂಬದವರಿಗೂ ವಿಸ್ತಾರವಾಗುತ್ತದೆ. ಇಲ್ಲಿ ಇಬ್ಬರ ಧರ್ಮ ಬೇರೆ ಬೇರೆಯಾದರು ಇದು ಅವರಿಗೆ ಮುಖ್ಯವಾಗದೇ ಪ್ರೀತಿ, ಸ್ನೇಹ ಇಲ್ಲಿ ಮುಖ್ಯವಾಗಿರುತ್ತದೆ. ಇವರಿಬ್ಬರ ಕುಟುಂಬದಲ್ಲಿ ತಂದೆ ಇಲ್ಲದಿದ್ದರೂ ತಾಯಿಯ ಪ್ರೀತಿಯಲ್ಲಿ ನೆಮ್ಮದಿಯಿಂದ ಜೀವನ ಸಾಗಿಸುತ್ತಿರುತ್ತಾರೆ. ಹೀಗೆ ಇರುವಾಗ ಮಾಧವನ ತಂಗಿ ನಳಿನಿ, ಜಾಫರ್ ಮತ್ತು ಮಾಧವ ಎಲ್ಲರೂ ಸೇರಿ ಸಿನಿಮಾ ನೋಡಲು ಹೋಗಿದ್ದೆ ತಪ್ಪಾಗಿ ಅರ್ಥೈಸಿಕೊಂಡು ಇದು ಮುಂದೆ ಗಂಭೀರ ಸುದ್ದಿಯಾಗಿ ಪ್ರಚಾರಗೊಂಡು ಜಾಫರನನ್ನು ಮಸೀದಿಯ ಮೌಲ್ವಿಗಳು ಕರೆಕಳುಹಿಸಿ ಅವನ ಕುಟುಂಬದವರಿಗೆ ಎಚ್ಚರಿಕೆಯನ್ನು ನೀಡುತ್ತಾರೆ. ಹಾಗೆಯೇ ಮಾಧವನ ಧರ್ಮದ ಮುಖಂಡರು ಮಾಧವನ ಕುಟುಂಬಕ್ಕೆ ಎಚ್ಚರಿಕೆ ನೀಡುತ್ತಾರೆ. ಹಾಗೆ ಇವರನ್ನು ತಮ್ಮ ಧರ್ಮದಿಂದಲೇ ಹೊರಹಾಕುವುದಾಗಿ ಬೆದರಿಕೆ ಹಾಕುತ್ತಾರೆ. ಇದರಿಂದ ನೊಂದ ಎರಡು ಕುಟುಂಬದವರಿಗೆ ಮತ್ತೊಂದು ಘಟನೆ ನಡೆಯಿತು. ಜಾಫರ್ ಹಣ ಗಳಿಸುವ ಉದ್ದೇಶದಿಂದ ಬೊಂಬಾಯಿಗೆ ಹೊರಟು ನಿಂತಾಗ ಜಾಫರ್ ನಳಿನಿಯೊಂದಿಗೆ ಮಾತನಾಡುತ್ತಿದ್ದ ಸಂದರ್ಭವನ್ನು ಮತ್ತೆ ತಪ್ಪಾಗಿ ಅರ್ಥೈಸಿಕೊಂಡು ನಳಿನಿಯ ಧರ್ಮದ ಮುಖಂಡರು ಇವಳನ್ನು ಹಾರಿಸಿಕೊಂಡು ಹೋಗುತ್ತಿದ್ದನೆ ಎಂಬ ಸುಳ್ಳು ಸುದ್ದಿ ಹರಡಿಸಿ

---

೫. ಪು.ಸಂ.೪೯, ಖೆಡ್ಡಾ, ಸಾರಾ ಅಬೂಬಕ್ಕರ್

ಜಾಫರನ ಧರ್ಮ ಮುಖಂಡರು ಬೈಯುತ್ತಾರೆ. ಧರ್ಮಾಂಧರಿಂದ ನಿಷ್ಕಲ್ಮಶವಾದ ಎರಡು ಕುಟುಂಬಗಳ ಬಗ್ಗೆ ಕೋಮು ಮನೋಧರ್ಮವನ್ನು ಮಾಡಿ ವಿಘಟನೆಗೆ ನಾಂದಿ ಹಾಡಿ ಇಡೀ ಊರೇ ಸಂಘರ್ಷಕ್ಕೆ ಒಳಗಾಗುವಂತೆ ಮಾಡುತ್ತಾರೆ. ಈ ಕೋಮುಗಲಭೆಯಲ್ಲಿ ಮಾಧವ ಬಲಿಯಾಗುತ್ತಾನೆ. ಈ ಕೋಮು ಗಲಭೆಯಿಂದ ಮೊದಲೇ ತಂದೆಯನ್ನು ಕಳೆದುಕೊಂಡಿದ್ದ ನಳಿನಿಯ ಕುಟುಂಬದವರು ಮಾಧವನ ಮರಣದಿಂದ ಮನೆಯ ಗಂಡು ಆಸರೆಯನ್ನೇ ಕಳೆದುಕೊಳ್ಳಬೇಕಾಗುತ್ತದೆ. ಆದರೆ ಸ್ವಾರ್ಥಪರ ಗಂಡಸರ ಮನಸ್ಸುಗಳಿಗೆ ಸ್ವಲ್ಪವೂ ಕರುಣೆಯೇ ಇಲ್ಲದೆ ಅವರಲ್ಲಿ ಮಾನವೀಯತೆ ಇರುವುದಿಲ್ಲವೆಂದು ಜಾಫರನ ಮಾವನ ಮಾತುಗಳನ್ನು ಗ್ರಹಿಸಬಹುದು.

ಕೊನೆಗೆ ಜಾಫರ್ ಮತ್ತು ನಳಿನಿ ಆಡುವ ಮಾತುಗಳನ್ನು ಗಮನಿಸಿದರೆ ಕೋಮುಗಲಭೆಗೆ ಕೊಟ್ಟ ಉತ್ತರ ಇಡೀ ಮತೀಯ ಆವರಣದೊಳಗಿನ ಇಡೀ ಸಮಾಜಕ್ಕೆ ಕೊಟ್ಟ ತಿರುಗೇಟಿನಂತಿದೆ. ಈ ಜಾತೀಯತೆಯ ವಿಷವನ್ನು ಉಣಿಸುವವರ ಮಧ್ಯದಲ್ಲಿ ನಾವು ವಿಷಕಂಠವಾಗಿ ಸಹೋದರತ್ವದಿಂದ ಬದುಕುವ ಆಶಯವನ್ನು ಸ್ವಾರ್ಥ ಗಂಡಸರು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳುತ್ತಾರೆ. ಹಾಗಾಗಿ ನಿರ್ಮಲವಾದ ಸಹೋದರ ಪ್ರೀತಿಯನ್ನು ಕಳೆದುಕೊಳ್ಳದಂತೆ ಎಚ್ಚರಿಕೆಯಿಂದ ಇರಬೇಕೆಂಬುದು ಲೇಖಕಿಯ ಸದಾಶಯವಾಗಿದೆ.

"ನಾವು ನಮ್ಮವರು" ಕತೆಯಲ್ಲಿ ಟೆಂಡರ್ ಪಡೆಯುವ ಉದ್ದೇಶ ಹೊಂದಿದ್ದ ಕಂಟ್ರಾಕ್ಟರ್ ಮಹಮ್ಮದ್‌ನು ಕಾನೂನು ಬಾಹಿರವಾಗಿ ಅಧಿಕಾರವನ್ನು ಪಡೆಯುವ ಉದ್ದೇಶದಿಂದ ಪ್ರಾಮಾಣಿಕ ಅಧಿಕಾರಿಯನ್ನು ತನ್ನ ಉದ್ದೇಶಗಳಿಗೆ ಬಳಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಪ್ರಾಮಾಣಿಕ ಅಧಿಕಾರಿಯಾದ ಜಾಫರುಲ್ಲಾ ಇದನ್ನು ನಿರಾಕರಿಸುತ್ತಾನೆ. ಹಾಗೆ ಬೇರೆ ಧರ್ಮದವನಾದ ಮೇಲಧಿಕಾರಿ ಯಾವುದೇ ರೀತಿಯಾದ ಕಿರುಕುಳವನ್ನು ಕೊಡದೇ ಇರುವುದರಿಂದ ನಿರ್ಲಿಪ್ತತೆಯಿಂದ ಕೆಲಸ ಮಾಡಿಕೊಂಡು ಹೋಗುವುದನ್ನು ಕತೆ ಬಿಂಬಿಸುತ್ತದೆ. ನಂತರ ಅದೇ ಕೆಲಸಕ್ಕೆ ಬೇರೆ ನಿರ್ದೇಶಕನಾಗಿ ತಮ್ಮ ಧರ್ಮದವನೇ ಬಂದಾಗ ಅವನು ನಿರಂತರ ಕಿರುಕುಳವನ್ನು ಕೊಡಲು ಪ್ರಾರಂಭಿಸುತ್ತಾನೆ. ಅವನ ಧಾರ್ಮಿಕ ಆಚರಣೆಗಳಿಗೆ ತೊಂದರೆಯನ್ನುಂಟು ಮಾಡುತ್ತಾನೆ. ಹೀಗೆ ಅಧಿಕಾರದ ಅಮಲು ತಲೆಗೇರಿದಾಗ ಮನುಷ್ಯ ಎಷ್ಟು ಕ್ರೂರಿಯಾಗಬಲ್ಲ ಎಂಬುದಕ್ಕೆ ಇನ್ನೊಂದು ನಿದರ್ಶನ. ಕೋಮುವಾದಿಗಳೆಂದು ಯಾರನ್ನು ಕರೆಯಬೇಕೆಂದು ನನಗೆ ಗೊತ್ತಾಗುತ್ತಿಲ್ಲ ನಾವು ನಮ್ಮವರೆಂದು ಈ ಜನರು ಕೊಚ್ಚಿಕೊಳ್ಳುತ್ತಿದ್ದಾರಲ್ಲ ಇವೆಲ್ಲ ಈ ಜನರ ರಾಜಕೀಯ ರಮ್ಮಿ ಆಟದ ಟ್ರಂಫ್ ಕಾರ್ಡುಗಳು" ಎಂಬ ವಿಷಾದದ ನುಡಿಯನ್ನು ಕೇಳಬಹುದಾಗಿದೆ.

ಕನಸು ಕಾಣುವುದಕ್ಕೆ ಸಿರಿತನ ಬಡತನ ಮುಖ್ಯವಾಗುವುದಿಲ್ಲ. ಕನಸುಗಳೇ ಅವರಿಗೆ ಬಂಡವಾಳವಾಗಿರುತ್ತದೆ. ಕನಸಿನಲ್ಲಾದರೂ ಅವರು ತಮ್ಮ ಸುಖವನ್ನು ಕಾಣಲು ಪ್ರಯತ್ನಿಸುತ್ತಾರೆ. ಒಂದು ಬದುಕಿನ ಕೆಲವು ಪುಟಗಳು ಕತೆಯ ಕತೀಜಾ ಕಲ್ಪನಾ ಲೋಕದ ವಿಹಾರಿ.

ಕತೀಜಾಳ ತಾಯಿ ಮತ್ತು ಮಾವ ಬಡತನದ ಕಾರಣದಿಂದಾಗಿ ಇವಳನ್ನು ಒಬ್ಬ ಮುದುಕನಿಗೆ ಕೊಟ್ಟು, ವಿವಾಹ ಮಾಡಲು ಯೋಚಿಸಿದಾಗ ಇದನ್ನು ತಿಳಿದ ಕತೀಜಾ ಮನೆ ಬಿಟ್ಟು ತನ್ನ ಮನೆ ಕೆಲಸ

ಮಾಡುತ್ತಿದ್ದವರ ಮನೆಗೆ ಬಂದು ಆಶ್ರಯ ಪಡೆಯುತ್ತಾಳೆ. ನಂತರ ಪಟ್ಟಣಕ್ಕೆ ಹೋಗಿ ಅಲ್ಲಿ ಮನೆಕೆಲಸಕ್ಕೆ ಸೇರಿದಳು. ಮುಂದೆ ಬದುಕಿನ ಆಶ್ರಯಕ್ಕಾಗಿ ಮತಾಂತರ ಹೊಂದಿ ದೇವಿಡ್‌ನನ್ನು ವಿವಾಹವಾಗಿ ಸಲೀನಳಾಗಿ ಹೊಸ ಜೀವನ ಪ್ರಾರಂಭಿಸುತ್ತಾಳೆ. ಕೆಲ ವರ್ಷಗಳ ನಂತರ ಇವಳ ಗಂಡ ಡೇವಿಡ್ ತೀರಿಕೊಳ್ಳುತ್ತಾನೆ. ಆಗ ಇವಳ ಜೀವನ ಆಶ್ರಯಕ್ಕೆ ಒಂದು ಸೈಟು ಇವನಿಂದ ದೊರೆಯುತ್ತದೆ. ಆದರೆ ಇದರಿಂದ ಕತೀಜಾಳ ಬದುಕು ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗುತ್ತದೆ. ಡೇವಿಡ್‌ನ ಮೊದಲ ಹೆಂಡತಿಯ ಮಗ ಜೋಸೆಫ್ ಸಲೀನಳ ಮಗಳು ಫಿಲೋಮಿನಾಳನ್ನು ತನ್ನ ತಂಗಿಯಲ್ಲವೆಂದು ತಿಳಿದು ಅವಕಾಶ ಸಿಕ್ಕಾಗಲೆಲ್ಲಾ ಇವಳ ಮೇಲೆ ಅತ್ಯಾಚಾರವೆಸಗುತ್ತಾನೆ. ಈ ವಿಷಯ ಬೇರೆಯವರಿಗೆ ತಿಳಿಸುತ್ತಾಳೆ ಎಂದು ತಿಳಿದು ಅವಳನ್ನು ಸುಟ್ಟು ಹಾಕುತ್ತಾನೆ. ಹೀಗೆ ಪುರುಷರು ತಮ್ಮ ಸ್ವಾರ್ಥ ಮತ್ತು ಆಸೆಗಳಿಗೆ ಹೆಣ್ಣು ಮಕ್ಕಳನ್ನು ಬಲಿತೆಗೆದುಕೊಳ್ಳುವುದನ್ನು ಕಾಣುತ್ತೇವೆ. ಗಂಡು ಎಂಬ ಕಾರಣಕ್ಕಾಗಿ ಲೈಂಗಿಕ ಶೋಷಣೆಗೆ ಒಳಪಡಿಸಿ ವಿರೋಧದ ನೆಲೆ ಕಾಣಿಸಿದಾಗ ಜೀವಂತವಾಗಿ ದಹನ ಮಾಡುವ ಬರ್ಬರ ಕೃತ್ಯಗಳು ಮನುಷ್ಯ ಸಮಾಜವನ್ನೇ ತಲ್ಲಣಿಸುವಂತೆ ಮಾಡಿವೆ.

ನಂತರ ಸಲೀನ ತನ್ನ ಮಗಳ ಸಾವಿನ ಬಗ್ಗೆ ದೂರು ನೀಡಲು ಹೋದಾಗ ದೂರು ದಾಖಲಿಸಿಕೊಳ್ಳಲು ಹಣ ಕೇಳುವ ಪೋಲಿಸರು ಇದರಿಂದ ದೂರ ಸರಿಯುವಂತೆ ಮಾಡುತ್ತದೆ. ಹಾಗೆ ಡೇವಿಡ್ ಹಿರಿಯ ಮಗ ಜೋಸೆಫ್ ಸಲೀನಳನ್ನು ತನ್ನ ತಂದೆಯ ಸೈಟು ತನಗೆ ಕೊಡಬೇಕೆಂದು ಪೀಡಿಸುತ್ತಾನೆ. ಇದರಿಂದ ಇವಳಿಗೆ ಜೀವ ಬೆದರಿಕೆಯನ್ನು ಹಾಕುತ್ತಾನೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡ ಇವಳು ಕೆಲಸ ಮಾಡುತ್ತಿದ್ದ ಮನೆಯವರು ಇವಳ ಸೈಟನ್ನು ತಾವೇ ತೆಗೆದುಕೊಂಡು ಹಣವನ್ನು ಕೊಡುವುದಾಗಿ ಹೇಳಿ ಮೋಸ ಮಾಡಿ ಸಲೀನಳನ್ನು ನಿರ್ಗತಿಕಳನ್ನಾಗಿ ಮಾಡುತ್ತಾರೆ. ಹೀಗೆ ಸಲೀನ ಎಲ್ಲ ಹಂತದಲ್ಲಿಯೂ ತನ್ನ ನಂಬಿದವರಿಂದ ಮೋಸಕ್ಕೆ ಒಳಗಾಗಿ ನಂತರ ಕತೀಜಾಳಾಗಿ ತನ್ನ ಊರಿಗೆ ಹಿಂದಿರುಗುವುದು ವಿಪರ್ಯಾಸವಾಗಿದೆ. ಕೊನೆಗೆ ಹೆಣ್ಣು ತನ್ನ ಕನಸುಗಳಿಗೆ ಕಡಿವಾಣ ಹಾಕಿ ತನ್ನ ಬದುಕಿಗಾಗಿ ತನ್ನ ಇಷ್ಟಕ್ಕೆ ವಿರುದ್ಧವಾಗಿ ಮದುವೆಯಾಗಿ ಅದರಲ್ಲಿಯೇ ಜೀವನವನ್ನು ಕಂಡುಕೊಳ್ಳಲು ಪ್ರಯತ್ನಿಸಿದರೂ ಈ ಸಮಾಜದ ವ್ಯವಸ್ಥೆ ಅದಕ್ಕೂ ಅವಳನ್ನು ನೆಮ್ಮದಿಯಿಂದ ಇರಲು ಬಿಡುವುದಿಲ್ಲ. ತನ್ನ ಬದುಕಿಗಾಗಿ ಏನೆಲ್ಲಾ ಪಾತ್ರಗಳನ್ನು ಬಯಸಿದರೂ ಕೊನೆಗೆ ಅವಳಿಗೆ ಸಿಗುವುದು ಶೋಷಣೆ, ನೋವು ಮಾತ್ರ ಎಂಬ ಸತ್ಯವನ್ನು ಹೆಣ್ಣಿಗೆ ಹಂತ ಹಂತವಾಗಿ ತೋರಿಸಿರುವುದನ್ನು ಈ ಕತೆಯಲ್ಲಿ ನೋಡುತ್ತೇವೆ.

"ಅರಕ್ಷಿತ" ಕತೆಯಲ್ಲಿ ಬಡತನದ ಕಾರಣದಿಂದಾಗಿ ಜನರ ಬದುಕು ಎಂತಹ ದುಃಸ್ಥಿತಿಗೆ ತಂದು ನಿಲ್ಲಿಸುತ್ತದೆ ಎಂಬುದನ್ನು ಕಾಣುತ್ತೇವೆ. ಈ ಕತೆಯ ನಾಯಕಿ ಕೈಜಮ್ಮ ತನ್ನ ಬಡತನದ ಕಾರಣದಿಂದಾಗಿ ತನ್ನ ಚಿಕ್ಕ ಗುಡಿಸಲಿನಲ್ಲಿಯೇ ತನ್ನ ಸಂಸಾರವನ್ನು ತೂಗಿಸಿಕೊಂಡು ಹೋಗುತ್ತಿರುತ್ತಾಳೆ. ಇವಳ ಮೊದಲ ಮಗಳು ಜುಲೈಕ ವಿವಾಹದ ವಯಸ್ಸಿಗೆ ಬಂದಾಗ ತನ್ನ ಗಂಡನಿಗೆ ಮಗಳ ವಿವಾಹ ಮಾಡಬೇಕಾಗಿರುವುದರಿಂದ ಒಂದು ಬಾಡಿಗೆ ಮನೆ ಹಿಡಿಯುವಂತೆ ಹೇಳುತ್ತಾಳೆ. ಇದರಿಂದ ಇವಳ ಗಂಡ ಒಂದು ಮನೆ ಬಾಡಿಗೆಯನ್ನು ತನ್ನ ಸಂಬಂಧಿಕರಿಂದ ಗಿಟ್ಟಿಸಿಕೊಂಡು ತನ್ನ ಮಗಳ ಮದುವ ಮಾಡಿ ಇವನು

ದುಡಿಯಲು ಬೇರೆ ಊರಿಗೆ ಹೋಗುತ್ತಾನೆ. ಆದರೆ ಕೈಜಮ್ಮಳ ಬದುಕಿನ ಸೂತ್ರ ಹರಿದ ಗಾಳಿಪಟದಂತೆ ಇವಳ ಜೀವನ ಅತಂತ್ರ ಸ್ಥಿತಿಗೆ ಬಂದು ನಿಲ್ಲುತ್ತದೆ. ಮನೆಗೆ ಗಂಡು ದಿಕ್ಕಿಲ್ಲದೆ ಕೈಜಮ್ಮಳೇ ತನ್ನ ಮಕ್ಕಳನ್ನು ನೋಡಿಕೊಳ್ಳಬೇಕಾಗುತ್ತದೆ. ಹೀಗಿರುವಾಗಲೇ ಮನೆಯ ಯಜಮಾನ ಬಂದು ತಮ್ಮ ಮನೆ ಖಾಲಿ ಮಾಡುವಂತೆ ಹೇಳುತ್ತಾನೆ. ಇದರಿಂದ ಮತ್ತೆ ತಾವು ಇದ್ದ ಸಣ್ಣ ಗುಡಿಸಲಿಗೆ ಬಂದು ಇರಬೇಕಾಗುತ್ತದೆ. ಹೀಗಿರುವಾಗಲೇ ಅಳಿಯ ಅತ್ತೆಯ ಬಳಿಗೆ ಬಂದು ಮಗಳನ್ನು ಹೆರಿಗೆಗೆ ಕರೆದುಕೊಂಡು ಬರಬೇಕೆಂದು ಹೇಳುತ್ತಾನೆ. ಇದು ಕೈಜಮ್ಮಗೆ ಗಾಯದ ಮೇಲೆ ಉಪ್ಪು ಸುರಿದಂತೆ ಆಗುತ್ತದೆ.

ನಂತರ ತನ್ನ ಚಿಕ್ಕ ಮಗನನ್ನು ಗಂಡನ ವಿಳಾಸ ಕೊಟ್ಟು ಗಂಡನನ್ನು ಕರೆದುಕೊಂಡು ಬರುವಂತೆ ಮಗನನ್ನು ಕಳುಹಿಸುತ್ತಾಳೆ. ಹೀಗಿರುವಾಗಲೇ ಚಿಕ್ಕಮಗಳೂರಿನಲ್ಲಿ ಹಿಂದೂ-ಮುಸ್ಲಿಂ ಗಲಾಟೆಯಂತೆ ಎಂದು ಪಕ್ಕದ ಮನೆಯ ಹುಡುಗಿ ಚಂದ್ರಾವತಿ ಬಂದು ಹೇಳಿದಾಗ ಕೈಜಮ್ಮಳಿಗೆ ಆಘಾತವಾಗುತ್ತದೆ.

ಮುಸ್ಲಿಂ ಸಂಪ್ರದಾಯದಲ್ಲಿ ಹೆಣ್ಣು ಮಕ್ಕಳು ಹೊರಗಡೆ ಹೋಗುವುದು ನಿಷೇಧವಾಗಿರುವುದರಿಂದ ಕೈಜಮ್ಮಳ ಮನೆಗೆಲಸ, ಬೀಡಿ ಅಂಗಡಿ ಹಾಕುವುದು ಎಲ್ಲವನ್ನು ಚಂದ್ರಾವತಿ ಮಾಡುತ್ತಾಳೆ. ಒಂದು ಕಡೆ ಹಿಂದೂ-ಮುಸ್ಲಿಂ ಗಲಾಟೆಯಾದರೆ, ಇನ್ನೊಂದು ಕಡೆ ಕೈಜಮ್ಮಳ ಸಂಸಾರಕ್ಕೆ ಚಂದ್ರಾವತಿ ಸಹಾಯಕಳಾಗಿರುವುದು ಕಾಣುತ್ತೇವೆ.

"ಕನ್ನ" ಈ ಕತೆಯಲ್ಲಿ ಬರುವ ರಾಯರು ಮೊದಲು ತಮ್ಮ ಧರ್ಮದ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಂಡವರಲ್ಲ. ರಾಯರ ತೋಟ ಪಾಲಾಗಿ ಆ ದೊಡ್ಡ ತೋಟದಲ್ಲಿ ಅರ್ಧಭಾಗ ತನ್ನ ತಮ್ಮನಿಗೆ ಕೊಡಬೇಕಾಗಿ ಬರುತ್ತದೆ. ಆದರೆ ರಾಯರ ತಮ್ಮ ತನ್ನ ಪಾಲಿನ ತೋಟವನ್ನು ಅನ್ಯ ಧರ್ಮೀಯನೊಬ್ಬನಿಗೆ ಮಾರಿದಾಗ ಅದು ತಮ್ಮ ಸಂಸ್ಕೃತಿ, ಪೂಜೆ, ಸಂಪ್ರದಾಯಗಳಿಗಿಂತ ತೀರಾ ಭಿನ್ನವಾದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡವರು. ಮೀನು, ಮಾಂಸ, ಕೋಳಿ ಎಲ್ಲವನ್ನೂ ತಿನ್ನುವವರು, ಛೇ "ಇವನು ಎಂತಹ ಕೆಲಸ" ಮಾಡಿದ ಎಂದು ತನ್ನ ತಮ್ಮನಿಗೆ ಅದೆಷ್ಟು ಭಾರಿ ಶಾಪವನ್ನು ಹಾಕಿರುವರೋ ಲೆಕ್ಕವಿಲ್ಲ ಇಂತಹ ಜನರನ್ನು ಪಕ್ಕದಲ್ಲಿ ಇಟ್ಟುಕೊಂಡು ತಾವು ಬದುಕುವುದಾದರೂ ಹೇಗೆ ಎಂದು ಹೇಳುತ್ತಿರುವಾಗಲೇ ತಮ್ಮ ಹೆಂಡತಿ ಮಕ್ಕಳು, ಹಾಗೇ ಇವರ ಕೆಲಸದ ಆಳುಗಳು ಇವರ ಜೊತೆ ಆಗಲೇ ಸ್ನೇಹ ಬೆಳೆಸಿಕೊಂಡು ಅವರ ಜೊತೆ ಕಷ್ಟ-ಸುಖಗಳ ಬಗ್ಗೆ ಮಾತನಾಡುವುದು ರಾಯರಿಗೆ ಸಹಿಸಲಾಗುವುದಿಲ್ಲ. ಹೀಗಿರುವಾಗಲೇ ಮೊದಲು ತಮ್ಮ ಅರ್ಧ ಭಾಗದ ತೋಟಕ್ಕೆ ಬೇಲಿಯೇ ಸಾಕಾಗಿತ್ತು ಎಂದವರು ಈಗ ಅದರ ಬದಲು ದೊಡ್ಡ ಗೋಡೆ ನಿರ್ಮಿಸಲು ಯೋಚಿಸುತ್ತಿರುವಾಗಲೇ ಪಕ್ಕದ ಮನೆಯವರು ತೋಟದ ಮಧ್ಯದಲ್ಲಿ ಗೋಡೆ ನಿರ್ಮಿಸಿ ಆಗಿತ್ತು. ಇದರಿಂದ ರಾಯರಿಗೆ ಸ್ವಲ್ಪ ಸಮಾಧಾನವಾಯಿತು.

ಆದರೆ ಮೊದಲೆಲ್ಲಾ ರಾಯರಿಗೆ ತಮ್ಮ ಧರ್ಮದ ಬಗ್ಗೆ ಪೂಜೆ, ಪುನಸ್ಕಾರದ ಬಗ್ಗೆ ವಿಶೇಷವಾದ ಕಾಳಜಿ ಇಲ್ಲದಿದ್ದರೂ, ಗಣೇಶ, ದೀಪಾವಳಿ ಎಂದು ಮನೆಯಲ್ಲಿ ಹೆಂಗಸರು ಮಕ್ಕಳಿಗಾಗಿ ಹಬ್ಬ

ಮಾಡುತ್ತಿದ್ದಾರೆ ಹೊರತು ಅದಕ್ಕೆ ವಿಶೇಷವಾಗಿ ಧಾರ್ಮಿಕ ಮಹತ್ವವನ್ನೇನೂ ಕೊಟ್ಟಿರಲಿಲ್ಲ. ಆದರೆ ಪಕ್ಕದ ಮನೆಯವರು ತಮ್ಮ ಮಸೀದಿಗೆ ದಿನಾಲೂ ಹೋಗಿ ಬರುವುದನ್ನು ಕಂಡ ರಾಯರು ಕೂಡ ಅವರಿಗೆ ಅವರ ಧರ್ಮ ಶ್ರೇಷ್ಠವಾದರೆ ನಮಗೆ ನಮ್ಮ ಧರ್ಮ ಶ್ರೇಷ್ಠವೆಂದು ತಿಳಿದುಕೊಂಡಿದ್ದರು. ಹಾಗಾಗಿ ತಮ್ಮ ಹೆಂಡತಿ ಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಬರುತ್ತಿದ್ದರು. ಇದರಿಂದ ಮನುಷ್ಯ ಹೇಗೆ ಧರ್ಮದ ಹೆಸರಿನ ಮೂಲಕ ತಮ್ಮನ್ನು ತಾವೇ ಸಂಕುಚಿತಗೊಳಿಸಿಕೊಂಡು ಅದರ ಒಳಗೆ ಒದ್ದಾಡುವುದನ್ನು ಕಾಣುತ್ತೇವೆ. ಕೊನೆಗೆ ತಮ್ಮ ಮನೆಯಲ್ಲಿಯೇ ಇವರ ಮಕ್ಕಳೇ ಇವರ ಬಗ್ಗೆ ಚೂರಿ ಹಾಕುವ ಕೆಲಸವನ್ನು ಮಾಡುತ್ತಾರೆ. ಇದನ್ನು ತಿಳಿಯದೇ ರಾಯರು ತಮ್ಮ ಮಕ್ಕಳ ಬಗ್ಗೆ ತಮ್ಮ ಸ್ನೇಹಿತರ ಮುಂದೆ ಬಡಾಯಿಕೊಚ್ಚಿಕೊಳ್ಳುತ್ತಾರೆ. ರಾಯರ ಮಕ್ಕಳು ಹಳ್ಳಿಯ ಜನರಿಗೂ ವಿದೇಶಿ ಗೊಬ್ಬರ ಕೊಡಿಸುವುದಾಗಿ ಹೇಳಿ ಮೋಸ ಮಾಡುತ್ತಾರೆ. ಕೊನೆಗೆ ರಾಯರ ಮಕ್ಕಳೇ ರಾಯರ ಮನೆಗೆ ಕನ್ನ ಹಾಕುವುದನ್ನು ನೋಡುತ್ತೇವೆ.

"ಬಿಸಿಲ್ಗುದುರೆಯ ಬೆನ್ನು ಹತ್ತಿ" ಹಮೀದ್ ಚೆನ್ನಾಗಿ ಓದಿ ಒಂದು ಒಳ್ಳೆಯ ಕೆಲಸಕ್ಕೆ ಸೇರಿ ತಾಯಿಗೆ ಒಂದು ಮನೆ ಮಾಡಿ ಚಿನ್ನದ ತೊಟ್ಟಿಲಲ್ಲಿ ಕುಳ್ಳಿರಿಸಿ ತೂಗಬೇಕೆಂದು ಕನಸು ಕಂಡವನು. ಆದರೆ ಇವನ ತಾಯಿಗೆ ಮಗ ನಾಲ್ಕಕ್ಷರ ಕಲಿತು ತಮ್ಮನ್ನು ಸಾಕಬೇಕೆಂದುಕೊಂಡವಳು. ಆದರೆ ಅವನಿಗೆ ಒಳ್ಳೆಯ ಶಿಕ್ಷಣವನ್ನು ಕೊಡಲು ಸಾಧ್ಯವಾಗುವುದಿಲ್ಲ. ಆದರೆ ಹಮೀದ್ ತಾಯಿ ಮತ್ತು ಅಕ್ಕನ ಪ್ರೋತ್ಸಾಹದಿಂದಾಗಿ ಎಸ್.ಎಸ್.ಎಲ್.ಸಿ ಮಟ್ಟದ ವಿದ್ಯಾಭ್ಯಾಸವನ್ನಾದರೂ ಕೊಡಿಸುತ್ತಾರೆ. ನಂತರ ಹಮೀದ್ ತಾನು ಕಾಲೇಜಿಗೆ ಸೇರಲೇಬೇಕು, ಇಲ್ಲವಾದರೆ ಎಸ್.ಎಸ್.ಎಲ್.ಸಿ. ಓದಿದರೆ ಯಾವ ಉದ್ಯೋಗವೂ ದೊರೆಯುವುದಿಲ್ಲವೆಂದು ಒಂದು ಪದವಿಯನ್ನಾದರೂ ಮುಗಿಸಿದರೆ ದುಬೈಯಿಗೆ ಹೋಗಿ ಹಣ ಸಂಪಾದಿಸಬಹುದೆಂದು ಹೇಳಿದಾಗ, ಆಗ ಕಜ್ಜಮ್ಮ ಪದವೀ ಮುಗಿಸಲು ಎಷ್ಟು ವರ್ಷ ಬೇಕೆಂದು ಕೇಳಿದಾಗ, ಹಮೀದ್ ಐದು ವರ್ಷ ಎಂದಾಗ ಕಜ್ಜಮ್ಮ ಬೇಡವೆಂದು ಮಗು ನಿನ್ನ ಅಕ್ಕನಿಗೆ ಆಗಲೇ ಹದಿನೆಂಟು ವರ್ಷವಾಗಿದೆ ಇವಳ ವಿವಾಹ ಮಾಡಬೇಕು ಎಂದು ಹೇಳಿದಾಗ ಕೂಡ ಇವನು ತಾನು ಕಾಲೇಜಿಗೆ ಸೇರಲೇಬೇಕು ಎಂದು ಹಟ ಮಾಡುತ್ತಾನೆ. ಇದರಿಂದ ಕಜ್ಜಮ್ಮ ಕೊನೆಗೆ ಮಗನ ಹಟದ ಮುಂದೆ ತಾನು ಸೋಲಲೇ ಬೇಕಾಗುತ್ತದೆ. ಇದರಿಂದ ಮಗನು ಕಾಲೇಜಿಗೆ ಸೇರುವುದಕ್ಕಾಗಿ ತನ್ನ ಕಿವಿಯಲ್ಲಿದ್ದ ಚಿನ್ನವನ್ನು ಹಜಾರರ ಅಂಗಡಿಯಲ್ಲಿ ಒತ್ತೆಯಿಡಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ಕಜ್ಜಮ್ಮ ಹಿತೈಷಿಗಳು ಬಂದು ಹಮೀದ್‌ನಿಗೆ ಡಿಪ್ಲೋಮೋಗೇ ಸೇರು ಎಂದರು. ಇದರಿಂದ ಮೂರು ವರ್ಷದಲ್ಲಿ ನೀನು ಒಂದು ಪದವಿಪಡೆದು ಒಂದು ಒಳ್ಳೆಯ ಕೆಲಸ ಸಿಗುತ್ತದೆ ಎಂದು ಹೇಳಿದಾಗ ಹಾಗೇ ಹಮೀದ್ ತನ್ನ ಸ್ನೇಹಿತ ರಘುರಾಮನೊಡನೆ ಹೋಗೀ ಡಿಪ್ಲೋಮೋಗೆ ಅರ್ಜಿಯನ್ನು ಹಾಕಿ ಬರುತ್ತಾನೆ. ಆದರೆ ಫಲಿತಾಂಶ ಪ್ರಕಟವಾದಾಗ ಹಮೀದ್‌ನಿಗೆ ನಿರಾಶೆಯಾಗುತ್ತದೆ. ತನಗೆ ಬೇಕಾಗಿರುವ ಸೀಟು ದೊರೆಯದೆ ತನಗೆ ತೀರ ಹೊಸದಾದ ಪೋಲಿಮಾರ್ ವಿಭಾಗದಲ್ಲಿ ಸೀಟು ದೊರೆತಿದ್ದು ಇದು ಹಮೀದನಿಗೆ ಗೊಂದಲದಲ್ಲಿ ಬೀಳುವಂತೆ ಮಾಡುತ್ತದೆ. ಹಮೀದನ ಗೆಳೆಯನಿಗೆ ಬೇರೆ ವಿಭಾಗದ ಸೀಟು ದೊರೆತಿರುತ್ತದೆ. ಆದರೆ ರಘುರಾಮ್ ಹಮೀದನಿಗೆ ಪೋಲಿಮರ್ ವಿಭಾಗದಲ್ಲಿ ಎಲ್ಲ ವಿಷಯಗಳು

ಇಂಗ್ಲೀಷ್‌ನಲ್ಲಿ ಇರುತ್ತವೆ. ಅದನ್ನು ಓದಿ ಹೇಗೆ ಅರ್ಥ ಮಾಡಿಕೊಳ್ಳುತ್ತಿಯಾ ಎಂದು ಮೊದಲೇ ಹೆದರಿದ ಹಮೀದ್ ಇವನ ಮಾತಿನಿಂದ ಮತ್ತಷ್ಟು ಹೆದರಿ ಹಮೀದ್ ಆ ವಿಭಾಗದ ಸೀಟನ್ನು ಬಿಟ್ಟುಬಿಡುತ್ತಾನೆ.

ಆದರೆ ಹಮೀದನನ್ನು ದಾರಿ ತಪ್ಪಿಸಿದ ರಘುರಾಮ ಪೋಲಿಮರ್ ವಿಭಾಗದ ಸೀಟು ತನಗೆ ದೊರಕುವಂತೆ ಮಾಡಿಕೊಳ್ಳುತ್ತಾನೆ. ಹಮೀದನಿಗೆ ಈ ವಿಷಯದ ಬಗ್ಗೆ ತಿಳಿದಾಗ ತಾನು ನಂಬಿದ ಸ್ನೇಹಿತ ಈ ರೀತಿಯಾಗಿ ಮೋಸ ಮಾಡಿದಾಗ ಹಮೀದನಿಗೆ ಜೀವನವೇ ಬೇಸರವಾಗಿರುವಂತೆ ನಡೆದುಕೊಳ್ಳುತ್ತಾನೆ. ಮುಂದೆ ಪಿ.ಯು.ಸಿಗೆ ಸೇರಿದಾಗ ಓದಿನಲ್ಲಿ ಆಸಕ್ತಿಯನ್ನು ತೋರಿಸದೆ ಪ್ರಥಮ ವರ್ಷದಲ್ಲಿಯೆ ಅನುತ್ತೀರ್ಣನಾಗುತ್ತಾನೆ. ಇದರಿಂದ ಕೈಜಮ್ಮಳ ಆಶಾ ಗೋಪುರವೇ ಕುಸಿದು ಬೀಳುತ್ತದೆ.

ನಂತರ ಹಮೀದನನ್ನು ಕೊಲ್ಲಿ ರಾಷ್ಟ್ರಕ್ಕೆ ಕಳುಹಿಸಲು ಪ್ರಯತ್ನ ಮಾಡುತ್ತಾನೆ. ಒಬ್ಬ ದಲ್ಲಾಳಿಯಿಂದ ವೀಸಾ ಪಾಸ್‌ಪೋರ್ಟ್ ದೊರೆಯುತ್ತದೆ. ಹಮೀದ್ ದುಬೈಯ್‌ಗೆ ಹೋಗುವ ಮೊದಲು ತನ್ನ ಸ್ನೇಹಿತ ರಘುರಾಮನನ್ನು ನೋಡಿಕೊಂಡು ಬರಲು ಹೋದಾಗ ರಘುರಾಮ. "ಅಂತೂ ನೀನು ಸೌದಿಗೆ ಹೊರಟೆ. ನಿಮಗೆಲ್ಲ ಕೊಲ್ಲಿಯೋ ಸೌದಿಯೋ ಇದೆ. ನೀವು ಅಲ್ಲಿಗೆ ಹೋಗಿ ಹಣ ಬಾಚಿಕೊಂಡು ಬರ್‍ತೀರಿ. ಇಲ್ಲಿ ನಮ್ಮ ಪಾಡು ಯಾರಿಗೂ ಬೇಡ. ಈ ಮೀಸಲಾತಿಯಿಂದಾಗಿ ನಮಗೆಲ್ಲ ಅವಕಾಶವೇ ಇಲ್ಲದಂತಾಗಿದೆ. ಮೆರಿಟ್ ಇದ್ದರೂ ಪ್ರಯೋಜನವಿಲ್ಲ"[೬] ಎಂದು ತನ್ನ ವಿಷಾದವನ್ನು ಹಮೀದ್‌ನಿಗೆ ಹೇಳುತ್ತಾನೆ. ಕೊನೆಗೆ ಹಮೀದ್ ತನ್ನ ತಾಯಿ, ಅಕ್ಕ ಮನೆಯವರನ್ನು ಬಿಟ್ಟು ದೂರದ ದುಬೈಗೆ ಹೋಗಲು ಸಿದ್ಧನಾಗುತ್ತಾನೆ. ದುಬೈಯ ವಿಮಾನದಲ್ಲಿ ಹಮೀದ್ ಹತ್ತಿ ಕುಳಿತು ಜಿದ್ದಾದಲ್ಲಿ ಇಳಿಯುತ್ತಿದ್ದಂತೆ ಹಮೀದ್‌ನನ್ನು ಆ ರಾಷ್ಟ್ರದವರು ಮಾಧಕ ದ್ರವ್ಯದ ವಿಷಯವಾಗಿ ಹಮೀದನನ್ನು ಬಂಧಿಸಿ ಕೊನೆಗೆ ಹಮೀದನಿಗೆ ಮರಣ ದಂಡನೆಯನ್ನು ನೀಡುತ್ತಾರೆ. ಒಂದು ವ್ಯವಸ್ಥೆ ಹಮೀದನನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡರೆ ಮತ್ತೊಂದು ಕಡೆ ಹಮೀದನ ಮುಗ್ಧತೆಯನ್ನು ಬಂಡವಾಳವನ್ನಾಗಿ ಮಾಡಿಕೊಂಡು ಹಮೀದನನ್ನೇ ಬಲಿತೆಗೆದುಕೊಳ್ಳುವುದನ್ನು ಕಾಣುತ್ತೇವೆ.

"ಬಲೆ" ಕತೆಯಲ್ಲಿ ಮಗನ ಪ್ರತಿಯೊಂದು ಸ್ವಭಾವಕ್ಕೆ ತಾಯಿಯನ್ನೇ ಕಾರಣವನ್ನಾಗಿ ಮಾಡಿ ಮಗ ತಪ್ಪು ಮಾಡಿದಾಗ ಹೆಂಡತಿಯನ್ನು ಬೈಯುವುದು. ಮಗ ಏನನ್ನಾದರೂ ಸಾಧನೆ ಮಾಡಿದಾಗ ತನ್ನ ಮಗನೆಂದು ಹೆಮ್ಮೆಪಡುವ ತಂದೆಗೆ ಮಗ ತನ್ನಿಷ್ಟಕ್ಕೆ ವಿರೋಧವಾಗಿ ಬೆಳೆದಾಗ ಅದರ ಫಲಿತಾಂಶಗಳನ್ನೆಲ್ಲಾ ಹೆಂಡತಿಗೆ ರವಾನಿಸುವುದು ಸಾಮಾನ್ಯ ಮನೋಧರ್ಮವಾಗುತ್ತದೆ. ಸಣ್ಣ ಕಾರಣಕ್ಕೂ ಹೆಂಡತಿಯ ಮೇಲೆ ಯಾವಾಗಲೂ ಅಧಿಕಾರ ಚಲಾಯಿಸುವ ಗಂಡನಿರುವಾಗ, ಇವರ ಮಗ ತಮ್ಮ ತಂದೆಯ ಇಷ್ಟಕ್ಕೆ ವಿರುದ್ಧವಾಗಿ ಅನ್ಯ ಧರ್ಮದವಳನ್ನು ವಿವಾಹ ಮಾಡಿಕೊಂಡ ಸುದ್ದಿ ತಂದೆಯ ಕಿವಿಗೆ

---

೬. ಪು.ಸಂ.೬೩, ಬಿಸಿಲ್ಗುದುರೆಯ ಬೆನ್ನು ಹತ್ತಿ, ಸಾರಾ ಅಬೂಬಕ್ಕರ್

ಕಾದಸೀಸ ಸುರಿದಂತಾಗುತ್ತದೆ. ಇದರಿಂದ ತಂದೆಯ ಬಗ್ಗೆ ಗೌರವವಿದ್ದರೂ ತಂದೆಯ ಸ್ವಭಾವಕ್ಕೆ ಹೆದರಿ ಮಗ ಬೇರೆ ಮನೆ ಮಾಡಿ ಸಂಸಾರ ಮಾಡುತ್ತಾನೆ. ಆದರೆ ಇವನ ತಾಯಿಗೆ ಮಗನ ಬಗ್ಗೆ ಏನನ್ನಾದರೂ ಸುದ್ದಿ ತಿಳಿಯಲು ಗಂಡನ ಬಳಿ ಮಗಳ ಮನೆಗೆ ಹೋಗುವುದಾಗಿ ಅನುಮತಿ ಪಡೆದು ಮಗಳ ಮನೆಗೆ ಹೋಗುತ್ತಾಳೆ. ಮಗಳಿಂದ ತನ್ನ ಮಗನ ವಿಚಾರ ತಿಳಿದು ಮನಸ್ಸಿನ ದುಗುಡ ಕಡಿಮೆಯಾಗುತ್ತದೆ. ತನ್ನ ಮಗ ನಮ್ಮನ್ನೆಲ್ಲ ಮರೆತಿಲ್ಲವೆಂಬುದು ಇವಳಿಗೆ ಸಮಾಧಾನವನ್ನು ನೀಡುತ್ತದೆ. ಆದರೆ ಮಗ ಲಾರಿಯ ಅಪಘಾತದಲ್ಲಿ ಸಾವನ್ನಪ್ಪುತ್ತಾನೆ. ಮಗನ ಸಾವು ತಂದೆಯನ್ನು ಅಧೀರನನ್ನಾಗಿಸುತ್ತದೆ. ಆದರೆ ಮಗ ಬದುಕಿದ್ದಾಗ ಸೊಸೆಯ ಕಾರಣಕ್ಕಾಗಿ ಹೆಂಡತಿ ಮಕ್ಕಳನ್ನು ಹಿಂಸಿಸಿದ ಗಂಡನು ತನ್ನ ಮುಪ್ಪಿನ ಕಾಲದಲ್ಲಿ ಆ ಸೊಸೆಯನ್ನೇ ಆಶ್ರಯಿಸಬೇಕಾಗುತ್ತದೆ.

ಆಧುನಿಕ ಸಂದರ್ಭದಲ್ಲಿ ಜಾತಿ ವೈಷಮ್ಯ, ಧರ್ಮಾಂಧತೆಗಳಿಂದಾಗಿ ಶಾಂತಿ ಮೌಲ್ಯಗಳ ಅರ್ಥವನ್ನು ಕಳೆದುಕೊಂಡು ಎಲ್ಲ ಕಡೆಗೂ ಅಶಾಂತಿ-ಅತೃಪ್ತಿಗಳು ತಾಂಡವವಾಡುತ್ತಿರುವುದನ್ನು ಕತೆಗಳಲ್ಲಿ ಕಾಣಬಹುದು. "ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು" ಕತೆಯಲ್ಲಿ "ಎರಡೂ ಕೂಸುಗಳ ಮೈಯಲ್ಲಿ ತಲೆಯಿಂದ ಕಾಲಿನವರೆಗೆ ಹರಿಯುತ್ತಿರುವ ರಕ್ತದ ಕಣಗಳು ಮಾತ್ರ ಒಂದೇ ಗುಂಪಿನವು. ಕೇವಲ ಮಾನವ ಜೀವಿಯವು ಎಂಬುದು ಮಾತ್ರ ಯಾರಿಗೂ ಹೊಳೆಯುತ್ತಲೇ ಇಲ್ಲವೇ?"[೭] ಎಂಬುದನ್ನು ನಿರೂಪಕಿಯ ಮಾನವೀಯ ಗುಣಗಳನ್ನು ಕಾಣಬಹುದಾಗಿದೆ. ಅಖಂಡವಾಗಿದ್ದ ದೇಶವು ಎರಡು ಭಾಗಗಳಾಗಿದ್ದ ಕಾರಣವಾಗಿ ಹುಟ್ಟಿಕೊಂಡ ಆಂತರಿಕ ವೈಷಮ್ಯದಿಂದ ಭಯೋತ್ಪಾದನೆಯಂತಹ ಘಟನೆಗಳು ಸಂಭವಿಸುತ್ತವೆ. ಒಂದೇ ತಾಯಿಯ ಮಕ್ಕಳಾಗಿದ್ದು, ಸಹೋದರ ಸಂಬಂಧದಲ್ಲಿ ಕಚ್ಚಾಡುವುದನ್ನು ನಿಲ್ಲಿಸಬೇಕು. ಪರಸ್ಪರ ಸಹಬಾಳ್ವೆಯಿಂದ ಬದುಕುತ್ತಿದ್ದರೆ ದೇಶವು ಪ್ರಗತಿಯ ಕಡೆಗೆ ಸಾಗುತ್ತದೆ ಎಂಬುದನ್ನು "ಯುದ್ಧ" ಕತೆಯಲ್ಲಿ ನಿರೂಪಿಸಿದ್ದಾರೆ. "ನೀನೇಕೆ ನನ್ನ ಮಗನಾಗಿ ಇಲ್ಲೇ ಇರಬಾರದು? ಯಾಕೆ ಸಾಧ್ಯವಿಲ್ಲ? ಅವರವರ ಹೊಟ್ಟೆಯಲ್ಲಿ ಹುಟ್ಟಿದರೆ ಮಾತ್ರ ಮಕ್ಕಳೆ? ನನ್ನ ಸೊಸೆ ಇಚ್ಛಿಸಿದರೆ ನೀನವಳನ್ನು ಮದುವೆಯಾಗು ಸೊಸೆಯರ ಸಂಸಾರ ನಂಗೆ, ತಾಯಿ, ಹೆಂಡತಿ, ಸಂಸಾರ ನಿನಗೆ"[೮] ಎಂದು ಮುದುಕಿ ವೈರಿ ರಾಷ್ಟ್ರದ ರಾಹಿಲ್‌ನಿಗೆ ಹೇಳುತ್ತಾಳೆ. ಎರಡು ವೈರಿ ರಾಷ್ಟ್ರಗಳ ನಡುವೆ ಯುದ್ಧವುಂಟಾಗಿ, ಆ ರಾಷ್ಟ್ರಗಳ ಎರಡು ಕುಟುಂಬಗಳಲ್ಲಿ ಹೆಂಡತಿ-ಮಕ್ಕಳನ್ನು ಕಳೆದುಕೊಂಡ ರಾಹಿಲ್‌ನು ಮಗನನ್ನು ಕಳೆದುಕೊಂಡ ಮುದುಕಿಯ ಒಂದೇ ಕುಟುಂಬದಲ್ಲಿ ಬಾಳಲು ನಿರ್ಧರಿಸುವಲ್ಲಿ ಮಾನವೀಯ ಕಳಕಳಿ ಅಡಗಿರುವುದು ಕಾಣುತ್ತೇವೆ. ಹಾಗೆ ಈ ರೀತಿ ಆಂತರಿಕ ವೈಷಮ್ಯ, ಜಾತಿ ಭೇದಗಳನ್ನು ಬಿಟ್ಟು ಪರಸ್ಪರ ಒಂದಾಗಿ ಬಾಳಿದರೆ ದೇಶವು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ಲೇಖಕಿಯ ಆಶಯವಾಗಿದೆ.

---

೭. ಪು.ಸಂ. ೬, ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ಸಾರಾ ಅಬೂಬಕ್ಕರ್

೮. ಪು.ಸಂ. ೧೭, ಯುದ್ಧ, ಸಾರಾ ಅಬೂಬಕ್ಕರ್

ಪ್ರವಾಹದ ಸುಳಿಯಲ್ಲಿ ಮಮ್ಮುಟಿ ಕಾರಣಾಂತರಗಳಿಂದ ತನ್ನ ಹೆಂಡತಿ-ಮಕ್ಕಳು, ತಾಯಿಯನ್ನು ಬಿಟ್ಟು ಬೊಂಬಾಯಿಗೆ ಓಡಿ ಹೋಗಬೇಕಾಗುತ್ತದೆ. ನಂತರ ಮಮ್ಮುಟಿ ಬೊಂಬಾಯಿಂದ ಹಿಂದಿರುಗಿ ಬಂದು ಮಮ್ಮುಟಿ ಊರಿನಲ್ಲಿ ಹಾಜಿಯವರ ಮನೆಯ ಕೆಲಸ ಮಾಡಿಕೊಂಡು ಅವರು ಬೈದರೂ ಬೈಸಿಕೊಂಡು ಅವರು ಹಾಕಿದ ಅನ್ನವನ್ನು ತಿನ್ನುತ್ತಿದ್ದವನು ಬೊಂಬಾಯಿಂದ ಬಂದ ಮೇಲೆ ಹಾಜಿಯವರ ಮನೆಯನ್ನೇ ಕೊಂಡುಕೊಳ್ಳುವಷ್ಟು ಶ್ರೀಮಂತನಾಗಿರುತ್ತಾನೆ. ತನ್ನ ಊರಿಗೆ ಬಂದ ಮೇಲೆ ತನ್ನ ಸ್ನೇಹಿತನಾದ ವಾಸುವನ್ನು ಭೇಟಿಯಾಗಿ ತಾನು ಬೊಂಬಾಯಿಯಲ್ಲಿ ಮಾಡುತ್ತಿದ್ದ ವ್ಯವಹಾರದ ಬಗ್ಗೆ ತಿಳಿಸಿ ವಾಸುವನ್ನು ಕೂಡ ತನ್ನ ವ್ಯವಹಾರದಲ್ಲಿ ಸೇರಿಸಿಕೊಳ್ಳುತ್ತಾನೆ. ಇದರಿಂದ ವಾಸು ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ಮಮ್ಮುಟಿ ವಾಸುವನ್ನು ಶ್ರೀಮಂತನನ್ನಾಗಿ ಮಾಡಿಬಿಡುತ್ತಾನೆ. ನಂತರ ಊರಿನಲ್ಲಿ ಇವರಿಬ್ಬರದೇ ದರ್ಬಾರ ಸುರುವಾಗುತ್ತದೆ. ಇದರಿಂದಾಗಿ ಮಮ್ಮುಟಿ ಮತ್ತು ವಾಸು ತಮ್ಮ ತಮ್ಮ ಸ್ವಜಾತಿ ಬಾಂಧವರಿಗೆ ತಮ್ಮ ಮನೆಗೆ ಸಹಾಯವನ್ನು ಯಾಚಿಸಲು ಬಂದಾಗ ಇವರು ದಾರಾಳವಾಗಿ ಹಣವನ್ನು ನೀರಿನಂತೆ ಸುರಿಯುತ್ತಿದ್ದರು. ತಮ್ಮ ಕಾರು ಚಾಲಕರಿಗೆ ತಾವೇ ವಿವಾಹವನ್ನು ಮಾಡಿಸುವ ಜವಾಬ್ದಾರಿಯನ್ನು ಹೊಂದಿದ್ದರು. ಹೀಗೆ ಇವರ ವ್ಯವಹಾರ ಭಾರತವಾಗಿ ಊರು ಪ್ರವೇಶಿಸಿದ್ದು ಈ ಪ್ರವಾಹವಾಗಿ ಮುನ್ನುಗ್ಗತೊಡಗಿದ್ದನ್ನು ನೋಡಬಹುದಾಗಿದೆ.

ಹೀಗೆ ಮುಸ್ಲಿಂ ಮಹಿಳೆಯರು ಕೂಡ ಒಂದಲ್ಲ ಒಂದು ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಮೊದಲು ಮಹಿಳೆಯರ ಮುಖ್ಯ ಉದ್ಯೋಗವೆಂದರೆ ಟೋಪಿ ಹೊಲಿಯುವುದು. ಟೋಪಿಯನ್ನು ಹೊಲಿಸಿ ಆಫ್ರಿಕಾ ಖಂಡದ ಟಂಜಾನಿಯೊ ದೇಶಕ್ಕೆ ರಫ್ತು ಮಾಡಲಾಗುತ್ತಿತ್ತು. ಇದಲ್ಲದೇ ತೆಂಗಿನ ನಾರಿನಿಂದ ಹುರಿ ಹಗ್ಗ ತಯಾರಿಸುವುದು ಮತ್ತು ಬಟ್ಟೆಯ ಮೇಲೆ ಜರಿಯ ಕುಸುರಿ ಮಾಡುವುದು ಮೀನಿನ ಬಲೆ ಹೆಣೆಯುವುದು ಇವರ ದಿನ ನಿತ್ಯದ ಕೆಲಸವಾಗಿತ್ತು. ಆದರೆ ಇಷ್ಟು ಕೆಲಸವನ್ನು ಮಾಡಿದರೂ ಇವರಿಗೆ ದಿನವಿಡೀ ದುಡಿದರೂ ಇವರಿಗೆ ದೊರೆಯುತ್ತಿದ್ದದ್ದು ಬರೀ ನಾಲ್ಕಾಣೆ ಮಾತ್ರ. ಆದರೆ ಮಮ್ಮುಟಿಯ ವ್ಯವಹಾರ ಊರಿನಲ್ಲಿ ಪ್ರವಾಹವಾಗಿ ನುಗ್ಗಿದಾಗ ಎಲ್ಲರೂ ರಾತ್ರೋರಾತ್ರಿಯೇ ಶ್ರೀಮಂತರಾಗತೊಡಗಿದ್ದರು. ಮಮ್ಮುಟಿ, ವಾಸುವಿನ ಹತ್ತಿರ ಕೆಲಸ ಮಾಡುವ ಹುಡುಗನನ್ನು ತಮ್ಮ ಹೆಣ್ಣು ಮಕ್ಕಳಿಗೆ ವರವಾಗಿ ಹುಡುಕುವುದು ಹೆಣ್ಣು ಹೆತ್ತವರ ಕೆಲಸವಾಯಿತು. ಹೀಗಿರುವಾಗಲೇ ಮಮ್ಮುಟಿಗೆ ರಾಜಕೀಯದಲ್ಲಿ ಆಸಕ್ತಿ ಮೂಡಿ ಎಂ.ಎಲ್.ಎ. ಆಗಬೇಕೆಂದು ವಾಸುವಿನ ಬಳಿ ಹೇಳಿದಾಗ ವಾಸುವಿಗೂ ಇದು ಸರಿ ಎಂದು ಕಂಡು ವಾಸು ಮಮ್ಮುಟಿಯನ್ನು ಚುನಾವಣೆಯಲ್ಲಿ ಗೆಲ್ಲಿಸಬೇಕೆಂದು ವಾಸು ಒಂದು ಯೋಜನೆಯನ್ನೇ ರೂಪಿಸುತ್ತಾನೆ. ಮೊದಲು ಆ ಊರಿನಲ್ಲಿ ಕೋಮು ಸೌಹಾರ್ದದ ಮಾದರಿಯಾಗಿದ್ದ ಊರು ಮಮ್ಮುಟಿ, ವಾಸು ಇಬ್ಬರೂ ಒಂದಾದ ಬಳಿಕ ಆ ಊರಿನ ಹಿಂದೂ-ಮುಸ್ಲಿಂರು ಯಾವ ಭೇದ-ಭಾವವಿಲ್ಲದೆ ಪರಸ್ಪರ ಸ್ನೇಹ, ಪ್ರೀತಿಯಿಂದ, ಒಬ್ಬರಿಗೊಬ್ಬರು ಕಷ್ಟದಲ್ಲಿ ಸಹಾಯ ಮಾಡುತ್ತಿದ್ದರು. ಮಮ್ಮುಟಿಯ ಹತ್ತಿರ ಕೆಲಸ ಮಾಡುವವರು ಕೆಲವು ಹಿಂದೂಗಳು ಕೂಡ ಹಾಗೆ ವಾಹನ ಚಾಲಕರಿದ್ದರು. ಹಾಗೆ ವಾಸುವಿನ ಬಳಿಯು ಕೂಡ ಮುಸ್ಲಿಂ ವಾಹನ ಚಾಲಕರಿದ್ದರು. ವಾಸುವಿನ ಹೆಂಡತಿ ಕಲ್ಯಾಣಿ ಎಂದರೆ ಮುಸ್ಲಿಂ ಮಹಿಳೆಯರಿಗೆ ಅಚ್ಚುಮೆಚ್ಚಾಗಿದ್ದಳು. ಆ ಊರಿನಲ್ಲಿ ಹಿಂದೂ ಮುಸ್ಲಿಂ

ಇಬ್ಬರು ಸೇರಿ ಉರುಸು ಆಚರಿಸುತ್ತಿದ್ದರು. ಅಲ್ಲಿ ಹಿಂದೂ-ಮುಸ್ಲಿಂ ಭಾವೈಕ್ಯವನ್ನು ಕಾಣಬಹುದಾಗಿತ್ತು. ಆದರೆ ಮಮ್ಮುಟಿಯನ್ನು ಚುನಾವಣೆಯಲ್ಲಿ ಗೆಲ್ಲಿಸಬೇಕೆಂಬ ಕಾರಣದಿಂದಾಗಿ ವಾಸು ಮತ್ತು ಮಮ್ಮುಟಿ ಒಂದು ತಂತ್ರವನ್ನು ಹೂಡಿ ಹಿಂದೂ-ಮುಸ್ಲಿಂ ಇಬ್ಬರ ಮಧ್ಯೆ ಬಿರುಕು ಮೂಡುವಂತೆ ಮಾಡುತ್ತಾನೆ. ವಾಸುವಿನ ಮತ್ತು ಮಮ್ಮುಟಿಯ ಕಡೆಯವರು ಜನರ ಗುಂಪಿನಲ್ಲಿ ಹೋಗಿ ಇದು ನಮ್ಮ ಗುಡಿಯ ಜಾಗ ಇದನ್ನು ಮುಸ್ಲಿಮರು ತಮ್ಮ ಮಸೀದಿಯ ಜಾಗವೆಂದು ಕಬಳಿಸಲು ಹೊರಟಿದ್ದಾರೆ ಎಂದು ಜನರಲ್ಲಿ ತಪ್ಪು ಕಲ್ಪನೆ ಮೂಡಿಸಲು ಪ್ರಯತ್ನಿಸುತ್ತಾರೆ. ಹಾಗೆ ಮಮ್ಮುಟಿಯ ಕಡೆಯವರು ಇದು ಮಸೀದಿಯ ಜಾಗ ಎಂದು ಜನರನ್ನು ಕೋಮು ಗಲಭೆಗೆ ನೂಕುವಂತೆ ಮಾಡುತ್ತಾರೆ. "ಮರುದಿನ ರಾತ್ರಿ ಬೆಳಗಾಗುವ ಹೊತ್ತಿಗೆ ಮಸೀದಿಯ ಮತ್ತು ಗುಡಿಯ ನಡುವಿನ ಸ್ಥಳದಲ್ಲಿ ಕಾಂಪೌಂಡು ಗೋಡೆ ಕಟ್ಟಲು ಕಲ್ಲುಗಳು ಬಂದು ಬೀಳತೊಡಗಿದವು ಅದು ಹಿಂದುಗಳ ಕಡೆಯಿಂದ ಬಂದಿತೇ, ಮುಸ್ಲಿಮರ ಕಡೆಯಿಂದ ಬಂದಿತೇ ಎಂಬುದು ಯಾರಿಗೂ ಸರಿಯಾಗಿ ತಿಳಿಯದು. ಗುಡಿಯ ಸ್ಥಳವನ್ನು ಮುಸ್ಲಿಮರು ಆಕ್ರಮಿಸುತ್ತಿದ್ದಾರೆ ಎಂಬ ಸುದ್ದಿ ಹಿಂದೂ ವಲಯದಲ್ಲಿ ಹಬ್ಬಿದರೆ ಮಸೀದಿಯ ಸ್ಥಳವನ್ನು ಹಿಂದೂಗಳು ಒಳ ಹಾಕಿಕೊಳ್ಳುತ್ತಿದ್ದಾರೆ ಎಂಬ ಸುದ್ದಿ ಮುಸ್ಲಿಮರೊಳಗೆ ಗುಸುಗುಟ್ಟಿತು. ಸಂಜೆಯ ಹೊತ್ತಿಗೆ ಊರಿನಲ್ಲಿ ಉದ್ವಿಗ್ನ ವಾತಾವರಣ ತಲೆದೋರಿತು. ಸಂಜೆಯವರೆಗೆ ಹೊಗೆಯಾಡುತ್ತಿದ್ದ ಬೆಂಕಿ ರಾತ್ರಿಯಲ್ಲಿ ಸ್ಫೋಟಗೊಂಡಿತು. ಎಂದೂ ಇಲ್ಲದ್ದು ಅಂದು ಗುಡಿಯ ಬಳಿ ಊರಿನ ಕೆಲವು ಜನರು ಸೇರಿದರು. ರಾತ್ರಿ ಇಶಾ ನಮಾಜಿಗೆಂದು ಮಸೀದಿಗೆ ಬಂದವರು ಇದನ್ನು ನೋಡಿ ನಮಾಜಾದೊಡನೆ ಆ ಕಡೆಗೆ ನಡೆದರು. ಬಿಸಿ ರಕ್ತದ ಕೆಲವು ಹುಡುಗರು ಮುಂದೆ ಹೋಗಿ ಮಸೀದಿಯ ಸ್ಥಳವನ್ನು ಒಳಹಾಕಿಕೊಳ್ಳುವ ಯೋಜನೆಯೇ ಎಂದು ಜೋರಾಗಿ ಕೇಳಿದರು."[೯] ಇದು ಮುಂದೆ ಹಿಂದೂ-ಮುಸ್ಲಿಂ ಮಧ್ಯೆ ಕಣ್ಣು ಮುಚ್ಚಿ ತೆಗೆಯುವುದರೊಳಗೆ ರಣರಂಗವಾಗಿ ಮಾರ್ಪಟ್ಟಿತ್ತು. ಇದನ್ನು ನಿಯಂತ್ರಿಸಲು ಪೋಲಿಸ್ ಕರ್ಫ್ಯೂ ತರಿಸಬೇಕಾಗಿ ಬಂದಿತ್ತು. ನಂತರ ಮಮ್ಮುಟಿ ಮತ್ತು ವಾಸುವನ್ನು ಹಿರಿಯ ಅಧಿಕಾರಿಗಳು ಇವರನ್ನು ಕರೆಯಿಸಿ ಶಾಂತಿ ಕಾಪಾಡಲು ಕೇಳಿಕೊಂಡರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಮಮ್ಮುಟಿ ವಾಸು ಚುನಾವಣೆ ಪ್ರಚಾರಕ್ಕೆ ಬಳಸಿಕೊಂಡರು. "ಆಗ ಮಮ್ಮುಟಿ ಮಸೀದಿ ಮತ್ತು ಗುಡಿ ಅಕ್ಕ ಪಕ್ಕದಲ್ಲಿದೆಯೆಂದ ಮಾತ್ರಕ್ಕೆ ನಾವು ಪರಸ್ಪರ ಹೊಡೆದಾಡಬೇಕೇ? ನೆಲವನ್ನು ಯಾರಾದರೂ ಕದ್ದುಕೊಂಡು ಹೋಗಲು ಸಾಧ್ಯವಾ? ಈವರೆಗೂ ಯಾವುದೇ ಭೇದ ಭಾವವಿಲ್ಲದೆ ಸೋದರರಂತೆ ಬಾಳಿದ ನಾವು ಈಗ ಒಬ್ಬರನ್ನೊಬ್ಬರು ದ್ವೇಷಿಸಲು ಕಲಿತದ್ದಾದರೂ ಹೇಗೆ? ಹಾಲ್ಜೇನಿನಂತೆ ಬೆರೆತು ಬದುಕುತ್ತಿದ್ದ ನಮ್ಮ ನಡುವೆ ಈ ಹುಳಿ ಹಿಂಡಿದವರಿಗೆ ಶಿಕ್ಷೆಯಾಗಬೇಕು ನಾವೆಲ್ಲರೂ ಪುನಃ ಒಂದಾಗಿ ಈ ಹಿಂದಿನಂತೆಯೇ ಸ್ನೇಹದಿಂದ ಬದುಕಿ ಬಾಳಬೇಕು."[೧೦] ಎಂದು ಹೀಗೆ ಅಲ್ಲಿ ರಾಜಕೀಯ

---

೯. ಪು.ಸಂ. ೪೨, ಪ್ರವಾಹ ಸುಳಿ, ಸಾರಾ ಅಬೂಬಕ್ಕರ್

೧೦. ಪು.ಸಂ. ೪೩, ,, ,,

ತಂತ್ರವನ್ನು ಹಿಂದೂ-ಮುಸ್ಲಿಂರ ಮುಗ್ಧ ಸ್ವಭಾವವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿರುವುದನ್ನು ಚರ್ಚಿಸಲಾಗಿದೆ.

ಲೇಖಕಿಯು ಮುಸ್ಲಿಂ ಧರ್ಮದ ವಿರೋಧಿ ಮೌಲ್ಯಗಳನ್ನು ರಕ್ಷಿಸಿಕೊಂಡು ಬರಲು ಕಾರಣವಾಗಿರುವ ಮುಸ್ಲಿಂ ಸಮುದಾಯದಲ್ಲಿರುವ ಮೌಢ್ಯ, ಅಜ್ಞಾನವನ್ನು ಮುಸ್ಲಿಂ ಸಮುದಾಯದಿಂದ ಹೊರಹಾಕಬೇಕೆಂದು ಆಶಿಸುತ್ತಾರೆ. ಅದಕ್ಕಾಗಿ ಸ್ತ್ರೀ ಪುರುಷರಿಗೆ ಶಿಕ್ಷಣದ ಅವಶ್ಯಕತೆಯನ್ನು ಬಹುಪಾಲು ತಮ್ಮ ಕಥನ ಸಾಹಿತ್ಯದ ಮೂಲಕ ಪ್ರತಿಪಾದಿಸುತ್ತಾ ಬಂದಿದ್ದಾರೆ. ಅಂತೆಯೇ ಲೇಖಕಿ ಪ್ರವಾಹ ಸುಳಿ ಕಾದಂಬರಿಯ ವಿದ್ಯಾವಂತ ಪ್ರಜ್ಞೆಯುಳ್ಳ ಪೊಲೀಸ್ ಇನ್ಸ್‌ಪೆಕ್ಟರ್ ನವಾಜ್‌ನಿಂದ ಹೀಗೆ ಹೇಳಿಸುತ್ತಾರೆ. "ನಮ್ಮ ನಿಯಮಗಳನ್ನು ನಮ್ಮ ಒಪ್ಪಿಗೆ ಇಲ್ಲದೆ ಯಾರೂ ಬದಲಾಯಿಸಲಾರರು. ಅದರಲ್ಲಿ ಧರ್ಮ ಎಂದರೆ ಇಷ್ಟೇ ಏನು? ಒಂದು ಹೆಣ್ಣಿಗೆ ವಿನಾಕಾರಣ ತಲಾಖ್ ನೀಡಿ ಆಕೆ ಮತ್ತು ಮಕ್ಕಳನ್ನು ನಿರ್ಗತಿಕರನ್ನಾಗಿಸಿ ಬೀದಿಗಟ್ಟಿ ಆತ ಇನ್ನೊಮ್ಮೆ ಚಿಕ್ಕ ಹುಡುಗಿಯನ್ನು ಮದುವೆಯಾಗುವುದು ಧರ್ಮವೇ? ನನ್ನ ಅಧಿಕಾರಾವಧಿಯಲ್ಲಿ ಇಂತಹ ಎಷ್ಟೋ ಹೆಣ್ಣು ಮಕ್ಕಳು ಬದುಕಲು ಬೇರೆ ದಾರಿ ಇಲ್ಲದೆ ಸೂಳೆಯರಾದುದನ್ನು, ಧರ್ಮ ರಕ್ಷಣೆ ಎಂದರೆ ಇಂತಹ ನಿಯಮವನ್ನು ರಕ್ಷಿಸುವುದು ಎಂದರ್ಥವೇ ಅತ್ಯುತ್ತಮ ನಿಯಮಗಳು ಇಸ್ಲಾಂ ಧರ್ಮದ್ದಾಗಿದ್ದರೂ ಈ ನಿಯಮಗಳ ದುರ್ಬಳಕೆಯಾಗುತ್ತಿದೆ. ಈ ದುರ್ಬಳಕೆಯನ್ನು ತಡೆಗಟ್ಟುವಂತೆ ನಮ್ಮ ನಿಯಮಗಳಿಗೆ ಬದಲಾವಣೆ ತರಬೇಕು. ನಮ್ಮ ಶರೀರ ಎಂದರೆ ನಾವು ಮಾನವೀಯ ಅನುಕಂಪವುಳ್ಳ ಒಳ್ಳೆಯ ಮನುಷ್ಯರಾಗಿ ಪ್ರಾಮಾಣಿಕರಾಗಿ ಸತ್ಯ ಸಂಧರಾಗಿ ಬದುಕಬೇಕೆಂದು ಆ ರೀತಿ ಬದುಕಲು ಪೈಗಂಬರರು ಹಾಕಿ ಕೊಟ್ಟ ಮಾರ್ಗಸೂಚಿ ಎನ್ನಬಹುದು."[೧೧] ಮುಂದುವರೆದು ಶಾಸಕನಾಗಿರುವ ಮಮ್ಮುಟಿಗೆ ಈ ಸಮಸ್ಯೆಗಳ ಕಡೆ ರಕ್ಷಣೆ ಕೊಡಬೇಕೆಂದು ಹೇಳುತ್ತಾನೆ. "ವ್ಯಕ್ತಿ ನಿಯಮ, ಮಂದಿರ-ಮಸೀದಿ ಇವು ಯಾವುವು ನಮ್ಮ ಇಂದಿನ ಸಮಸ್ಯೆ ಅಲ್ಲವೇ ಅಲ್ಲವೆಂಬುದನ್ನು ನೆನಪಿಟ್ಟುಕೊಳ್ಳಬೇಕು. ನಮ್ಮ ಜನರ ಅನಕ್ಷರತೆ ಮತ್ತು ಬಡತನ ಇಂದಿನ ನಮ್ಮ ದುರವಸ್ಥೆಗೆ ಕಾರಣ ಜನಸಂಖ್ಯಾ ಸ್ಫೋಟ ಕೂಡ ನಮ್ಮ ದೊಡ್ಡ ಸಮಸ್ಯೆಯೇ. ನಮ್ಮ ಎಲ್ಲ ಜನರು ವಿದ್ಯಾವಂತರಾಗಿ ಎಲ್ಲರಿಗೂ ಬದುಕಲು ಒಂದು ಉದ್ಯೋಗವಿದ್ದರೆ ಈ ಬಡತನ ನಿವಾರಣೆಯಾಗುವುದಿಲ್ಲವೇ ಒಂದೆರಡು ಮಕ್ಕಳು ಚಿಕ್ಕ ಕುಟುಂಬವಾದರೆ ನೆಮ್ಮದಿಯಿಂದ ಬದುಕಬಹುದಲ್ಲವಾ? ನೀನು ಶಾಸಕನಾಗಿ ಹೋಗುತ್ತಿರುವುದರಿಂದ ನಾನಿದನ್ನು ಹೇಳುತ್ತಿದ್ದೇನೆ. ಅಲ್ಲಿ ನೀನು ಯಾವ ಧರ್ಮವನ್ನೂ ರಕ್ಷಿಸುವುದು ಬೇಡ. ಎಲ್ಲ ಹಳ್ಳಿಗಳ ಎಲ್ಲ ಮಕ್ಕಳಿಗೂ ವಿದ್ಯೆ ದೊರೆಯುವಂತೆ, ಗೌರವಯುತವಾಗಿ ಬಾಳುವಂತ ಉದ್ಯೋಗ ಎಲ್ಲರಿಗೂ ದೊರಕುವಂತೆ ಪ್ರಯತ್ನಿಸು. ನಮಗಿಂದು ಬೇಕಾದ ಧರ್ಮ ಇದೇ ಎಂದು ನೆನಪಿಟ್ಟುಕೊಂಡರೆ ಸಾಕು."[೧೨] ಎಂದು ಹೇಳುವ ಮಾತುಗಳು ಸಮಾಜದ ಅಭಿವೃದ್ಧಿಯನ್ನು ಸೂಚಿಸುತ್ತವೆ.

---

೧೧. ಪು.ಸಂ. ೧೪೧, ಪ್ರವಾಹ ಸುಳಿ, ಸಾರಾ ಅಬೂಬಕ್ಕರ್

೧೨. ಪು.ಸಂ. ೧೪೨, ,, ,,

"ತಳ ಒಡೆದ ದೋಣಿಯಲಿ" ಕಾದಂಬರಿಯಲ್ಲಿ ಸೈಪುದ್ದೀನ ಹೆಂಡತಿ ಆಯಿಷಾ ಹಿಂದೂ-ಮುಸ್ಲಿಂ ಸಂಬಂಧದ ಪ್ರಗತಿಯನ್ನು ಸಾಧಿಸುವುದನ್ನು ಕಾಣುತ್ತೇವೆ. ತಾವು ಬಂದಿರುವ ಊರಿಗೆ ಏನನ್ನಾದರೂ ಸಹಾಯ ಮಾಡಬೇಕೆಂಬ ಹಂಬಲ, ಬಡವನ ಬಗ್ಗೆ, ರೈತರ ಬಗ್ಗೆ ಅಲ್ಲಿಯ ಮಹಿಳೆಯ ಬಗ್ಗೆ ಆಯಿಷಾ ಹೊಂದಿದ್ದ ಮಾನವೀಯ ಕಾಳಜಿಯನ್ನು ಕಾಣಬಹುದು. ಹಿಂದುಳಿದ ಪ್ರದೇಶದಲ್ಲಿ ಸರಿಯಾದ ಸಾರಿಗೆ ವ್ಯವಸ್ಥೆ ಮತ್ತು ಶಿಕ್ಷಣ, ಆರೋಗ್ಯದ ಸೌಲಭ್ಯಗಳು ದೊರೆಯುವಂತೆ ಆಯಿಷಾ ಮಾಡುತ್ತಾಳೆ. ಬಸ್ಸಿನ ಸೌಕರ್ಯವನ್ನು ಒದಗಿಸಲು ಅರ್ಜಿ ಹಾಕಿಸುತ್ತಾಳೆ. ಗ್ರಂಥಾಲಯಗಳ ಸೌಲಭ್ಯವನ್ನು ಕಲ್ಪಿಸಿ ಅಲ್ಲಿನ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಹಾಯವಾಗುವಂತೆ ಮಾಡುತ್ತಾಳೆ. ಹೀಗೆ ಈ ಊರಿನ ಸುಧಾರಣೆಗಾಗಿ ಈ ರೀತಿ ಆಯಿಷಾ ಹೇಳುತ್ತಾಳೆ. "ಈ ಜಿಲ್ಲೆಯ ಮುಸ್ಲಿಮರೊಬ್ಬರು ಕೇಂದ್ರ ಸರ್ಕಾರದ ಮಂತ್ರಿಗಳೂ ಆಗಿದ್ದಾರೆ. ಅವರು ಮನಸ್ಸು ಮಾಡಿದರೆ ಇಂತಹ ಹಳ್ಳಿಗಳ ಉದ್ಧಾರಕ್ಕೆ ಎಷ್ಟು ಹೊತ್ತು ಬೇಕು? ಒಂದು ಶಾಲೆ ಒಂದು ಆಸ್ಪತ್ರೆ, ಕೊನೆಯ ಪಕ್ಷ ಕುಟುಂಬ ನಿಯಂತ್ರಣದ ಅಗತ್ಯವನ್ನಾದರೂ ಈ ಜನರಿಗೆ ತಿಳಿಸಿಕೊಡುವ ಒಂದು ಪ್ರಯತ್ನ"[೧೩] ಮಾಡಬೇಕೆಂದು ಕೇಳಿಕೊಳ್ಳುತ್ತಾಳೆ. ಹೀಗೆ ಸಮಾಜದ ಕಳಕಳಿ ಹೊಂದಿದ ಲೇಖಕಿ ಸಮಾಜದ ಅಭಿವೃದ್ಧಿಗೆ ಅಡ್ಡವಾಗಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಂಬಲವು ಅತ್ಯಂತ ಮಹತ್ವದ್ದಾಗಿದೆ. ಈ ರೀತಿ ಸಮಾಜದ ಉದ್ಧಾರದ ಬಗ್ಗೆ ಲೇಖಕಿಯ ಕಳಕಳಿಯು ಇರುವುದನ್ನು ಸಾರಾ ಅವರ ಕಥನ ಸಾಹಿತ್ಯದ ಮೂಲಕ ಚರ್ಚಿಸಬಹುದಾಗಿದೆ.

ಹೀಗೆ ಸಾರಾ ಅವರು ಸಂಕ್ರಮಣ ಪತ್ರಿಕೆಯ ಒಂದು ಲೇಖನದಲ್ಲಿ "ಕೋಮು ಸೌಹಾರ್ದವನ್ನು ಕಾಪಾಡುವುದೂ ಕೂಡ ನನ್ನ ಬರವಣಿಗೆಯ ಉದ್ದೇಶಗಳಲ್ಲೊಂದು. ನಮ್ಮ ನೋವು ನಲಿವುಗಳನ್ನು ಪರಸ್ಪರ ಹಂಚಿಕೊಂಡಾಗ ನಮ್ಮ ನಡುವಿನ ಕಂದಕದ ಅಗಲ ಕಿರಿದಾಗಬಹುದು ಎಂಬುದು ನನ್ನ ದೂರದ ಆಸೆ. ಜಾತಿ, ಧರ್ಮಗಳು, ದೇವರುಗಳು ನಮ್ಮ ಮನೆಯೊಳಗಿರಲಿ, ಅವುಗಳನ್ನು ಬೀದಿಗೆ ತಂದು ಮಾತನಾಡುವ ದೇವರುಗಳಾಗಿ ನಾವು ಮನುಷ್ಯರು ಪರಸ್ಪರ ಹೊಡೆದಾಡಿಕೊಂಡು ರಕ್ತ ಹರಿಸುವುದು ಬೇಡ, ಜಾತಿ ಧರ್ಮಗಳ ಸಂಕೋಲೆಯಲ್ಲಿ ನಮ್ಮನ್ನು ನಾವೇ ಬಂಧಿಸಿಕೊಂಡು ಕುಬ್ಜರಾಗಿ ನರಳುವುದು ಬೇಡ. ನಾವು ವಿಶಾಲ ಹೃದಯಿಗಳಾಗೋಣ. ದೇವರಿಗಾಗಿ ಕಾದಾಡುವುದನ್ನು ಬಿಟ್ಟು ಮನುಷ್ಯರ ಏಳಿಗೆಗಾಗಿ ಶ್ರಮಿಸೋಣ. ಕೇವಲ ಮನುಷ್ಯರಾಗಿ ಬದುಕಲು ಕಲಿಯೋಣ ಮತ್ತು ಈ ನೆಲವನ್ನು ಮಾನವ ಜೀವಿಗಳು ಬದುಕಲು ಯೋಗ್ಯ ಸ್ಥಳವಾಗಿ ಮಾಡಲು ಪ್ರಯತ್ನಿಸೋಣ"[೧೪] ಎಂದು ಹೇಳಿರುವುದನ್ನು ಕಾಣುತ್ತೇವೆ.

---

೧೩. ಪು.ಸಂ. ೧೨೦, ತಳ ಒಡೆದ ದೋಣಿಯಲ್ಲಿ, ಸಾರಾ ಅಬೂಬಕ್ಕರ್

೧೪. ಪು.ಸಂ. ೪೩, ಸಂಕ್ರಮಣ ಪತ್ರಿಕೆ, ಮುಸ್ಲಿಂ ಸಂವೇದನೆ ಮತ್ತು ನಾನು, ಸಾರಾ ಅಬೂಬಕ್ಕರ್

ಅಧ್ಯಾಯ ೬

ಸಾರಾ ಅವರ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ

ಅಧ್ಯಾಯ ೬

ಸಾರಾ ಅವರ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಿನ್ಯಾಸ

ಸಾರಾ ಅವರ ಕಥನ ಕ್ರಮದ ಮೂಲ ನೆಲೆ ಮುಸ್ಲಿಂ ಸಮುದಾಯ ಮತ್ತು ಮಹಿಳಾ ಪ್ರಶ್ನೆ. ತನ್ಮೂಲಕ ಇಡೀ ಸಮಾಜ ಮತ್ತು ಸಂಸ್ಕೃತಿಯನ್ನು ನೋಡುವುದು ಇಲ್ಲಿಯ ಪ್ರಮುಖ ಅಂಶ. ಮಹಿಳೆ ಒಂದು ಕೇಂದ್ರ ಬಿಂದುವಾದರೆ ಮುಸ್ಲಿಂ ಮತ್ತು ಮುಸ್ಲಿಂಯೇತರ ಪರಿಧಿಯಿಂದ ಸಮಾಜ ಮತ್ತು ಸಂಸ್ಕೃತಿಯನ್ನು ವಿವಿಧ ವಿನ್ಯಾಸಗಳಲ್ಲಿ ಚಿತ್ರಿಸಿರುವ ಕ್ರಮ ವರ್ಣಿಸಲಸಾಧ್ಯ. ಮುಸ್ಲಿಂ ಸಮಾಜ ಪ್ರಾಮುಖ್ಯತೆ ಪಡೆದರೂ ಕೂಡ ಮುಸ್ಲಿಂಯೇತರ ಬಂಧನಗಳನ್ನು ಇಲ್ಲಿ ಕಾಣಬಹುದಾಗಿದೆ. ಒಟ್ಟಿನಲ್ಲಿ ಮಹಿಳೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳ ವಿವಿಧ ವಿನ್ಯಾಸಗಳ ನೇಯ್ಗೆ ಇಲ್ಲಿ ಚರ್ಚಿತವಾಗುವ ವಿಷಯವಾಗಿದೆ. ಇಲ್ಲಿ ಮುಸ್ಲಿಂ ಸಮುದಾಯ ಮತ್ತು ಮುಸ್ಲಿಂಯೇತರ ಸಮುದಾಯದ ಎರಡು ವಿಭಿನ್ನ ಪಾತ್ರಗಳನ್ನು ಸೃಷ್ಟಿಸುವ ಔಚಿತ್ಯವನ್ನು ಕಾಣಬಹುದು.

ಸಾರಾ ಅವರ ಸ್ತ್ರೀ ಪಾತ್ರಗಳು ಹೆಚ್ಚಾಗಿ ಜೀವನ ಉತ್ಸಾಹವನ್ನು ತೋರಿಸುವಂತಹ ಪಾತ್ರಗಳಾಗಿವೆ. ಬಡತನ, ಕಷ್ಟ, ಗಂಡಂದಿರ ಬೇಜವಾಬ್ದಾರಿತನ ಯಾವುದೂ ಈ ಪಾತ್ರಗಳಲ್ಲಿರುವ ಪ್ರೀತಿಯನ್ನು ಬತ್ತಿಸುವುದಿಲ್ಲ. ಅತಿಥಿಗಳಿಗೆ ಮಾಡುವ ವಿಶೇಷ ಅಡುಗೆಯಿಂದ ಹಿಡಿದು ಬದುಕನ್ನು ವ್ಯಾಖ್ಯಾನಿಸುವ ಚಿಂತನೆಯ ತನಕ ಈ ಪಾತ್ರಗಳು ಜೀವನ ಶ್ರದ್ಧೆ ತೋರಿವೆ. ಮುಸ್ಲಿಂ ಸಮುದಾಯದ ಮಹಿಳೆಯರನ್ನು ಯಾವ ಯಾವ ರೀತಿಯಾಗಿ ವಿಭಿನ್ನ ನೆಲೆಯಲ್ಲಿ ನಿಂತು ನೋಡುತ್ತಾರೆ. ಒಬ್ಬ ಶ್ರೀಮಂತ ಮಹಿಳೆಗೂ ಒಬ್ಬ ಬಡ ಮಹಿಳೆಗೂ ಮುಸ್ಲಿಂ ಸಮುದಾಯದಲ್ಲಿ ಯಾವುದೇ ರೀತಿಯಾದ ಸ್ವತಂತ್ರವಿಲ್ಲದಿರುವುದನ್ನು ಕಾಣುತ್ತೇವೆ. ಹಾಗೇ ಮುಸ್ಲಿಂ ಸಮುದಾಯದಲ್ಲಿ ವಿಭಕ್ತ ಹಾಗೂ ಅವಿಭಕ್ತ ಕೌಟುಂಬಿಕ ವಿನ್ಯಾಸಗಳೆರಡನ್ನೂ ಕಾಣುತ್ತೇವೆ. ಎಲ್ಲ ಸಮುದಾಯದಲ್ಲಿ ಇರುವಂತೆ ಮುಸ್ಲಿಂ ಸಮುದಾಯದಲ್ಲಿ ಕುಟುಂಬದ ಯಜಮಾನಿಕೆ ಪುರುಷ ಪ್ರಧಾನವಾಗಿರುವುದಾಗಿದೆ. ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಶ್ರೀಮಂತ ಕುಟುಂಬಗಳು. ಜೀವನ ಪದ್ಧತಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡು ಬರುತ್ತವೆ. ಬಡ ಕುಟುಂಬದಲ್ಲಿ ಕುಟುಂಬದ

ನಿರ್ವಹಣೆಗಾಗಿ ಪತಿ-ಪತ್ನಿ ಮತ್ತು ಮಕ್ಕಳು ಎಲ್ಲರೂ ದುಡಿದರೆ, ಮಧ್ಯಮ ವರ್ಗದಲ್ಲಿ ಪತಿ ಹೊರಗೆ ದುಡಿಯುತ್ತಾರೆ. ಪತ್ನಿ ಮನೆಯ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿರುತ್ತಾಳೆ.

"ಚಂದ್ರಗಿರಿಯ ತೀರದಲ್ಲಿ" ಕಾದಂಬರಿಯಲ್ಲಿ ಮುಸ್ಲಿಂ ಸಮುದಾಯದಲ್ಲಿನ ಮಹಿಳೆಯೊಬ್ಬಳು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಪುರುಷರ ಸ್ವಾರ್ಥಕ್ಕೆ ಹೇಗೆ ಬಲಿಯಾಗುತ್ತಾಳೆ ಎಂಬುದನ್ನು ಕಟ್ಟಿಕೊಟ್ಟಿದ್ದಾರೆ. ಈ ಕಾದಂಬರಿಯಲ್ಲಿ ಬರುವ ಕಥಾ ನಾಯಕಿ ನಾದಿರಾ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದರೂ ಇವಳು ಸುರಕ್ಷಿತ ಕೌಟುಂಬಿಕ ಜೀವನದಲ್ಲಿ ಇದ್ದರೂ ಕೂಡ ಆರ್ಥಿಕ ಅಸಹಾಯಕತೆ ನಾದಿರಾಳ ಬದುಕಿನ ದಿಕ್ಕನ್ನೇ ಬದಲಾಯಿಸುತ್ತದೆ. ಮಹಿಳೆಗೆ ಸಾಮಾಜಿಕ ನಿಬಂಧಗಳಿಂದ ತಲಾಖ್ ಪರಿಸ್ಥಿತಿಗೆ ಒಪ್ಪಿಗೆ ಕೊಡಲೇಬೇಕಾದ ಅತಂತ್ರ ಸ್ಥಿತಿ. ಹೀಗೆ ನಾದಿರಾಳಿಂದ ಆರ್ಥಿಕ ಸಹಾಯವನ್ನು ನಿರೀಕ್ಷಿಸಿ ನಡೆದ ಘಟನೆ ನಾದಿರಾಳು ತಲೆಯೊಡ್ಡುವ ಪರಿಸ್ಥಿತಿ ಒದಗುತ್ತದೆ. ಅವಳಿಂದ ಉಪಕಾರ ಪಡೆದ ಕುಟುಂಬ ಅವಳನ್ನು ಇನ್ನೊಂದು ಮದುವೆಯಾಗೆಂಬ ಶೂಲಕ್ಕೆ ತಂದು ನಿಲ್ಲಿಸುತ್ತದೆ.

ಆಗ ನಾದಿರಾ ತನ್ನೆಲ್ಲಾ ನೋವು-ನಲಿವುಗಳನ್ನು ಧರ್ಮದ ಹೆಸರಿನಲ್ಲಿ ಕಟ್ಟಿಕೊಂಡು ಅನ್ಯಾಯದ ವಿರುದ್ಧ ಹೋರಾಡಲಾಗದ ಅಸಹಾಯಕ ಸ್ಥಿತಿಯಿಂದ ಕೊನೆಗೆ ಅಲ್ಲಾಹುನ ಸಾಮ್ರಾಜ್ಯದಲ್ಲಿ ನ್ಯಾಯ ಕೇಳುವದಕ್ಕಾಗಿ ಮಸೀದಿಯ ಕೊಳಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇಲ್ಲಿ ಒಂದು ಹೆಣ್ಣಿನ ಅಸಹಾಯಕ ಸ್ಥಿತಿಯನ್ನು ಕಾಣಬಹುದಾಗಿದೆ. ಹೀಗೆ ಮುಸ್ಲಿಂ ಸಮುದಾಯದ ಅಮಾಯಕ ಹೆಣ್ಣು ಮಕ್ಕಳ ಬದುಕಿನ ದುರಂತವೂ ಆಗಿ ಕಾಣಿಸಿಕೊಳ್ಳುತ್ತದೆ.

ಮುಸ್ಲಿಂ ಸಮುದಾಯದಲ್ಲಿ ಮದುವೆಗೆ ಮುಂಚೆ ಹುಡುಗರು ಹುಡುಗಿಯರನ್ನು ನೋಡುವ ಸಂಪ್ರದಾಯ ಇಲ್ಲದಿರುವ ಕಾರಣದಿಂದಾಗಿ ಇಂಥ ಸಂಪ್ರದಾಯದಿಂದ ಗಂಡಸರು ಹೆಂಗಸರ ಬದುಕನ್ನು ಬಲಿ ತೆಗೆದುಕೊಳ್ಳುವುದನ್ನು ನೋಡುತ್ತೇವೆ. "ವಜ್ರಗಳು" ಕಾದಂಬರಿಯ ಮುಖ್ಯ ಪಾತ್ರವಾಗಿ ಬರುವ ನಫೀಸಾ ತನ್ನ ಗಂಡಂದಿರಿಂದ ತಲಾಖ್ ಪಡೆದು ನಂತರದ ತನ್ನ ಬದುಕಿನಲ್ಲಿ ಅನುಭವಿಸಿದ ಕರಾಳ ಸ್ವರೂಪವನ್ನು ನೋಡುತ್ತೇವೆ. ಮಹಮ್ಮದ್ ಹಾಜಿಯವರಿಗೆ ನಾಲ್ಕು ಹೆಣ್ಣು ಮಕ್ಕಳು ಒಂದು ಗಂಡು ಮಗು. ಮೊದಲ ಮೂರು ಹೆಣ್ಣು ಮಕ್ಕಳನ್ನು ಹಳ್ಳಿಯ ಗಂಡಸನಿಗೆ ಕೊಟ್ಟು ವಿವಾಹ ಮಾಡಿದರು. ಹಳ್ಳಿಯಲ್ಲಿರುವ ಹೆಣ್ಣು ಮಕ್ಕಳ ಕಷ್ಟ -ಸುಖಗಳನ್ನು ತಿಳಿದ ನಾಫೀಸಾಳ ತಾಯಿ ಹಲೀಮಾ, ತಮ್ಮ ನಾಲ್ಕನೇ ಮಗಳನ್ನಾದರೂ ಪಟ್ಟಣದ ಹುಡುಗನಿಗೆ ಕೊಡಬೇಕೆಂದು ತೀರ್ಮಾನಿಸುತ್ತಾರೆ. ಆದರೆ ನಫೀಸಾ ತನ್ನ ಗಂಡನಾಗುವವನ ಬಗ್ಗೆ ಮಹತ್ವಾಕಾಂಕ್ಷೆ ಹೊಂದಿದವಳಲ್ಲ. ತನ್ನನ್ನು ಪ್ರೀತಿಯಿಂದ ಕಾಣುವ ಗಂಡ ಸಿಕ್ಕರೆ ಸಾಕು ತನ್ನ ಬಾಳು ಸಾರ್ಥಕ ಎಂದುಕೊಂಡಿದ್ದವಳು. ಆದರೆ ಇವಳನ್ನು ವಿವಾಹವಾಗುವ ಹುಡುಗ ಬದ್ರುದ್ದೀನ್ ಪಟ್ಟಣದ ಜೀವನಕ್ಕೆ ಹೊಂದಿಕೊಂಡಿದ್ದವನು ಅಲ್ಲಿಯ ಜೀವನ ಶೈಲಿಯನ್ನು ಮೈಗೂಡಿಸಿಕೊಂಡಿರುವುದನ್ನು ನಗರದ ಶೋಕಿಗೆ ಮರುಳಾಗಿ ಹಳ್ಳಿಯ ಹುಡುಗಿ ಅದರಲ್ಲೂ ಬಣ್ಣದಲ್ಲಿ ಕಪ್ಪು ಎನ್ನುವ ಕಾರಣಕ್ಕೆ ನಫೀಸಾಳಿಗೆ

ತಲಾಖ್ ಕೊಡುತ್ತಾನೆ. ಪುರುಷರಿಗೆ ಉದ್ಯೋಗ ಆರ್ಥಿಕ ಭದ್ರತೆಯನ್ನು ನೀಡಿದರೆ ಆರ್ಥಿಕವಾಗಿ ಪರಾವಲಂಬಿಯಾದ ಹೆಣ್ಣಿಗೆ ಅವಳ ವಿವಾಹವೇ ಭದ್ರತೆಯನ್ನು ಒದಗಿಸುವ ನೆಲೆಯಾಗಿರುತ್ತದೆ. ಇಂತಹ ಸ್ಥಿತಿಯಲ್ಲಿ "ಹೆಣ್ಣಿಗೆ ತಲಾಖ್ ಕೊಡುವುದೆಂದರೆ, ಕೇವಲ ದಾಂಪತ್ಯ ಸುಖದಿಂದ ಅವಳನ್ನು ಹೊರಗಿಡುವುದಷ್ಟೇ ಅಲ್ಲ ನಿರುದ್ಯೋಗದ ಸ್ಥಿತಿಯನ್ನು ತಂದೊಡ್ಡುವುದು. ನಿರುದ್ಯೋಗಿ ಯುವಕ ಹೇಗೆ ಕುಟುಂಬದಲ್ಲಿ ಅನಪೇಕ್ಷಿತನೋ ಹಾಗೆಯೇ ತಲಾಖ್ ಪಡೆದ ಹೆಣ್ಣು ಕೂಡ ಆರ್ಥಿಕವಾಗಿ ಬದುಕುವ ಹಕ್ಕನ್ನೇ ಕಳೆದುಕೊಳ್ಳುತ್ತಾಳೆ.[೧] ಹೀಗೆ ನಫೀಸಾ ಗಂಡನ ಮನೆಯಲ್ಲಿ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾದರೆ ತಂದೆಯ ಮನೆಯಲ್ಲಿ ಮತ್ತೊಂದು ರೀತಿಯ ಶೋಷಣೆಗೆ ಒಳಗಾಗುತ್ತಾಳೆ. ತವರು ಮನೆಯಲ್ಲಿ ಅತ್ತಿಗೆಯಿಂದ ಅವಮಾನದ ಮಾತುಗಳನ್ನು ಕೇಳಬೇಕಾಗಿ ಬರುತ್ತದೆ. ಇಂತಹ ಅಸಹಾಯಕ ಸ್ಥಿತಿಯಲ್ಲಿ ಮಾನಸಿಕ ವೇದನೆಗೆ ಒಳಗಾದ ನಫೀಸಾಳಿಗೆ ಮತ್ತೊಂದು ವಿವಾಹ ಮಾಡಲು ಇವಳ ತಂದೆ-ತಾಯಿ ಮುಂದಾದಾಗ ಇವಳು ಮೌನವಾಗಿ ಸಮ್ಮತಿಸುವಂತೆ ಮಾಡುತ್ತದೆ. ಆದರೆ ನಫೀಸಾಳ ಬಗ್ಗೆ ಬಾಲ್ಯದಿಂದಲೇ ಆಸಕ್ತಿ ಹೊಂದಿದ್ದ ಶಫಿಯುಲ್ಲಾ ನಫೀಸಾಳನ್ನು ವಿವಾಹವಾಗುವ ಇಚ್ಛೆ ತೋರಿದಾಗ ತನ್ನ ಮಗನ ಭವಿಷ್ಯಕ್ಕಾಗಿ ತನ್ನ ಸುಖವಾಗುವ ಜೀವನವನ್ನೇ ತ್ಯಾಗಮಾಡುತ್ತಾಳೆ. ಆದರೆ ಬದ್ರುದ್ದೀನ್ ಶಿಕ್ಷಣದ ನೆಪ ಒಡ್ಡಿ ತನ್ನ ಮಗನನ್ನು ನಗರಕ್ಕೆ ಕರೆದೊಯ್ಯುತ್ತಾನೆ. ಹುಟ್ಟಿದ ದಿನದಿಂದ ಒಂದು ದಿನವೂ ತನ್ನ ಮಗುವೆಂದು ಬಂದು ನೋಡದ ಬದ್ರುದ್ದೀನ್ ಗಂಡು ಮಗು ಎಂಬ ಕಾರಣಕ್ಕೆ ಕರೆದುಕೊಂಡು ಹೋಗಿ ನಫೀಸಾಳಿಗೆ ಇದ್ದ ಒಂದು ಕರುಳು ಸಂಬಂಧವನ್ನು ದೂರಮಾಡುತ್ತಾನೆ. ತನ್ನ ಮಗನ ಭವಿಷ್ಯದಲ್ಲಿಯೇ ತನ್ನ ಭವಿಷ್ಯವೆಂದುಕೊಂಡವಳಿಗೆ ಈ ಆಘಾತದಿಂದ ಅವಳ ಮಾನಸಿಕ ಸ್ಥಿತಿ ಹದಗೆಡುತ್ತದೆ. ಕೊನೆಗೆ ಈ ಸ್ಥಿತಿಯಿಂದ ನಫೀಸಾ ಹೊರಬರಬೇಕೆಂದು ಇವಳ ತಂದೆ ತಾಯಿ, ಎಂಟು ಮಕ್ಕಳ ತಂದೆಯಾಗಿರುವ ಉಸ್ಮಾನರಿಗೆ ನಫೀಸಾಳನ್ನು ನಿಖಾ ಮಾಡಿಕೊಡುತ್ತಾರೆ. ಇದರಿಂದ ನಫೀಸಾ ಈ ನೋವು-ಅವಮಾನಗಳಿಂದ ಸ್ವಲ ಕಾಲದವರೆಗಾದರೂ ದೂರ ಉಳಿಯುವಂತಹ ಔದಾರ್ಯವನ್ನು ತೋರಿದ ಉಸ್ಮಾನರ ಕುಟುಂಬದಲ್ಲಿ ಆಕೆ ಒಂದಾಗಲೂ ಪ್ರಯತ್ನಿಸುತ್ತಾಳೆ. ಆದರೆ ಉಸ್ಮಾನರ ಹಿರಿಯ ಮಗ ನಫೀಸಾಳನ್ನು ದ್ವೇಷಿಸುತ್ತಾನೆ. ತಂದೆಯ ಆಸ್ತಿಯಲ್ಲಿ ಹಕ್ಕು ಇದೆ ಎಂದು ತಿಳಿದ ಹುಸ್ಯೇನ ಉಪಾಯದಿಂದ ನಫೀಸಾಳನ್ನು ತವರು ಮನೆಗೆ ಕಳುಹಿಸುತ್ತಾನೆ. ಕಾಯಿಲೆಯಿಂದ ಸಾವು-ಬದುಕಿನ ಮಧ್ಯ ಹೋರಾಡುತ್ತಿದ್ದ ಉಸ್ಮಾನರಿಂದ ಹೆಬ್ಬೆರಳಿನ ಗುರುತು ಹಾಕಿಸಿಕೊಂಡು ನಫೀಸಾಳಿಗೆ ತಲಾಖ್ ಕಳುಹಿಸುತ್ತಾನೆ. ಹೀಗೆ ಎರಡು ಸಲ 'ತಲಾಖ್' ಪಡೆದ ನಫೀಸಾ ಮುಸ್ಲಿಂ ಸಮಾಜದ ಪುರುಷರ ಸ್ವಾರ್ಥಕ್ಕೆ ಮಹಿಳೆಯರು ಬಲಿಯಾಗುವುದನ್ನು ಕಾಣುತ್ತೇವೆ. ಹೀಗೆ ಇದೆಲ್ಲದರಿಂದಲೂ ಬೇಸತ್ತ ನಫೀಸಾ ಕೊನೆಗೆ ತನ್ನ ಬದುಕನ್ನು ತಾನೇ ಕಂಡುಕೊಳ್ಳಲು ಬಯಸುತ್ತಾಳೆ. ಒಂದು ಹೆಣ್ಣು ಮಗುವನ್ನು

---

೧. ಪು.ಸಂ. ೧೩೭, ಸಾಹಿತ್ಯ ವಿಮರ್ಶೆ, ೧೯೯೨, ಸಂಪಾದಕರು, ಡಾ.ರಹಮತ್ ತರೀಕೆರೆ

ದತ್ತು ತೆಗೆದುಕೊಂಡು ತನ್ನ ವೈಯಕ್ತಿಕ ದುಡಿಮೆಗೆ ಹೈನುಗಾರಿಕೆಯನ್ನು ಪ್ರಾರಂಭಿಸಿ ಯಾರ ಹಂಗಿನಲ್ಲೂ ಇರಲು ಇಷ್ಟ ಪಡದೆ ಸ್ವತಂತ್ರವಾಗಿ ಬದುಕುವುದನ್ನು ಕಂಡುಕೊಳ್ಳುತ್ತಾಳೆ. ಮೋಸ ಮತ್ತು ಕ್ರೌರ್ಯದಿಂದ ತುಂಬಿರುವ ಪುರುಷ ಪ್ರಧಾನ ಸಮಾಜಕ್ಕೆ ತೋರಿದ ಪ್ರತಿಭಟನೆ ಇದಾಗಿದೆ.

ಇಂಥಹ ಪರಿಸ್ಥಿತಿಯಿಂದ ನಫೀಸಾಳ ಹೆತ್ತವರು ಮಾನಸಿಕವಾಗಿ ತೊಳಲುತ್ತಾರೆ. ತಮ್ಮ ಮಗಳ ನೆಮ್ಮದಿಯ ಬದುಕನ್ನೇ ಕಳೆದುಕೊಂಡು ಅಸಹಾಯಕಾರಿ ವ್ಯವಸ್ಥೆಯ ಹಿಡಿತದಲ್ಲಿ ಸಿಕ್ಕಿರುವ ತಮ್ಮ ಮಗಳ ಸ್ಥಿತಿಯಿಂದಾಗಿ ಅವಳ ಚಿಂತೆಯಲ್ಲಿಯೇ ಕಾಲವಾಗುತ್ತಾರೆ. ಆದರೆ ನಫೀಸಾಳ ಅಣ್ಣ ಕಾಲಿದ್ ಮುಸ್ಲಿಂ ಸಮಾಜದ ಕಾನೂನುಗಳ ಬಗ್ಗೆ ತಿರಸ್ಕಾರದ ಮಾತನಾಡುತ್ತಾನಾದರೂ ಅದನ್ನು ಪ್ರತಿಭಟಿಸುವ ಪ್ರಯತ್ನ ಮಾಡುವುದಿಲ್ಲ. ಹೀಗೆ ವ್ಯವಸ್ಥೆಯನ್ನು ವಿರೋಧಿಸಿ ಪ್ರತಿಭಟಿಸಲು ಸಾಧ್ಯವಾಗದ ಸ್ಥಿತಿಯಲ್ಲಿ ಆಧುನಿಕ ಪುರುಷರು ಇರುವುದನ್ನು ಕಾದಂಬರಿಯ ಮೂಲಕ ಕಾಣುತ್ತೇವೆ. ಹೀಗೆ ಮುಸ್ಲಿಂ ಸಂಪ್ರದಾಯದ ಸಾಮಾಜಿಕ ನಿಯಮಗಳನ್ನು ಮೌನವಾಗಿ ಒಪ್ಪಿಕೊಳ್ಳುವ ಅಸಹಾಯಕತೆಯನ್ನು ಕಾಣುತ್ತೇವೆ.

ಸಾರಾ ಅವರ 'ಸಹನಾ' ಕಾದಂಬರಿ 'ಚಂದ್ರಗಿರಿಯ ತೀರದಲ್ಲಿ' ಮತ್ತು 'ವಜ್ರಗಳು' ಕಾದಂಬರಿಯ ಮುಂದುವರೆದ ಭಾಗವಾಗಿ ನೋಡುತ್ತೇವೆ. ಸಹನಾ ಕಾದಂಬರಿಯಲ್ಲಿಯೂ ಸಹ ಶೋಷಿತ ಹೆಣ್ಣಿನ ನೋವನ್ನು ಹೇಳುವುದರ ಮೂಲಕ ಆ ನೋವು, ಸಂಕಟ, ತಿರಸ್ಕಾರ ನಸೀಮಾಳಿಗೆ ಪ್ರತಿಭಟನೆಯ ಪಾಠವನ್ನು ಕಲಿಸಿಕೊಡುತ್ತದೆ.

ನಸೀಮಾಳ ತಾಯಿ ಸಕೀನಾ ಬೇರೆಯವರ ಮನೆಗೆಲಸ ಮಾಡಿ ನಫೀಸಾಳನ್ನು ಸಾಕುತ್ತಿದ್ದಳು. ಇದರಿಂದ ತನ್ನ ಮಗಳು ಮನೆಯಲ್ಲಿ ಒಂಟಿಯಾಗಿ ಇರುತ್ತಾಳೆ ಎಂಬ ಕಾರಣದಿಂದಾಗಿ ನಸೀಮಾಳಿಗೆ ಹದಿಮೂರನೇ ವರ್ಷದಲ್ಲಿಯೇ ಅನ್ವರ್ ಪಾಷಾನೊಂದಿಗೆ ವಿವಾಹ ಮಾಡಿ ಮುಗಿಸುತ್ತಾಳೆ. ಹೀಗೆ ನಸೀಮಾ ಹದಿನಾಲ್ಕನೇ ವರ್ಷಕ್ಕೆ ಒಂದು ಮಗುವಿನ ತಾಯಿಯಾಗುತ್ತಾಳೆ. ನಂತರ ಒಂದರ ಮೇಲೊಂದರಂತೆ ಚಿಕ್ಕ ವಯಸ್ಸಿನಲ್ಲಿಯೇ ಮೂರು ಮಕ್ಕಳ ತಾಯಿಯಾಗಿ ಸರಿಯಾದ ಪೌಷ್ಠಿಕ ಆಹಾರವಿಲ್ಲದೆ ರೋಗ ಪೀಡಿತಳಾಗಿ, ಸಕಾಲಕ್ಕೆ ತಾಯಿಯ ಸಹಾಯದಿಂದ ಆಸ್ಪತ್ರೆಗೆ ಸೇರಿ ತನ್ನ ಪ್ರಾಣವನ್ನು ಉಳಿಸಿಕೊಳ್ಳುತ್ತಾಳೆ. ಆಗ ಪಾಷಾ ಮತ್ತೆ ನಸೀಮಾಳನ್ನು ತನ್ನ ಮನೆಗೆ ಬರುವಂತೆ ಹೇಳಿದಾಗ ನಸೀಮಾ ಹೇಳುವ ಮಾತುಗಳನ್ನು ಗಮನಿಸಿದರೆ ಇಡೀ ಮುಸ್ಲಿಂ ಮಹಿಳೆಯರಿಗೆ ಮಾತ್ರ ಸೀಮಿತವಾಗದೇ ಇಡೀ ಸ್ತ್ರೀ ಸಮುದಾಯಕ್ಕೆ ಅನುಕರಣೀಯವಾಗುತ್ತದೆ.

"ನಾನು ಆಗಾಗ ನಿಮ್ಮ ಬಳಿ ಬಂದು ಭಿಕ್ಷೆ ಬೇಡ ಬೇಕಾಗಿತ್ತೆ? ಆ ಭಿಕ್ಷಾನ್ನ ನನಗೆ ಬೇಕಾಗಿರಲಿಲ್ಲ. ನಾನು ಯಾರಿಂದಾಗಿ ರೋಗಿಯಾದೆ? ನಿಮಗೆ ನನ್ನಿಂದ ಸುಖ ಸಿಗಲಾರದೆಂದು ಮನವರಿಕೆಯಾಯಿತೇನೋ ನಿಮ್ಮ ಸುಖಕ್ಕಾಗಿ ಇನ್ನೊಬ್ಬಳನ್ನು ಮದುವೆಯಾದಿರಿ. ಈಗ ನಾನು ನಿಮ್ಮೊಡನೆ ಬಂದರೆ ಮೊದಲಿನಂತೆಯೇ ವರ್ಷಕ್ಕೊಂದು ಮಗುವಾಗಿ ನನ್ನ ಆರೋಗ್ಯ ಮಾಯವಾಗುತ್ತದೆ. ನಾನು ರೋಗಿಯಾಗಿ ಹಾಸಿಗೆ ಹಿಡಿಯುತ್ತೇನೆ.

ಆಗ ನಿಮ್ಮ ದೇಹ ಸುಖ ನೀವು ಇನ್ನೊಬ್ಬಳನ್ನು ನಿಖಾ ಮಾಡಿಕೊಳ್ಳುತ್ತೀರಿ ಅಲ್ಲವೇ? ಕ್ಷಮಿಸಿ, ಇನ್ನೊಮ್ಮೆ ಭೂಮಿಯಂತೆ ಸಹನಾಮಯಿಯಾಗಿರಲು ನಿಮ್ಮ ಕೋಣೆಯಿಂದ ತೇಲಿ ಬರುವ ಆ ಪಿಸು ನುಡಿಗಳನ್ನು ಕಿಲ ಕಿಲ ನಗುವನ್ನು ಕೇಳಿಕೊಂಡು ಆ ಅಗ್ನಿ ಕುಂಡದಲ್ಲಿ ಬೇಯಲು ನಾನು ಸಿದ್ಧಳಿಲ್ಲ"[೨] ಎಂದು ಹೇಳುವಲ್ಲಿ ಗಂಡನ ಬಗ್ಗೆ ಅಷ್ಟೇ ವಿರೋಧಿಸದೇ ಇಡೀ ಮುಸ್ಲಿಂ ಸಮುದಾಯದ ಸ್ವಾರ್ಥಪರ ಗಂಡಸರ ಬಗ್ಗೆ ವಿರೋಧಿಸುವುದನ್ನು ಕಾಣುತ್ತೇವೆ. ನಫೀಸಾಳ ಮಾತು ಕೇಳಿದ ಪಾಷಾ "ನಾನು ಇನ್ನೊಂದು ನಿಖಾ ಮಾಡಿಕೊಳ್ಳುತ್ತೇನೆ ಹೊರತು ಸಾಯುವವರೆಗೂ ನಿನಗೆ ತಲಾಖ್ ಕೊಡಲಾರೆ"[೩] ಎಂದು ಹೇಳುವಲ್ಲಿ ಗಂಡಸರು ತಮ್ಮ ಸ್ವಾರ್ಥಕ್ಕೆ ತಲಾಖ್‌ನ್ನು ಬಳಸಿಕೊಳ್ಳುವುದನ್ನು ಗಮನಿಸಬಹುದಾಗಿದೆ.

ಕೊನೆಗೆ ನಸೀಮಾ ಮುಸ್ಲಿಂ ಸಮುದಾಯದ ಧಾರ್ಮಿಕ ನಿಯಮಗಳನ್ನು ಮೀರಿ ನಿಲ್ಲಲು ಪ್ರಯತ್ನಿಸುತ್ತಾಳೆ. ಪಾಷಾ ಹೇಳಿದ ಮಾತುಗಳನ್ನು ಕೇಳಿ ನಸೀಮಾ ತನ್ನಲ್ಲಿಯೇ ನೀವು ನನಗೆ ತಲಾಖ್ ಹೇಳದಿದ್ದರು ಪರವಾಗಿಲ್ಲ ನನ್ನನ್ನು ಮಾತ್ರ ಪ್ರೀತಿಸುವವನೊಬ್ಬ ಬಂದರೆ ಅಂತಹವನಿಗೆ ನನ್ನನ್ನು ನಾನೇ ಅರ್ಪಿಸಿಕೊಳ್ಳುತ್ತೇನೆ. ಅವನೊಡನೆ ದಕ್ಷಿಣದ ಕಡೆಗೆ ಓಡಿಹೋಗುತ್ತೇನೆ ಎಂದು ಹೇಳುವುದರಿಂದ ವ್ಯವಸ್ಥೆಯನ್ನು ಧಿಕ್ಕರಿಸುವ ಮನೋಭಾವ ಬೆಳೆಸಿಕೊಳ್ಳುವುದನ್ನು ಗ್ರಹಿಸಬಹುದಾಗಿದೆ. ಹೀಗೆ ಸಾರಾ ಅವರು ನಸೀಮಾಳಂತಹ ಪಾತ್ರಗಳ ಮೂಲಕ ಇಡೀ ಸ್ತ್ರೀ ಕುಲವನ್ನು ಜಾಗೃತಗೊಳಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ಹೀಗೆ "ಸಹನಾ ಮೂರ್ತಿಯಂತಿದ್ದ ಹೆಣ್ಣೊಂದು ಇಂತಹ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೆ, ಪುರುಷ ಪ್ರಧಾನ ಸಂಸ್ಕೃತಿ ಹೇಗೆ ಬದುಕನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದುಕೊಂಡು ಗಹಗಹಿಸುತ್ತದೆ."[೪] ಎಂಬ ಸತ್ಯವನ್ನು ಲೇಖಕಿ ತೆರೆದಿಟ್ಟಿರುವುದನ್ನು ಕಾಣಬಹುದು.

ಶೋಷಣೆಯ ಮತ್ತೊಂದು ಕರಾಳ ಮುಖವನ್ನು 'ಪಂಜರ' ಕಾದಂಬರಿಯಲ್ಲಿ ನೋಡಬಹುದು. ಅವಿವಾಹಿತ ತಾಯಿ ತನ್ನ ಮಗನೊಂದಿಗೆ ಈ ಸಮಾಜದಲ್ಲಿ ಬಾಳಬೇಕೆಂದಾಗ ಆಕೆ ಎದುರಿಸಬೇಕಾದ ಸಮಸ್ಯೆಗಳನ್ನು ಕುರಿತು ಹೇಳುತ್ತಾರೆ. ತನ್ನ ಮಗು ತನ್ನ ಕಣ್ಣೆದುರಿಗೆ ಇದ್ದು ಬೆಳೆಯುತ್ತಿರುವುದನ್ನು ನೋಡಿ ತನ್ನದು ಎಂದು ಹೇಳಿಕೊಳ್ಳಲಾರದಂತಹ ಪರಿಸ್ಥಿತಿ ಇದ್ದಾಗ ಹೆಣ್ಣು ಅನುಭವಿಸುವ ಮಾನಸಿಕ ತಳಮಳವನ್ನು ಈ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ವಸಂತಕುಮಾರ ನಯ ವಂಚನೆಯ ಮೂಲಕ ಹೆಣ್ಣನ್ನು ಮರಳು ಮಾಡಿ ಉಪಾಯವಾಗಿ ಆಕೆಯೊಡನೆ ದೈಹಿಕ ಸಂಬಂಧ ಬೆಳೆಸಿ ನಂತರ ಆಕೆ ಗರ್ಭಿಣಿಯಾಗಿದ್ದಾಳೆ ಎಂಬ ವಿಷಯ ತಿಳಿದು ಆಕೆಯಿಂದ ದೂರ

---

೨. ಪು.ಸಂ. ೧೬೭, ಸಹನಾ, ಸಾರಾ ಅಬೂಬಕ್ಕರ್

೩. ಪು.ಸಂ. ೧೭೫, ,, ,,

೪. ಪು.ಸಂ. ೪೭, ಹೊಸದಿಕ್ಕು, ಡಾ.ಬಸವರಾಜ ಸಬರದ

ಸರಿಯುತ್ತಾನೆ. ನಂತರ ಈತನಿಗೆ ತನ್ನ ಹಿಂದೆ ಮಾಡಿದ ಈ ಕೆಲಸದ ಬಗ್ಗೆ ಯಾವುದೇ ರೀತಿಯಾದ ಜಿಗುಪ್ಸೆ ಇಲ್ಲದೆ ಮತ್ತೊಂದು ಹುಡುಗಿಯ ಜೊತೆಗೆ ವಿವಾಹ ಮಾಡಿಕೊಂಡು ಸಮಾಜದಲ್ಲಿ ಬದುಕುವುದನ್ನು ಕಾಣುತ್ತೇವೆ. ಆದರೆ ಗಂಡಿನ ವಂಚನೆಗೆ ಒಳಗಾದ ಸುನಯನ ಮಾನಸಿಕವಾಗಿ ಆತಂಕದ ಕ್ಷಣಗಳನ್ನು ಎದುರಿಸುತ್ತಲೇ ಕೌಟುಂಬಿಕ ಸಾಮಾಜಿಕ ಅಪರಾಧಿ ಪ್ರಜ್ಞೆಯಿಂದ ನರಳುತ್ತಾಳೆ. ವಿವಾಹಕ್ಕೆ ಮೊದಲೇ ಹುಟ್ಟಿದ ಮಗುವನ್ನು ತನ್ನದೆಂದು ಹೇಳಿಕೊಳ್ಳಲು ಆಗದೆ ಆ ಮಗುವನ್ನು ಅನಾಥಾಶ್ರಮಕ್ಕೆ ಸೇರಿಸುತ್ತಾಳೆ. ಇದೇ ಕಾರಣಕ್ಕಾಗಿ ತನ್ನ ಕುಟುಂಬದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕೊನೆಗೆ ವಸಂತಕುಮಾರ ತನಗೆ ಮಕ್ಕಳಾಗಲಿಲ್ಲವೆಂಬ ಕಾರಣಕ್ಕೆ ಸುನಯನಳ ಬದುಕಿನ ಸಂದರ್ಭಗಳನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುವುದನ್ನು ಕಾಣುತ್ತೇವೆ. ವಸಂತನಿಂದ ತನಗಾದ ಅನ್ಯಾಯವನ್ನು ಸೇಡು ತೀರಿಸಿಕೊಳ್ಳಲು ಪ್ರಕಾಶನ ಬೆಂಬಲವಾಗಿ ನಿಲ್ಲುವುದರ ಮೂಲಕ ಕಾದಂಬರಿಯ ಪ್ರಗತಿದಾಯಕ ಆಶಯವನ್ನು ಗ್ರಹಿಸಬಹುದು. ಗಂಡು ಹೆಣ್ಣು ವೈರತ್ವಕ್ಕಿಂತ ಪರಸ್ಪರ ಅರ್ಥೈಸಿಕೊಂಡು ಹೊಂದಾಣಿಕೆ ಮಾಡಿಕೊಂಡಿದ್ದಾದರೆ ಸಾಮಾಜಿಕ ಸ್ವಾಸ್ಥ್ಯ ಸಾಧ್ಯ ಎಂದು ತಿಳಿಯುತ್ತದೆ. ಅನಗತ್ಯವಾಗಿ ಪುರುಷರ ದ್ವೇಷ ಮಾಡುವ ಸಮಾನತೆಯನ್ನು ಪ್ರಧಾನವಾಗಿಸಿಕೊಂಡು ಸಾಮಾಜಿಕ ಸಮತೋಲನವನ್ನು ಅಳಿಸಿಹಾಕುವ ಆಸಕ್ತಿಗಿಂತ ಅಸಮಾನತೆ, ಶೋಷಣೆ ವಂಚನೆಗಳಿಗೆ ಬಲಿಯಾಗದಂತೆ ಎಚ್ಚರಗೊಳ್ಳಬೇಕಾಗುತ್ತದೆಂದು ಹೇಳುತ್ತಾರೆ.

ವಸಂತನಂತಹ ಅವಕಾಶವಾದಿ ವಂಚತನದ ಗಂಡಸು ಕೇವಲ ಸಾಂತ್ವನದ ತೋರಿಕೆಯ ಮಾತುಗಳ ಮೂಲಕ ಜಾರಿಕೊಳ್ಳುವ ರಾಜೀವನಂಥ ಗಂಡಸರ ನಡುವೆಯೇ ವಸ್ತುಸ್ಥಿತಿಯನ್ನು ಅರ್ಥಮಾಡಿಕೊಂಡು ಒಂದು ಹಂತಕ್ಕಾದರೂ ಸುನಯನಳಿಗೆ ಒತ್ತಾಸೆಯಾಗಿ ನಿಲ್ಲುವ ಪ್ರಕಾಶನಂಥ ಗಂಡಸರು ಇದೇ ವ್ಯವಸ್ಥೆಯಲ್ಲಿ ಇದ್ದಾರೆ ಎಂಬುದನ್ನು ಗಮನಿಸಬಹುದು. ವ್ಯವಸ್ಥೆಯ ನಿರ್ಬಂಧಗಳು ಹೆಣ್ಣಿನ ಇಚ್ಛೆಯನ್ನು ಹೇಗೆ ಬಂಧಿಸಿವೆ ಎಂಬುದನ್ನು ಕಾದಂಬರಿಯಲ್ಲಿ ಕಾಣಬಹುದು. ಹೆಣ್ಣನ್ನು ಕೇಂದ್ರಬಿಂದು ಮಾಡಿಕೊಂಡು ಅವಳ ಆಸೆ ಆಕಾಂಕ್ಷೆ, ಶಕ್ತಿ, ಸಾಮರ್ಥ್ಯ, ಮಾತೃ ವಾತ್ಸಲ್ಯಗಳನ್ನು ತೆರೆದು ತೋರಿಸಿದ್ದಾರೆ. ಹೀಗೆ ಸಮಾಜದಲ್ಲಿರುವ ವಾಸ್ತವ ಅಂಶಗಳನ್ನು ಇಟ್ಟಕೊಂಡು ತಮ್ಮ ಕಥೆ, ಕಾದಂಬರಿಗಳನ್ನು ಬರೆಯುವುದರ ಮೂಲಕ ಸಮಾಜವನ್ನು ಪ್ರಗತಿಯ ಕಡೆಗೆ ತೆಗೆದುಕೊಂಡು ಹೋಗುವುದನ್ನು ಕಾಣಬಹುದು.

ಮುಸ್ಲಿಂ ಸಮುದಾಯದಲ್ಲಿ ತಲಾಖ್ ಹೇಗೆ ಅಲ್ಲಿಯ ಮಹಿಳೆಯರಿಗೆ ಶಾಪವಾಗಿದೆಯೋ ಹಾಗೆ ಹಿಂದೂ ಮಹಿಳೆಯರಿಗೆ ವರದಕ್ಷಿಣೆ ಪೆಡಂಭೂತವಾಗಿ ಕಾಡಿ ಅವರ ಬದುಕನ್ನೇ ಬಲಿತೆಗೆದುಕೊಳ್ಳುವುದನ್ನು ನೋಡುತ್ತೇವೆ. "ಕದನ ವಿರಾಮ" ಕಾದಂಬರಿ ಇದು ಒಂದು ವರದಕ್ಷಿಣೆಯಿಂದ ಮಹಿಳೆಯನ್ನು ಹೇಗೆ ಶೋಷಣೆ ಮಾಡುತ್ತದೆ ಎಂಬುದನ್ನು ಸಾರಾ ಅವರು ಈ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಕಾದಂಬರಿಯ ನಾಯಕಿ ನಿರ್ಮಲ ಚಿಕ್ಕಂದಿನಿಂದಲೇ ತುಂಬಾ ಹಟವಾದಿ ತನಗೆ ಏನು ಬೇಕು ಎಂದರೂ ಇವಳ ತಂದೆ ತಂದು ಕೊಡುತ್ತಿದ್ದರು. ಒಂದು ಪೆಟ್ಟನ್ನೂ ಸಹ ಕೊಡದೇ ಮುದ್ದಿನಿಂದ ಬೆಳೆಸಿದವರು. ಇವಳು ದೊಡ್ಡವಳಾಗಿ

ಎಸ್.ಎಸ್.ಎಲ್.ಸಿ. ಶಿಕ್ಷಣವನ್ನು ತಮ್ಮ ಊರಿನಲ್ಲಿ ಮುಗಿಸಿದ ನಂತರ ಪಿ.ಯು.ಸಿ.ಯನ್ನು ಬೇರೆ ಊರಿನಲ್ಲಿ ಓದಬೇಕಾದ ಕಾರಣದಿಂದ ಓದಿಗೆ ತಿಲಾಂಜಲಿ ಹೇಳಿ ಮನೆಯಲ್ಲಿ ಕುಳಿತವಳು, ಇವಳ ತಂದೆಯೂ ಕೂಡ ಮಗಳ ಮಾತಿಗೆ ಸಮ್ಮತಿಸುತ್ತಾರೆ. ಇವಳ ತಂದೆ ನಿರ್ಮಲಗೆ ಒಂದು ಶ್ರೀಮಂತರ ಹುಡುಗನನ್ನು ತಂದು ಮದುವೆ ಮಾಡಿದರಾಯಿತು. ತಮ್ಮ ಮಗಳು ಅಷ್ಟು ದೂರ ಹೋಗಿ ಕಾಲೇಜಿಗೆ ಹೋಗಿ ಬರುವುದು ಬೇಡ. ನನ್ನ ಮಗಳು ದುಡಿದು ಯಾರನ್ನು ಸಾಕಬೇಕಾಗಿದೆ. ಇವಳ ವಿವಾಹವಾಗುವ ಹುಡುಗನೆ ದುಡಿದು ಇವಳನ್ನು ರಾಣಿಯಾಗಿ ನೋಡಿಕೊಳ್ಳುತ್ತಾನೆ ಎಂದು ಇವರು ಕೂಡ ತಮ್ಮ ಮಗಳಿಗೆ ಮುಂದೆ ಓದು ಎಂದು ಹೆಚ್ಚು ಒತ್ತಾಯವನ್ನು ಮಾಡಲಿಲ್ಲ. ಆದರೆ ಮುಂದೆ ನಿರ್ಮಲನಿಗೆ ಒಂದೆರಡು ಮದುವೆಗಳು ನಿಶ್ಚಯವಾಗಿ ಮದುವೆ ಹತ್ತಿರ ಬಂದಾಗ ಮುರಿದು ಬೀಳುತ್ತವೆ. ಇದರಿಂದ ಬೇಸತ್ತ ನಿರ್ಮಲ, ಸಂಜನ ಜೊತೆ ತನ್ನ ಮನೆಯವರು ಮದುವೆ ನಿಶ್ಚಯ ಮಾಡಿ ಕೊನೆಗೆ ಅವಳ ಕೆಲಸದ ಬಗ್ಗೆ ಸುಳ್ಳು ಹೇಳಿರುವನೆಂದು ತಿಳಿದು ನಿರ್ಮಲ ತಂದೆ ತನ್ನ ಮಗಳಿಗೆ ಈ ವಿಷಯವನ್ನು ಹೇಳದೆ ಮದುವೆಯನ್ನು ಮುರಿದು ಬಿಡುತ್ತಾರೆ. ಆದರೆ ನಿರ್ಮಲಳಿಗೆ ಇವಳ ತಂದೆ ಈ ವಿಷಯವನ್ನು ಹೇಳದೆ ಅವರು ಸರಿ ಇಲ್ಲ ಎಂದು ಹೇಳುತ್ತಾರೆ. ಆದರೆ ಇದನ್ನು ನಂಬದ ನಿರ್ಮಲ ಸಂಜಯನೊಂದಿಗೆ ಓಡಿ ಹೋಗಿ ವಿವಾಹವಾಗುತ್ತಾಳೆ.

ತಂದೆಯ ಮನೆಯಲ್ಲಿ ನಿರ್ಮಲ ಮಹಾರಾಣಿಯಂತೆ ಎಲ್ಲ ಕೆಲಸಕ್ಕೂ ನಿರ್ಮಲಳ ಅನುಮತಿ ಪಡೆದು ಮನೆಯವರಿಗೆಲ್ಲ ನಿರ್ಮಲಳೆ ಬಟ್ಟೆಯನ್ನು ತಾನೇ ಆರಿಸಬೇಕು. ಆದರೆ ನಿರ್ಮಲ ತನ್ನ ಬದುಕಿನ ವಿಷಯ ಬಂದಾಗ ತಪ್ಪು ಆಯ್ಕೆಯನ್ನು ಮಾಡಿಕೊಂಡು ತನ್ನ ಬದುಕನ್ನೇ ಬಲಿಕೊಡುತ್ತಾಳೆ. ನಿರ್ಮಲ ತನ್ನ ಮನೆಯವರೆ ಸಂಜಯನೊಂದಿಗಿನ ವಿವಾಹವನ್ನು ಒಪ್ಪಿಕೊಂಡರು. ಸಂಜಯನ ಮನೆಯವರಿಗೆ ತಮ್ಮ ಸೊಸೆ ತಾವು ಕೇಳಿದಷ್ಟು ಹಣ ತರಲಿಲ್ಲವೆಂದು ಇವಳನ್ನು ಮನೆ ಮತ್ತು ಮನಸ್ಸಿನಿಂದಲೂ ದೂರ ಇರಿಸುತ್ತಾರೆ. ಇವಳು ಅವರ ಮನೆಗೆ ಹೋಗಿ ಅತ್ತೆ ಮಾವ ನಾದಿನಿಯರ ಜೊತೆ ಹೊಂದಿಕೊಂಡು ಬಾಳಬೇಕೆಂದು ತನ್ನ ಸಂಸಾರದ ಬಗ್ಗೆ ಕನಸು ಕಾಣುತ್ತಾಳೆ. ಆದರೆ ಅತ್ತೆಯ ಮನೆಯವರು ತಮ್ಮ ಮಗಳ ಮದುವೆಗೂ ಕೂಡ ನಿರ್ಮಲಳನ್ನು ಆಹ್ವಾನಿಸುವುದಿಲ್ಲ. ಇದರಿಂದ ಮಾನಸಿಕ ಹಿಂಸೆಗೆ ಒಳಗಾಗಿ ತನ್ನ ಗಂಡನು ಕೆಲಸ ಮಾಡುವಲ್ಲಿಗೆ ಹೋಗಬೇಕೆಂದು ನಿರ್ಧಾರಕ್ಕೆ ಬರುತ್ತಾಳೆ. ಸಂಜಯ ಎಷ್ಟು ಬೇಡವೆಂದರೂ ಕೊನೆಗೆ ನಿರ್ಮಲಳ ಹಠದಿಂದ ತನ್ನ ಜೊತೆಗೆ ಕರೆದುಕೊಡು ಹೋಗಲು ಒಪ್ಪುತ್ತಾನೆ. ಆದರೆ ನಿರ್ಮಲಳಿಗೆ ಅಲ್ಲಿಗೆ ಹೋದ ಮೇಲೆ ತನ್ನ ಗಂಡನ ನಿಜವಾದ ಬಣ್ಣವನ್ನು ತಿಳಿದು ಆಘಾತವಾಗುತ್ತದೆ. ಆದರೂ ಆ ಪರಿಸರಕ್ಕೆ ಒಗ್ಗಿ ತನ್ನ ಜೀವನವನ್ನು ಸಾಗಿಸುತ್ತಾಳೆ. ಹೀಗೆ ಸುಳ್ಳು ಮಾಹಿತಿಯನ್ನು ನೀಡಿ ತನ್ನೆಡೆಗೆ ಸೆಳೆದುಕೊಂಡ ಸಂಜಯ ಕ್ರಮೇಣ ನಿರ್ಮಲಳ ಮೂಲಕ ಮಾವನ ಹಣವನ್ನು ತನ್ನ ಸಂಸಾರಕ್ಕೆ ಒದಗುವಂತೆ ಮಾಡುವ ಚಾಣಾಕ್ಷತನ ತೋರುತ್ತಾನೆ. ತನ್ನ ಹೆತ್ತವರನ್ನೇ ತೊರೆದು ನಂಬಿದವನ ಹಿಂದೆ ಓಡಿ ಬಂದ ನಿರ್ಮಲಳಿಗೆ ದಿನ ಕಳೆದಂತೆ ಅವನ ಕುತಂತ್ರ ಅರ್ಥವಾಗಿ ಅವಳ ನಂಬಿಕೆ ಭಗ್ನವಾಗುತ್ತದೆ. ಅವಕಾಶ ಸಿಕ್ಕಾಗಲೆಲ್ಲಾ ಆವನನ್ನು ನಿಂದಿಸುತ್ತಾ ನಿರ್ಮಳಲ ಮೇಲೆ ಒತ್ತಡ ಹೇರುವ ತಂತ್ರವನ್ನು ಅನುಸರಿಸುತ್ತಾನೆ. ಅವಳ ಆತ್ಮಗೌರವಕ್ಕೆ ಧಕ್ಕೆಯಾಗುವ

ಮಾತುಗಳನ್ನಾಡುವ ಮೂಲಕ ಮಾನಸಿಕ ಹಿಂಸೆಗೆ ಗುರಿ ಪಡಿಸುತ್ತಾನೆ. ಇಂತಹ ಒತ್ತಡಗಳಿಂದ ದಾಂಪತ್ಯದ ನಂಬಿಕೆಯಲ್ಲಿ ಬಿರುಕು ಉಂಟಾಗಿ ಅವರಿಬ್ಬರ ನಡುವೆ ಉಂಟಾಗುವ ನಿರ್ಮಲಳ ಸಾವಿಗೆ ವಿರಾಮಗೊಳ್ಳುತ್ತದೆ.

"ಸುಳಿ" ಕಾದಂಬರಿಯು ಒಂದು ಸಾಮಾಜಿಕ ಕಾದಂಬರಿಯಾಗಿದೆ. ಮುಸ್ಲಿಂ ಸಮಾಜದಲ್ಲಿ ಲಿಂಗತಾರತಮ್ಯ, ವರ್ಗ ತಾರತಮ್ಯ, ಎಂತಹ ಸಮಸ್ಯೆಗಳನ್ನೂ ಹುಟ್ಟುಹಾಕುತ್ತದೆ ಎಂಬುದನ್ನು ತಿಳಿಸುತ್ತಾರೆ. ಅಷ್ಟೇ ಅಲ್ಲದೆ ಯುವ ಜನಾಂಗವನ್ನು ಶ್ರೀಮಂತರು, ಯುವಕರ ಬಡತನ, ನಿರುದ್ಯೋಗ ಅಸಹಾಯಕತೆಗಳನ್ನು ಬಳಸಿಕೊಂಡು ಊರಿನ ಯುವಕರನ್ನು ಕಾನೂನು ಬಾಹಿರ ಕೆಲಸಗಳಿಗೆ ತೊಡಗಿಸಿ ಅವರಲ್ಲಿನ ಸ್ವಾಭಿಮಾನ, ಗೌರವವನ್ನು ಬಲಿಕೊಡುವುದನ್ನು ನೋಡುತ್ತೇವೆ. ಆದರೆ ಮುಗ್ಧ ಯುವಕರ ಶ್ರೀಮಂತರ ಕಪಟವನ್ನು ಅರಿಯದೇ ಅದರಲ್ಲಿ ಉತ್ಸಾಹದಿಂದ ಮುನ್ನುಗ್ಗಿ ಹಿಂದಿರುಗಿ ಬಾರದಷ್ಟು ದೂರ ಹೋಗಿ ಆ ಸುಳಿಯಲ್ಲಿ ಸಿಕ್ಕಿ ನರಳುವುದನ್ನು ಸಾರಾ ಅವರು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಈ ಕಾದಂಬರಿಯಲ್ಲಿ ಬರುವ ಹಲವಾರು ಸ್ತ್ರೀ ಪಾತ್ರಗಳು ಒಂದಲ್ಲ ಒಂದು ರೀತಿಯಲ್ಲಿ ಪುರುಷರ ದೌರ್ಜನ್ಯಕ್ಕೆ ಒಳಗಾದವರೆ. ಮಮ್ಮುಟಿಯ ಪತ್ನಿಯರಾದ ರುಖ್ಯಾಬಿ ಮತ್ತು ಫರೀದಾ ಅಸಹಾಯಕರಾಗಿ ಮಮ್ಮುಟಿಯೊಡನೆ ಹೊಂದಿಕೊಂಡು ಬಾಳುತ್ತಾರೆ. ಆದರೆ ಶ್ರೀಧರನ ಹೆಂಡತಿ ಕುಸುಮ ತನ್ನ ಮೇಲಿನ ಅತ್ಯಾಚಾರವನ್ನು ಪ್ರತಿಭಟಿಸಲು ಹೋಗಿ ಹುಚ್ಚಿ ಪಟ್ಟವನ್ನು ಕಟ್ಟಿಕೊಳ್ಳುತ್ತಾಳೆ. ಮರಿಯಮ್ಮ ಅತ್ತೆ, ಮಾವನ, ಇವಳು ತಮ್ಮ ಅಂತಸ್ತಿಗೆ ಸರಿಸಮಾನಳು ಅಲ್ಲವೆಂಬ ಕಾರಣ ಒಡ್ಡಿ ಇವಳನ್ನು ತಮ್ಮ ಮಗಳು ಇಲ್ಲದ ವೇಳೆಯನ್ನು ನೋಡಿಕೊಂಡು ಚುಚ್ಚು ಮಾತುಗಳಿಂದ ಮರಿಯಮ್ಮನನ್ನು ಮಾನಸಿಕ ಹಿಂಸೆಗೆ ಗುರಿಮಾಡುತ್ತಾರೆ. ಅವಳ ಮೇಲೆ ಅತ್ತೆ ಅತ್ಯಾಚಾರದ ಆರೋಪ ಹೊರಿಸಿ ಮನೆಯಿಂದ ಹೊರಹಾಕುತ್ತಾಳೆ. ನಂತರ ಮರಿಯಮ್ಮನ ಗಂಡನೂ ಕೂಡ ತಾಯಿ, ತಂದೆಯ ಮಾತನ್ನು ನಂಬಿ ಇವಳನ್ನು ನಡು ನೀರಿನಲ್ಲಿ ಬಿಟ್ಟು ಬಿಡುತ್ತಾನೆ. ಹೀಗೆ ಮರಿಯಮ್ಮ, ಕುಸುಮ ಒಂದು ರೀತಿಯಲ್ಲಿ ಶೋಷಿತರಾದರೆ, ಹಾಜಿರ ಶ್ರೀಮಂತಿಕೆಯ ಆಸೆಗೆ ಬಿದ್ದು, ತಿಳುವಳಿಕೆ ಹೊಂದಿದ್ದ ಗಂಡನಿಂದ ತಲಾಖ್ ಪಡೆದು ಬೇರೊಬ್ಬನನ್ನು ವಿವಾಹವಾಗಿ ಅತ್ತೆ, ಗಂಡನಿಂದ ಹಿಂಸೆಗೆ ಗುರಿಯಾಗುತ್ತಾಳೆ. ಆದರೆ ಮತ್ತೊಂದು ರೀತಿಯಲ್ಲಿ ಜೋಹಾರಾಳ ಮನೆಗೆಲಸ ಮಾಡುತ್ತಿದ್ದ ಜುಲೇಕ ತನ್ನ ಅಡುಗೆ ಕೆಲಸ ಮಾಡುತ್ತಿದ್ದ ಮನೆಯ ಯಜಮಾನ ಜೋಹರಾಳ ಗಂಡನ ಕಾಮಕ್ಕೆ ಬಲಿಯಾಗಿ ಗರ್ಭಿಣಿಯಾದಾಗ ಮನೆಯ ಮರ್ಯಾದೆ ಹೋಗುತ್ತದೆ ಎಂದು ತಿಳಿದು ಇದನ್ನು ಮುಮ್ಮಟಿಯ ತಲೆಗೆ ಕಟ್ಟಲು ಹೋಗಿ ಅವಮಾನಕ್ಕೆ ಒಳಗಾಗುವ ಅಮೀನಮ್ಮ ಹೀಗೆ ಗಂಡಸರು ಮಾಡಿದ ತಪ್ಪಿಗೆ ತಮ್ಮ ಆಶ್ರಿತ ಅಸಹಾಯಕ ಹೆಣ್ಣುಮಗಳಿಗೆ ಮೋಸ ಮಾಡುವುದಲ್ಲದೆ ತಮ್ಮ ಹೆಂಡತಿಯರಿಗೂ ಮೋಸ ಮಾಡುವುದನ್ನು ಕಾಣುತ್ತೇವೆ.

ಮುಸ್ಲಿಂ ಸಮುದಾಯದಲ್ಲಿ ಕೂಡ ಕುಟುಂಬದಲ್ಲಿದ್ದ ಮಹಿಳೆಯ ತಾಯಿ, ತಂಗಿ, ಹೆಂಡತಿ ಹೀಗೆ ಹಲವು ಪಾತ್ರಗಳನ್ನು ನಿರ್ವಹಿಸಿ ಇದರಿಂದ ಪುರುಷರ ದೌರ್ಜನ್ಯಕ್ಕೆ ಒಳಗಾಗುವುದನ್ನು ನೋಡುತ್ತೇವೆ.

'ಧ್ವನಿ ಇಲ್ಲದ ನೋವುಗಳು' ಕತೆಯ ಜರೀನಾಳ ಅಣ್ಣ ಒಬ್ಬ ಮೌಲ್ವಿಯೇ ಆದರೂ ಕೂಡ ತನ್ನ ತಂಗಿಯ ಬಾಳನ್ನು ಮುರಿದು ಬೀಳದಂತೆ ನೋಡಿಕೊಳ್ಳುವುದು ಸಾಧ್ಯವಾಗದ ಅಸಹಾಯಕ ಸ್ಥಿತಿ. ತನ್ನ ತಂಗಿಯನ್ನೇ ಪುರುಷರ ಶೋಷಣೆಯಿಂದ ಬಚಾವ್ ಮಾಡಲು ಸಾಧ್ಯವಾಗುವುದಿಲ್ಲ. ಹೀಗೆ ಮುಸ್ಲಿಂ ಪುರುಷರು ಧಾರ್ಮಿಕ ನಿಯಮಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ತಲಾಖ್‌ನ್ನು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಮಾಡಿಕೊಂಡು ಮಹಿಳೆಯರಿಗೆ ಶೋಷಣೆ ಮಾಡುವುದನ್ನು ನೋಡುತ್ತೇವೆ. ಹಾಗೆ ಕೆಲವರು ಕೊಲ್ಲಿರಾಷ್ಟ್ರಕ್ಕೆ ಹೋಗಿ ತಮ್ಮ ಆಲೋಚನಾ ಶಕ್ತಿ ವೃದ್ಧಿಸಿಕೊಂಡು ತಮ್ಮ ಸಮಾಜದ ಹೆಣ್ಣು ಮಕ್ಕಳು ಕೂಡ ಒಂದು ಜೀವಿ ಎಂದು ಪರಿಗಣಿಸಿ ಮಹಿಳೆಯರಿಗೂ ಸಮಾನತೆಯನ್ನು ನೀಡಿರುವುದನ್ನು ಸಾರಾ ಅವರು ತಮ್ಮ ಹಲವಾರು ಕತೆಗಳಲ್ಲಿ ನಿರೂಪಿಸಿದ್ದಾರೆ. 'ಹಳೇ ಬೇರು ಹೊಸ ಚಿಗುರು' ಮತ್ತು 'ಚಪ್ಪಲಿಗಳು' ಕತೆಯಲ್ಲಿ ಆಧುನಿಕ ಪರಿಸರಕ್ಕೆ ಹೊಂದಿಕೊಂಡಿರುವ ಕುಟುಂಬಗಳನ್ನು ನೋಡಬಹುದು. 'ಹಳೇ ಬೇರು ಹೊಸ ಚಿಗುರು' ಕತೆಯ ಹೆಸರೇ ಸೂಚಿಸುವಂತೆ ಇಲ್ಲಿ ತಲೆಮಾರುಗಳನ್ನು ನೋಡುತ್ತೇವೆ. ಹಳೇ ಬೇರೆ ಹಳೇ ಸಂಪ್ರದಾಯದ ಮೌಢ್ಯತೆಗೆ ಸಿಕ್ಕಿ ಹೊರ ಬರಲಾರದಂತಹ ಸ್ಥಿತಿ, ಹೊಸ ಚಿಗುರು ಹಳೆ ಸಂಪ್ರದಾಯವನ್ನು ಕಿತ್ತೊಗೆದು ಹೊಸ ಸಂಪ್ರದಾಯಕ್ಕೆ ಹೊಂದಿಕೊಂಡು ಬಾಳುವುದು. ಈ ಕತೆಯಲ್ಲಿ ಯೂಸಫರ್ ಮಗ ಹುಸೈನ್ ಬೊಂಬಾಯಿಯಲ್ಲಿ ವಾಸ್ತವ್ಯ ಹೂಡಿ ಅಲ್ಲಿನ ಪರಿಸರಕ್ಕೆ ತಕ್ಕಂತೆ ಜೀವನ ನಡೆಸುತ್ತಿರುತ್ತಾನೆ. ಹುಸೈನರ ಮಗಳು ನೂರುನ್ನಿಸಾ ದೂರದರ್ಶನದಲ್ಲಿ ಅಭಿನಯಿಸುತ್ತಿರುವ ಸುದ್ದಿ ತಿಳಿದು ಯೂಸಫರು ಮತ್ತು ಮೆಹರುನ್ನಿಸಾಳ ತಂದೆ ಮೈದೀನ ಹಾಜಿಯವರು ಇಬ್ಬರು ಒಬ್ಬರ ಮೇಲೆ ಒಬ್ಬರು.ಗೂಬೆ ಕೂರಿಸಿಕೊಂಡು ಯೂಸಫರ ಈ ವಿಷಯ ನಿಜವೇ, ಸುಳ್ಳೇ ಎಂದು ತಿಳಿಯಲು ಮಗನ ಮನೆಗೆ ಬೊಂಬಾಯಿಗೆ ಹೋಗುತ್ತಾರೆ. ಮುಸ್ಲಿಂ ಸಂಪ್ರದಾಯದ ಪ್ರಕಾರ, ಮುಸ್ಲಿಂ ಮಹಿಳೆಯರು ಪರ್ಧಾಧರಿಸದೇ, ಅನ್ಯ ಪುರುಷರಿಗೆ ತಮ್ಮ ಮುಖ ದರ್ಶನ ನೀಡದೆ ಕೋಣೆಯ ಒಳಗೆ ಇರುವಂತಹ ಸ್ಥಿತಿಯಲ್ಲಿ ತಮ್ಮ ಮೊಮ್ಮಗಳು ನೂರಿ ದೂರದರ್ಶನದಲ್ಲಿ ಕಾಣಿಸಿಕೊಳ್ಳುವುದು ಯೂಸಫರಿಗೆ ಆಘಾತವಾದ ವಿಷಯವಾಗುತ್ತದೆ. ಹಾಗೆ ತಮ್ಮ ಸೊಸೆ ಹಳ್ಳಿಯಲ್ಲಿ ಬುರ್ಕಾ ಹಾಕಿಕೊಂಡು ಅಲ್ಲಿ ಸಂಪ್ರದಾಯಕ್ಕೆ ತಕ್ಕಂತೆ ಇರುತ್ತಿದ್ದವಳು. ಸೊಸೆ ಈಗ ನಗರ ಜೀವನಕ್ಕೆ ಹೊಂದಿಕೊಂಡು ಅಲ್ಲಿಯ ಆಧುನಿಕಕ್ಕೆ ತಕ್ಕಂತೆ, ಶೃಂಗರಿಸಿಕೊಂಡು ಒಳ-ಹೊರಗೆ ಓಡಾಡುತ್ತಿದ್ದಾಳೆ. ಹಾಗೂ ಆಕೆ ಹೆಣ್ಣು ಮಕ್ಕಳನ್ನು ಅಲಂಕಾರ ಮಾಡುವ ಅಂಗಡಿಯನ್ನು ತೆರೆದಿರುವುದು ಅವರಿಗೆ ಮತ್ತೊಂದು ಆಘಾತವಾಗುತ್ತದೆ. ಅಲ್ಲದೆ ತಮ್ಮ ಮೊಮ್ಮಗಳು ತನ್ನ ವರನನ್ನು ತಾನೇ ಆರಿಸಿಕೊಳ್ಳುತ್ತಾಳೆ ಎಂಬ ಮಗನ ಮಾತಿನಿಂದ ಯೂಸಫರು ಕಂಗಾಲಾಗುತ್ತಾರೆ. ಹೀಗೆ ತಮ್ಮ ಮೊಮ್ಮಗಳನ್ನು ಸಂಪ್ರದಾಯವನ್ನು ಮೀರಿ ಹೋಗುತ್ತಿರುವುದಕ್ಕೆ ತಂದೆ ತಾಯಿ ಪ್ರೋತ್ಸಾಹ ನೀಡಿರುವುದು ತಿಳಿದು ಆಘಾತವಾಗುತ್ತದೆ. ಹುಸೇನ ಮತ್ತು ಆತನ ಕುಟುಂಬದವರು ತೋರುವ ಜಾತ್ಯಾತೀತ ಧೋರಣೆ, ವಿದ್ಯೆಗೆ ಕೊಡುವ ಪ್ರಾಮುಖ್ಯತೆ ಹಾಗೂ ಹೆಣ್ಣು ಗಂಡು ಪರಸ್ಪರ ಮೆಚ್ಚಿ ವಿವಾಹವಾಗುವುದರ ಬಗ್ಗೆ ಮುಕ್ತ ಒಲವು ತೋರುವುದು ಕತೆಯಲ್ಲಿ ಕಾಣಬಹುದು.

"ಚಪ್ಪಲಿ" ಕತೆಯಲ್ಲಿ "ಅರಬ ರಾಷ್ಟ್ರಗಳಿಗೆ ದುಡಿಯಲು ಹೋಗಿ ಅಲ್ಲಿಂದ ದುಡ್ಡು ಬಳಿದುಕೊಂಡು ಬರುತ್ತಾರೆ. ಹೊರಗಿನ ಪ್ರಪಂಚ ಕಂಡ ಹೊಸ ತಲೆಮಾರಿನ ಯುವಕ ಚಿಂತನೆಗಳಿಗೂ, ಹಳೆಯ ಧಾರ್ಮಿಕ ಚೌಕಟ್ಟಿನಲ್ಲಿಯೇ ಮೌಢ್ಯತೆಯ ಹರಿಕಾರರಾದ ಹಳೆಯ ತಲೆಮಾರಿನ ಹಿರಿಯರಿಗೂ ಘರ್ಷಣೆ ನಡೆಯುತ್ತದೆ."[೫] ಈ ಕತೆಯಲ್ಲಿ ಬರುವ ಹಸನ ಬ್ಯಾರಿ ಕಟ್ಟಾ ಮುಸ್ಲಿಂ ಸಂಪ್ರದಾಯವಾದಿ. ಈತನು ಮಹಿಳೆಯ ಬಗ್ಗೆ ಒಂದು ರೀತಿಯ ತಿರಸ್ಕಾರ, ಮಹಿಳೆಯ ಬಗ್ಗೆ ಗೌರವವನ್ನು ಹೊಂದಿರದೆ, ಹೆಂಗಸರನ್ನು ಕಾಲಿನ ಚಪ್ಪಲಿಯಾಗಿ ಬಳಸಿ ಬೇಡವಾದ ಮೂಲೆಗೆ ಬಿಡಬೇಕು ಎಂಬ ಧೋರಣೆಯನ್ನು ಹೊಂದಿರುವುದನ್ನು ಆದರೆ ಈತನ ಅಳಿಯ ಹೊಸ ಚಿಂತನೆಗಳನ್ನು ಬೆಳೆಸಿಕೊಂಡವನನ್ನು ಮಹಿಳೆಯರ ಬಗ್ಗೆ ಪ್ರೀತಿ ಗೌರವವನ್ನು ಇಟ್ಟುಕೊಂಡಿರುವಾತ. ಇಂತಹ ಪರಿಸರದಲ್ಲಿ ಸಮೀರ ಮಾನಸಿಕ ರೋಗಿಯಾಗುತ್ತಾಳೆ. ಇವಳ ನಡುವಳಿಕೆ ಬಿಡಿಸದ ಒಗಟಾದಾಗ ತಂದೆ ತಾಯಿ ಧರ್ಮದ ಮೂಢನಂಬಿಕೆಗೆ ಮೊರೆ ಹೋಗಿ ಅವಳ ಮನಸ್ಸಿನ ಮೇಲೆ ಮತ್ತಷ್ಟು ಗಾಯವನ್ನು ಮಾಡುತ್ತಾರೆ. ಆದರೆ ಸಮೀರಳ ಗಂಡ ಅವಳ ಕಾಯಿಲೆ ಬಗ್ಗೆ ತಿಳಿದುಕೊಂಡು ಒಬ್ಬ ಒಳ್ಳೆಯ ಮನಶಾಸ್ತ್ರಜ್ಞನ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಾನೆ. ಹೀಗೆ ಮುಸ್ಲಿಂ ಪುರುಷರು ಬದಲಾವಣೆಯಾಗುತ್ತಿರುವುದನ್ನು ಸಾರಾ ಅವರು ತಮ್ಮ ಕತೆ, ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ವಂಶಸ್ಥ ಮನೆಯಲ್ಲಿ ಇದ್ದರು, ಅವಳ ಪರದೇಯ ಹಿಂದೆ ಕೂಡಿ ಹಾಕಿ ಅವಳನ್ನು ಒಂದು ಅಸ್ತಿತ್ವವಿಲ್ಲದ ಒಂದು ಪ್ರಾಣಿ ಎಂದು ತಿಳಿದು, ಇದರಿಂದ ಆ ಸಮಾಜದಲ್ಲಿರುವ ಮಹಿಳೆಯರು ಅನುಭವಿಸುವ ನೋವು -ಯಮಯಾತನೆಯನ್ನು 'ಒಂದಣಿಗೆ' ಕತೆಯಲ್ಲಿ ನೋಡುತ್ತೇವೆ. ಒಂದಣಿಗೆ ಕತೆಯಲ್ಲಿ ಬರುವ ಅಬ್ದುಲ್ ಖಾದರ್, ಯೌವ್ವನದಲ್ಲಿ ಹುಡುಗಿಯರ ಹಿಂದೆ ಬಿದ್ದು ಜೀವನವನ್ನು ಹಾಳು ಮಾಡಿಕೊಂಡವನು. ಆದರೂ ತನ್ನ ದರ್ಪ ಅಹಂಕಾರದಿಂದ ತನ್ನ ಹೆಂಡತಿಗೆ ತನ್ನ ಸ್ನೇಹಿತನ ಮುಂದೆಯೇ ಅವಳನ್ನು ನಿರ್ಧಾಕ್ಷಿಣ್ಯವಾಗಿ ಬೈಯುವುದನ್ನು ಕಾಣುತ್ತೇವೆ. ಇಲ್ಲಿ ಹೆಣ್ಣನ್ನು ಗುಲಾಮರಂತೆ ಬಳಸಿಕೊಳ್ಳುವುದನ್ನು ಕಾಣುತ್ತೇವೆ. ಹೀಗೆ ಅನಕ್ಷರಸ್ಥರ ಹೆಣ್ಣು ಮಕ್ಕಳನ್ನು ಒಂದು ರೀತಿಯಾಗಿ ಶೋಷಣೆ ಮಾಡಿದರೆ ಹಾಗೆ ಮುಸ್ಲಿಂಯೇತರ ಹೆಣ್ಣು ಮಕ್ಕಳಿಗೆ ಸಹಾಯವನ್ನು ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ ಮಹಿಳೆಯರು ಇರುವುದನ್ನು "ಸಾರಾಂಶ" ಕತೆಯಲ್ಲಿ ಕಾಣಬಹುದು. ಈ ಕತೆಯಲ್ಲಿ ಬರುವ ಆಯಿಷಾ ಒಬ್ಬ ಅಧಿಕಾರಿ ಹೆಂಡತಿಯಾಗಿದ್ದಳು. ಯಮುನಾಳಿಗೆ ಸಹಾಯವನ್ನು ಮಾಡುವುದಾಗಿ ಹೇಳಿ ತನ್ನ ಮನೆಯಲ್ಲಿಯೇ ಇಟ್ಟುಕೊಂಡಿರುತ್ತಾಳೆ. ಆದರೆ ಈ ಸಮಾಜದ ಪುರುಷರು ಇದಕ್ಕೆ ಅವಕಾಶವನ್ನು ಮಾಡಿಕೊಡದೆ, ಯಮುನಳನ್ನು ಮನೆಯ ಹೊರಗೆ ಹಾಕುವಂತಹ ಪರಿಸ್ಥಿತಿ ತಂದು ಒಡ್ಡಿ ಆಯಿಷಾಳನ್ನು

---

೫. ಪು.ಸಂ. ೩೧೫, ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ

ಅಸಹಾಯಕಳನ್ನಾಗಿ ಮಾಡುತ್ತಾರೆ. ಹೀಗೆ ಸಮಾಜದ ವಿವಿಧ ಶಕ್ತಿಗಳು ಹೇಗೆ ಪರಿಸರ ಹಾಗೂ ಜನರ ಮನಸ್ಸನ್ನು ಕಲುಷಿತಗೊಳಿಸಿ ಕೋಮುವಾದವನ್ನು ಹುಟ್ಟಿಸಲು ಪ್ರಯತ್ನಿಸುತ್ತದೆ ಎಂಬುದನ್ನು ತಿಳಿಯಬಹುದು.

ಕರಾವಳಿ ಸಂಸ್ಕೃತಿ

ಸಾರಾ ಅವರು ತಮ್ಮ ಕಥನ ಸಾಹಿತ್ಯದಲ್ಲಿ ಕರಾವಳಿ ಸಂಸ್ಕೃತಿಯನ್ನು ತುಂಬಾ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. 'ಚಂದ್ರಗಿರಿ ನದಿ' ಕಿಳಿಯಾರು ಮತ್ತು ಕಾವಳ್ಳಿಯ ನಡುವೆ ಹರಿಯುವ ಈ ನದಿ ಅಲ್ಲಿನ ಜನರ ಬದುಕನ್ನು ನದಿಯ ಸಂಕೇತವಾಗಿ ತೆಗೆದುಕೊಂಡು "ಆ ಜನತೆಯ ಜೀವನ ಪ್ರೀತಿಯ ಪ್ರವಾಹವಾಗಿ ಒಮ್ಮೆ ಹರಿದರೆ, ಮತ್ತೊಮ್ಮೆ ಅಲ್ಲಿನ ಜನತೆಯ ಮೌಢ್ಯತೆಗಳನ್ನು ಅರಗಿಸಿಕೊಳ್ಳಲಾರದೆ, ನಾದಿರಾಳಂತಹ ಮುಗ್ಧೆಯರನ್ನು ಕೊಚ್ಚಿಕೊಂಡು ಹೋಗುತ್ತದೆ"[೬] ಎಂದು ಡಾ.ಬಸವರಾಜ ಸಬರದ ಅವರು ಅಭಿಪ್ರಾಯ ಪಡುತ್ತಾರೆ.

'ಸಹನಾ' ಕಾದಂಬರಿಯಲ್ಲಿ ನಫೀಮಾ ಪ್ರಕೃತಿಯ ಒಡನಾಟದಲ್ಲಿ ಬೆಳೆಯುತ್ತಾಳೆ. ಹತ್ತಿರದ ಗುಡ್ಡಗಾಡುಗಳಿಗೆ ಹೋಗಿ ಗೇರು ಬೀಜ ತರುವುದು, ಮನೆಯ ಹತ್ತಿರವಿರುವ ಮಾವಿನಕಾಯಿಗಳನ್ನು ಕಿತ್ತು ತಿನ್ನುವುದು, ನದಿಗೆ ಇಳಿದು ಚಿಪ್ಪಿನ ಮೀನನ್ನು ತೆಗೆದು ತರುವುದು ಇವಳ ಬಾಲ್ಯದ ಕೆಲಸವಾಗಿತ್ತು. ಹಾಗೆ ಆ ಕರಾವಳಿ ಪ್ರದೇಶದಲ್ಲಿ ಮೀನು ಎಷ್ಟು ಪ್ರಾಮುಖ್ಯತೆ ಪಡೆದಿದೆ ಎಂಬುದನ್ನು ಹಲವಾರು ಕತೆ, ಕಾದಂಬರಿಗಳಲ್ಲಿ ಕಾಣಬಹುದು. 'ಬಿಸಿಲ್ಗುದುರೆ ಬೆನ್ನುಹತ್ತಿ' ಕತೆಯಲ್ಲಿ ಕಜ್ಜಮ್ಮ ತನ್ನ ಮಗಳು ಸಬೀಹಾಗೆ ಹೇಳುವ ಮಾತುಗಳನ್ನು ಗಮನಿಸಬಹುದು. ಹಮೀದ್ ಬರುವಾಗ ಮೀನನ್ನೇನಾದರೂ ತರುತ್ತಾನೆ ಸಾರಿಗೆ ಕಡೆದಿಡು ಎಂದು ಹೇಳುತ್ತಾಳೆ. ಹಾಗೆ ತೆಂಗಿನ ಕಾಯಿ, ಅದರ ನಾರು, ಗರಿಗಳಿಂದ ವಸ್ತುಗಳನ್ನು ಹೆಣೆದು ಮಾರುವುದು. ಭತ್ತ ಕುಟ್ಟುವುದು, ಕರಾವಳಿ ಪ್ರದೇಶದ ಉದ್ಯೋಗವನ್ನು ತಿಳಿಯಬಹುದು.

ಅಲ್ಲದೇ ಈಗಾಗಲೇ ಚರ್ಚಿಸಲ್ಪಟ್ಟ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಭಾಷೆ, ವಿಚಾರಗಳು ಕರಾವಳಿ ಪರಿಸರವನ್ನೇ ವರ್ಣಿಸುತ್ತವೆ.

ಸಾರಾ ಅವರ ಕಥನ ಸಾಹಿತ್ಯದ ಭಾಷೆ ಸರಳ ಮತ್ತು ನೇರ ನಿರೂಪಣೆಯಿಂದ ಕೂಡಿರುವಂತಹದ್ದಾಗಿದೆ. ಮುಸ್ಲಿಂ ಸಮುದಾಯದ ಬದುಕಿನ ನೋವು, ನಲಿವುಗಳನ್ನು ಇಲ್ಲಿ ಕತೆ ಕಾದಂಬರಿಯಾಗಿರುವುದರಿಂದ ಆ ಸಮುದಾಯದ ಭಾಷೆ ಮತ್ತು ಸಂಸ್ಕೃತಿಯನ್ನು ಕಾಣಬಹುದು.

"ಚಂದ್ರಗಿರಿಯ ತೀರದಲ್ಲಿ" ಕಾದಂಬರಿಯಲ್ಲಿ "ನಾದಿರಾಳ ಹೃದಯಾಕಾಶದಲ್ಲಿ ಹುಣ್ಣಿಮೆಯ ಚಂದ್ರನು ಮೂಡತೊಡಗಿದನು. ನದೀ ತೀರಕ್ಕೆ ಹೋಗಿ ತನ್ನ ಪ್ರೀತಿಯ ಬಂಡೆಯ ಮೇಲೆ ಕುಳಿತು ನದಿಯಲ್ಲಿ

---

೬. ಪು.ಸಂ. ೮೮, ಸಾಹಿತ್ಯ ಸಂಗತಿ, ಡಾ.ಬಸವರಾಜ ಸಬರದ

ಕಾಲನ್ನು ಇಳಿಬಿಟ್ಟಳು. ಸಪ್ತಮಿಯ ಅರ್ಧಚಂದ್ರನ ಕಿರಣಗಳು ನದಿಯಲ್ಲಿ ಪ್ರತಿಫಲಿಸಿದ್ದವು. ಸುತ್ತಲೂ ಗಂಭೀರವಾದ ಮೌನ ವಾತಾವರಣವಿದ್ದರೂ ನಾದಿರಾಳ ಹೃದಯದಲ್ಲೊಂದು ಕೋಗಿಲೆ ಉಲಿಯತೊಡಗಿತ್ತು. ನವಿಲೊಂದು ಗರಿಗೆದರಿ ನರ್ತಿಸತೊಡಗಿತ್ತು"[೭] ಈ ವ್ಯಾಖ್ಯಾನದ ಮೂಲಕ ಸಾರಾ ಅವರ ಸರಳ ಭಾಷೆಯನ್ನು ಕಾಣಬಹುದು.

ನಾದಿರಾಳಿಗೆ ಮತ್ತೊಂದು ಮದುವೆ ಮಾಡಿಸುವುದಾಗಿ ತಂದೆ ಹೇಳಿದಾಗ ನಾದಿರಾಳ ಮಾತು ಗಮನಿಸಿದ್ದರೆ "ನೀವು ನನಗೆ ಒಂದು ಮದುವೆ ಮಾಡಿಸಿದ್ದು ಸಾಕು ನಿವೇನಾದರೂ ನನಗೆ ಇನ್ನೊಮ್ಮೆ ಮದುವೆ ಮಾಡಲು ಪ್ರಯತ್ನಿಸಿದರೆ ನಾನು ಚಂದ್ರಗಿರಿಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತೇನೆ"[೮] ಎಂದು ಹೇಳುವಲ್ಲಿ ಇಲ್ಲಿಯ ಭಾಷೆಯ ವೇಗಗತಿಯನ್ನು ಕಾಣಬಹುದು.

"ವಜ್ರಗಳು" ಕಾದಂಬರಿಯಲ್ಲಿಯೂ ಕೂಡ ಸಾರಾ ಅವರು ಸರಳವಾದ ಭಾಷೆಯನ್ನು ಬಳಸಿದ್ದಾರೆ. ಯಾವುದೇ ರೀತಿಯ ಕ್ಲಿಷ್ಟತೆಯಾಗಲಿ, ದ್ವಿರುಕ್ತಿಯಾಗಲಿ ಬಳಸಿರುವುದು ಕಾಣುವುದಿಲ್ಲ. ನಫೀಸಾ ಕಪ್ಪಗಿರುವಳೆಂದು ಅವಳನ್ನು ಮದುವೆಯಾದ ಬದ್ರುದ್ದೀನ್ ಕೀಳಾಗಿ ಕಾಣುತ್ತಾನೆ. ಆಗ ಬದ್ರುದೀನ್ "ಸಮನಾಗಿ ಸೀರೆಯುಡಲೂ ರವಿಕೆ ತೊಡಲು ಬಾರದ ಹಳ್ಳಿಯ ಆ ಕಪ್ಪು ಹುಡುಗಿಯನ್ನು ಬೊಂಬಾಯಿಗೆ ಕರೆದೊಯ್ಯಬೇಕೇ"[೯] ಎಂದು ಹೇಳುತ್ತಾನೆ.

'ಚಂದ್ರಗಿರಿಯ ತೀರದಲ್ಲಿ' 'ವಜ್ರಗಳು' ಕಾದಂಬರಿಯಂತೆ 'ಸಹನಾ' ಕಾದಂಬರಿಯಲ್ಲಿಯೂ ಕೂಡ ಸರಳ ಭಾಷೆ ಶೈಲಿಯನ್ನೇ ನೋಡಬಹುದು.

ನಸೀಮಾಳ ತಾಯಿ ಸಕೀನಾ ತನ್ನ ಮಗಳನ್ನು ತವರು ಮನೆಗೆ ಕರೆದುಕೊಂಡು ಹೋಗಲು ಬಂದಾಗ ನಸೀಮಾಳ ಅತ್ತೆ ಹೇಳುವ ಮಾತು "ನೋಡಿ ಈಗ ಪಾಷಾ ಮನೆಯಲ್ಲಿಲ್ಲದಾಗ ನಾನು ಅವಳನ್ನು ಕಳುಹಿಸಿದರೆ ಅವನು ಬಂದು ನನ್ನೊಡನೆ ರೇಗುತ್ತಾನೆ. ಅವನು ಹೋಗಿ ಎರಡು ಮೂರು ದಿನ ಆಯಿತು. ಇವತ್ತು ಬಂದರೂ ಬರಬಹುದು. ನೀವು ಇನ್ನೊಮ್ಮೆ ಅವನು ಮನೆಯಲ್ಲಿರುವಾಗ ಬಂದು ಕರೆದುಕೊಂಡು ಹೋಗಿ ಎನ್ನುವ ಅತ್ತೆ ಮಾತು ಆಕೆಯ ಕಿವಿಯ ಮೇಲೆ ಬಿದ್ದಾಗ, ಹೂವಿನಂತೆ ಅರಳಿದ್ದ ಆಕೆಯ ಹೃದಯ ಸಂತೆಯ ತಾವರೆಯಂತೆ ಮುದುಡಿತು. ಮುಖ ಬಾಡಿತು ಕಣ್ಣಿನ ಕೊನೆಯಲ್ಲಿ ನೀರು ಇಣುಕತೊಡಗಿತು"[೧೦] ಎಂದು ತುಂಬಾ ಸರಳವಾದ ಭಾಷೆಯಲ್ಲಿ ಬರೆದು ಒಮ್ಮೆ ಓದಿದರೆ ಓದಿಸಿಕೊಂಡು ಹೋಗುವ ಕಲೆಯನ್ನು ಕಾಣಬಹುದು.

---

೭. ಪು.ಸಂ. ೪೭, ಚಂದ್ರಗಿರಿಯ ತೀರದಲ್ಲಿ, ಸಾರಾ ಅಬೂಬಕ್ಕರ್.

೮. ಪು.ಸಂ. ೪೧, ,, ,,

೯. ಪು.ಸಂ. ೧೨೦, ವಜ್ರಗಳು, ,,

೧೦. ಪು.ಸಂ. ೪೮, ಸಹನಾ, ,,

ಹೀಗೆ ಸಾರಾ ಅವರು ಯಾವುದೇ ರೀತಿಯಾದ ಕಾವ್ಯಾತ್ಮಕವಾಗಿ, ಬರೆಯದೇ ಸರಳ ಭಾಷೆಯಲ್ಲಿ ತಮ್ಮ ಇಡೀ ಕಥನ ಸಾಹಿತ್ಯವನ್ನು ಬರೆದಿರುವುದನ್ನು ಕಾಣಬಹುದು. ಕಾಸರಗೋಡು ಪರಿಸರದಲ್ಲಿ ಬಳಸುವ ಭಾಷೆಯನ್ನೇ ತಮ್ಮ ಸಾಹಿತ್ಯದಲ್ಲಿ ಬಳಸಿರುವುದನ್ನು ಕಾಣುತ್ತೇವೆ. ಅಲ್ಲಿ ಬರುವ, ಉಮ್ಮ, ಉಪ್ಪಾಪ್ಪ ಮುಸ್ಲಿಂ ಸಮಾಜದಲ್ಲಿ ಸಂಸ್ಕೃತಿಯ ಆಚಾರ-ವಿಚಾರಗಳನ್ನು ನೋಡುವುದಾದರೆ ಬೇರೆ ಸಮುದಾಯಕ್ಕಿಂತ ಭಿನ್ನವಾಗಿರುವುದನ್ನು ಕಾಣುತ್ತೇವೆ. ಮಗು ಹುಟ್ಟಿದಾಗ ಕೂದಲು ತೆಗೆದು ನಾಮಕರಣ ಪದ್ಧತಿ ಮುಸ್ಲಿಂ ಸಮುದಾಯದಲ್ಲಿದೆ. ಹೀಗಾಗಿ ಸಹನಾ ಕಾದಂಬರಿ ನಸೀಮಾಳ ಅತ್ತೆ, ನಸೀಮಾಳಿಗೆ ಹುಟ್ಟಿದ ಮಗುವಿಗೆ ೪೦ನೇ ದಿನಕ್ಕೆ ತನ್ನದೆ ಹೆಸರು ಇಟ್ಟು ಕೂದಲು ತೆಗೆದು ತೊಟ್ಟಿಲು ಕಟ್ಟುವ ಸಮಾರಂಭವೂ ಮಾಡುತ್ತಾರೆ. ಹಾಗೆ 'ಪ್ರವಾಹ-ಸುಳಿ' ಕಾದಂಬರಿಯಲ್ಲಿ ಊರವರಿಗೆ ಮಾಂಸದ ಊಟ ಮತ್ತು ಸೇರಿದ ಹುಡುಗರಿಗೆಲ್ಲರಿಗೆ ಒಂದೊಂದು ರೂಪಾಯಿ ಮತ್ತು ಶಾಲೆಗಳಿಂದಲೂ ಓಡಿ ಬಂದು ಕೈಯೊಡ್ಡಿದ್ದರು. ಮಮ್ಮುಟಿಯವರ ಹೆಂಡತಿಗೆ ಪ್ರತಿ ವರ್ಷವೂ ಒಂದು ಮಗು ಹುಟ್ಟಲಿ ಎಂದು ಬಡ ಹೆಂಗಸರೂ, ಮಕ್ಕಳೂ ದುವಾ ಮಾಡಿದರು. ಮಗುವಿನ ಪ್ರಥಮ ಕ್ಷೌರದ ಖುರ್‌ಖಾನಿಗಾಗಿ ಆಡು ತರಲಿಲ್ಲವೆಂದು ದೂರು ಕೇಳಿ ಬಂತು. ಬಾಣಂತಿಯನ್ನು ಸಾಕುವ ಹೆಂಗಸಿಗೆ ಕೊಟ್ಟ ಸೀರೆಯು ಅಷ್ಟಕಷ್ಟೇ ಎಂದು ದೂರು ಸಹ ಕೇಳಿ ಬಂತು. ಈ ಮಾತುಗಳಿಂದ ಅಲ್ಲಿನ ಜನರ ಆಚಾರಗಳು ಹೇಗೆ ಇವೆ ಎಂದು ತಿಳಿಯಬಹುದು. ಹಾಗೇ ವಿವಾಹದ ಸಂದರ್ಭದಲ್ಲಿಯೂ, ಮುಸ್ಲಿಂ ಹುಡುಗರು ವಿವಾಹವಾಗುವ ಮೊದಲು ಹುಡುಗಿಯನ್ನು ನೋಡುವ ಪದ್ಧತಿ ಇಲ್ಲ. ಮುಸ್ಲಿಂ ಧಾರ್ಮಿಕ ನಿಯಮದಂತೆ ಮುಸ್ಲಿಂ ಹುಡುಗರು ತಮ್ಮ ಹಿರಿಯರು ನೋಡಿದ ಹುಡುಗಿಯರನ್ನು ವಿವಾಹವಾಗಬೇಕಾಗುತ್ತದೆ. ಆದರೆ ಆಧುನಿಕ ಸಂದರ್ಭದಲ್ಲಿ ನೋಡುವುದಾದರೆ ಈ ಸಂಪ್ರದಾಯವನ್ನು ಬಿಟ್ಟಿರುವುದನ್ನು ಹಳೇಬೇರು ಹೊಸ ಚಿಗುರು ಕತೆಯಲ್ಲಿ ನೋಡಬಹುದಾಗಿದೆ. ಮುಸ್ಲಿಂ ಸಮುದಾಯದಲ್ಲಿಯೂ ವರದಕ್ಷಿಣೆಯ ಬಗ್ಗೆ ಪ್ರಸ್ತಾಪವಿದೆ. ಹಿಂದೂ ಪದ್ಧತಿಯಂತೆ ಹುಡುಗಿಯ ತಂದೆ ಇಲ್ಲವೆ ತಂದೆಯ ಸಹೋದರ ಸಂಬಂಧಿಕರು ಹುಡುಗಿಯನ್ನು ಹುಡುಗನಿಗೆ ಒಪ್ಪಿಸುವ ವಿಧಾನವನ್ನು 'ಸಹನಾ' ಕಾದಂಬರಿಯಲ್ಲಿ ಕಾಣುತ್ತೇವೆ. "ನಿಕಾಹಗೆ ಮೌಲ್ವಿಗಳ ಬಳಿ ಕುಳಿತು ಹುಡುಗನಿಗೊಪ್ಪಿಸಲು ತಂದೆಯಿಲ್ಲದ ಪಕ್ಷದಲ್ಲಿ ತಂದೆಯ ಬಳಗದವರೇ ಆಗಬೇಕು. ಎಷ್ಟೇ ಹತ್ತಿರದ ರಕ್ತ ಸಂಬಂಧಿಯಾದರೂ ತಾಯಿಯ ಬಳಗದವರು, ನಿಕಾಹ ನೆರವೇರಿಸುವಂತಿಲ್ಲ"[೧೧] ಎಂದು ಸಕೀನ ತನ್ನ ಅಣ್ಣನ ಮುಂದೇ ನಿಸೀಮಾಳ ವಿವಾಹದ ಸಂದರ್ಭದಲ್ಲಿ ಹೇಳುತ್ತಾಳೆ. ಅಂತಸ್ತಿಗೆ ತಕ್ಕಂತೆ ವಿವಾಹ ಮಾಡುವುದನ್ನು ನೋಡುತ್ತೇವೆ. ಶ್ರೀಮಂತರ ಮನೆಯ ಮದುವೆ ಸಮಾರಂಭ ಅದ್ದೂರಿಯಾಗಿ ವರ್ಣನೆಗಳು ಮುಸ್ಲಿಂ ಸಮಾಜದ ಇನ್ನೊಂದು ಮುಖವನ್ನು ಪರಿಚಯಿಸುತ್ತಾರೆ. ವರನ ದಿಬ್ಬಣ ರಾತ್ರಿಯ ಸಮಯದಲ್ಲಿ ಪಟಾಕಿ ಸಿಡಿಸುತ್ತ ಹಾಡುತ್ತಾ ಕುಣಿತ

---

೧೧. ಪು.ಸಂ. ೭೪, ಸಹನಾ, ಸಾರಾ ಅಬೂಬಕ್ಕರ್

ಇರುವುದಲ್ಲದೆ ಕತ್ತಿ ವರಸೆಯೂ ಇರುವುದನ್ನು ವಿವರಿಸುತ್ತಾರೆ. ಹಾಗೆ ಬಣ್ಣ ಬಣ್ಣದ ದೀಪಾಲಂಕಾರಗಳೂ ಕೂಡ ಮಾಡಿಸಿರುತ್ತಾರೆ ಎಂದು ಮಮ್ಮುಟಿ ತನ್ನ ಮಗಳ ಮದುವೆಯ ಸಂದರ್ಭವನ್ನು ನೋಡಬಹುದು. ಹಾಗೆ ಮುಸ್ಲಿಂ ಸಮುದಾಯದಲ್ಲಿ ಮಹಿಳೆಯರಿಗೆ ಏಳನೆಯ ತಿಂಗಳಲ್ಲಿ ಸೀಮಂತ ಮಾಡುವ ಮತ್ತು ಮಹಮ್ಮದ್ ಪೈಗಂಬರರ ಹೆಸರಿನಲ್ಲಿ ಮೌಲೂದ್ ಮಾಡುವ ಸಂಪ್ರದಾಯವನ್ನು ಸಾರಾ ಅವರು ತಮ್ಮ ಕತೆ, ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಧಾರ್ಮಿಕ ಸಂಸ್ಕೃತಿ

ಆಯಾ ಧರ್ಮದ ಗ್ರಂಥದಲ್ಲಿ ಹೇಳಿರುವ ಧರ್ಮ ಪ್ರವರ್ತಕರ ವಿಚಾರಗಳೆಂದು ಅಧಿಕೃತವಾಗಿ ಹೇಳಲು ಸಾಧ್ಯವಾಗಿದೆ. ಹೀಗೆ ಅನ್ಯಧರ್ಮದಲ್ಲಿರುವಂತೆ ಇಸ್ಲಾಂ ಧರ್ಮದಲ್ಲಿ ಆಚರಿಸುವ ಹಬ್ಬ -ಹರಿದಿನಗಳು ಇಸ್ಲಾಂ ಧಾರ್ಮಿಕ ಸಂಸ್ಕೃತಿಯೆಂದು ಪರಿಗಣಿಸುತ್ತಾರೆ. ಮುಸ್ಲಿಂ ಸಮುದಾಯದಲ್ಲಿ ಏಕದೇವೋಪಾಸನೆ ಇರುವುದನ್ನು ಸಾರಾ ಅವರ ಕಥನ ಸಾಹಿತ್ಯದಲ್ಲಿ ಕಂಡುಬರುತ್ತದೆ. ಅನೇಕ ಕತೆ, ಕಾದಂಬರಿಯಲ್ಲಿ ಕಷ್ಟ ಮತ್ತು ಸುಖದ ಸಂದರ್ಭದಲ್ಲಿ ಜನರು 'ಯ ಅಲ್ಲಾ' ಎಂದು ಪ್ರಾರ್ಥನೆ ಮಾಡುತ್ತಾರೆ ಹೊರತು ಮತ್ಯಾವ ದೇವರನ್ನೂ ನೆನೆಯುವುದಿಲ್ಲ. ರಂಜಾನ, ಬಕ್ರೀದ್ ಹಬ್ಬಗಳನ್ನು ಅತ್ಯಂತ ಅದ್ದೂರಿಯಾಗಿ ಆಚರಿಸುತ್ತಾರೆ. ಶ್ರೀಮಂತರು ಭಿಕ್ಷುಕರಿಗೆ ಬಡವರಿಗೆ ದಾನ ಮಾಡುವುದು, ಹಬ್ಬಗಳಲ್ಲಿ ಶ್ರೀಮಂತರಾಗಲಿ, ಬಡವರಾಗಲಿ ಹೊಸ ಬಟ್ಟೆಗಳನ್ನು ಧರಿಸುವುದು, ರಂಜಾನ್ ತಿಂಗಳಲ್ಲಿ ಒಂದು ತಿಂಗಳವರೆಗೆ ಉಪವಾಸವಿದ್ದು, ಹಬ್ಬವನ್ನು ಆಚರಣೆ ಮಾಡುತ್ತಾರೆಂದು ತಿಳಿಯಬಹುದು. ಹಾಗೂ ಪ್ರತಿದಿನವು ಐದು ವೇಳೆ ನಮಾಜ್ ಮಾಡುತ್ತಿದ್ದರೆಂದು ವಜ್ರಗಳು, ನಾವು ನಮ್ಮವರು ಕತೆಗಳಲ್ಲಿ ಉಲ್ಲೇಖಿಸಿದ್ದಾರೆ. 'ವಜ್ರಗಳು' ಕಾದಂಬರಿಯಲ್ಲಿ ಮಹಮ್ಮದ್ ಹಾಜಿ ಅಂಬಿಗನಿಗೆ ಬೇಗ ಬೇಗ ಹುಟ್ಟು ಹಾಕಲು ಹೇಳುತ್ತಾರೆ. "ಏನು ಅದ್ರಾಮ್, ಮಗರಿಬ್ ನವಾಜ್‌ನ ಮೊದಲು ಊರು ಸೇರುವುದು ಸಾಧ್ಯವಾಗಲಿಲ್ಲ. ಇಶಾ ನಮಾಜಿನ ಹೊತ್ತಿಗಾದರೂ ಊರು ಸೇರುವಂತೆ ಕೊಂಚ ಬೇಗ ಹುಟ್ಟು ಹಾಕು"[೧೨] ಎಂದು ಹೇಳುತ್ತಾರೆ. ಹಾಗೆ ಅನೇಕ ಕಾದಂಬರಿಗಳಲ್ಲಿ ಪ್ರತಿಯೊಬ್ಬರೂ ದಿನಕ್ಕೆ ಐದು ಸಾರಿ ನಮಾಜ್ ಮಾಡುವುದನ್ನು ಹೇಳಿರುವುದನ್ನು ಕಾಣುತ್ತೇವೆ. ಹಾಗೆ ಹಿಂದೂ ಸಂಪ್ರದಾಯದಲ್ಲಿ ಕಾಶಿಯಾತ್ರೆಗೆ ಹೋಗುವುದು ಹೇಗೆ ಪುಣ್ಯವೋ ಹಾಗೆ ಮುಸ್ಲಿಂ ಸಮುದಾಯದಲ್ಲಿ ಹಜ್ ಯಾತ್ರೆಗೆ ಹೋಗಿ ಬರುವುದು ಅಲ್ಲಿಯ ಸಂಪ್ರದಾಯವಾಗಿದೆ. ಜೀವನದಲ್ಲಿ ಒಮ್ಮೆಯಾದರೂ ಹಜ್ ಯಾತ್ರೆಯನ್ನು ಮಾಡಬೇಕೆಂದು ಇಸ್ಲಾಂ ಧಾರ್ಮಿಕ ನಿಯಮ ಹೇಳುತ್ತದೆ. ಹಜ್ ಯಾತ್ರೆಗೆ ಹೋಗುವ ಮೊದಲು 'ದಾವತ್' ಆಗಬೇಕೆಂದು ಮುಮ್ಮಟಿ ತನ್ನ ಊರಿನ ಜನರಿಗೆಲ್ಲ ಕರೆದು

---

೧೨. ಪು.ಸಂ. ೮, ಸಹನಾ, ಸಾರಾ ಅಬೂಬಕ್ಕರ್

ಊಟಕ್ಕೆ ಹಾಕಿಸುತ್ತಾನೆ. ಹಾಗೆ ತಮ್ಮ ಸಂಬಂಧಿಕರನ್ನು ತಮ್ಮ ಮನೆಗೆ ಕರೆದು ಹಜ್‌ಯಾತ್ರೆಗೆ ಹೋಗುವವರಿಗೆ 'ದಾವತ್' ಮಾಡಿಸುತ್ತಾರೆ. ಹಾಗೆ ಅವರಿಗೆ ಉಡುಗರೆಯನ್ನು ನೀಡುತ್ತಾರೆ. ಹೀಗೆ ಹಜ್ ಯಾತ್ರೆಗೆ ಹೋಗಿ ಬಂದವರನ್ನು ಅತ್ಯಂತ ಗೌರವದಿಂದ ಕಾಣುವ ಸಂಪ್ರದಾಯ ತಿಳಿದು ಬರುತ್ತದೆ.

ಆದರೆ ಇಸ್ಲಾಂ ಧರ್ಮದಲ್ಲಿ ತಲಾಖ್, ಬಹುಪತ್ನಿತ್ವ, ಅಲ್ಲಿನ ಮಹಿಳೆಯರನ್ನು ಪೆಡಂಭೂತವಾಗಿ ಕಾಡುವುದನ್ನು ಕಾಣುತ್ತೇವೆ. ಇಂತಹ ಪದ್ಧತಿ ಮಾನವ ಸಂಸ್ಕೃತಿಗೆ ವಿರುದ್ಧವಾದುದಾಗಿದೆ. ಯಾವುದೇ ಆರ್ಥಿಕ ಭದ್ರತೆ ಇಲ್ಲದ ಮಹಿಳೆಯರಿಗೆ ಗಂಡನ ಮನೆ ಇಲ್ಲವೆ ತವರು ಮನೆ ಎರಡೇ ಆಧಾರವಾಗಿರುತ್ತದೆ. ಆದರೆ ಅಲ್ಲಿ ಬಡತನವಿದ್ದರೆ ಆಕೆಯ ಆಶ್ರಯ ಅಲುಗಾಡಿದಂತಾಗುತ್ತದೆ. ಇಸ್ಲಾಂ ಧರ್ಮದಲ್ಲಿ ಮಹಿಳೆಯರಿಗೆ ಮರು ಮದುವೆಗೆ ಅವಕಾಶವಿದ್ದರೂ ವಿಚ್ಛೇದನ ಹೊಂದಿದ ಮಹಿಳೆಯರನ್ನು ಇಂದೋ ನಾಳೆಯೋ ಸಾಯುವ ಮುದುಕನಿಗೆ ವಿವಾಹ ಮಾಡುತ್ತಾರೆ. ಹೀಗೆ ತನ್ನ ಆಶ್ರಯಕ್ಕಾಗಿ ಹಲವು ವಿವಾಹಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲವೆ ಆ ಮಹಿಳೆಯರು ಅನೀತಿ ಮಾರ್ಗದಲ್ಲಿ ಬಾಳಬೇಕಾಗುವ ಸಂದರ್ಭ ಕಾಣಬರುತ್ತದೆ. ಇಸ್ಲಾಂ ಮಹಿಳೆಯರು ವ್ಯವಸ್ಥೆಯ ಬಲಿಪಶುವಾಗಿರುವುದನ್ನು ಸಾರಾ ಅವರ ಕತೆ ಕಾದಂಬರಿಯಲ್ಲಿ ಕಾಣಬಹುದು.

ಆರ್ಥಿಕ

ಸಾರಾ ಅವರ ಕಥನ ಸಾಹಿತ್ಯದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ನೋಡುವುದಾದರೆ ಆರ್ಥಿಕ ಪರಿಸ್ಥಿತಿಯ ಕಾರಣದಿಂದ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ನಾದಿರಾ ಜೀವನ ಮರಟುಗೊಳ್ಳುವುದನ್ನು ಉದಾಹರಿಸಬಹುದು. ಹಾಗೆ ಇವರ ಕತೆ ಕಾದಂಬರಿಗಳಲ್ಲಿ ಆರ್ಥಿಕ ಸಂಸ್ಕೃತಿ ಆಯಾ ಪ್ರಾದೇಶಿಕ ಪರಿಸರದ ಕಸುಬನ್ನು ಅವಲಂಬಿಸಿರುತ್ತದೆ. ಕರಾವಳಿ ಪ್ರದೇಶ ಸುತ್ತಮುತ್ತಲಿನ ಜನರು ಮಾಡುವ ಕಸಬುಗಳೇ ತಮ್ಮ ಕತೆ, ಕಾದಂಬರಿಯಲ್ಲಿ ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಅಲ್ಲಿಯ ಮುಖ್ಯ ಉದ್ಯೋಗಗಳಾದ, ಮೀನುಗಾರಿಕೆ, ಬೀಡಿಕಟ್ಟುವುದು, ದೋಣಿಯಲ್ಲಿ ಕೆಲಸ, ಸಣ್ಣಪುಟ್ಟ ಅಂಗಡಿ ನಡೆಸುವುದು, ತೋಟ ಗದ್ದೆಗಳಲ್ಲಿ ದುಡಿದು ಭತ್ತ, ತೆಂಗು, ಅಡಿಕೆ ಅಲ್ಲಿಯ ಪ್ರಮುಖ ಬೆಳೆಯಾಗಿರುವುದನ್ನು ಕಾಣುತ್ತೇವೆ.

ಶಿಕ್ಷಣ

ಪ್ರತಿಯೊಬ್ಬ ಮನುಷ್ಯರಿಗೂ ವಿದ್ಯೆ ಬೇಕು ಇದರಿಂದ ವ್ಯಕ್ತಿಗೆ ಒಂದು ವಿಶಿಷ್ಟವಾದ ಗೌರವ ಸಿಗುತ್ತದೆ. ಹಾಗೆ ಶಿಕ್ಷಣ ವ್ಯಕ್ತಿಯ ಸರ್ವತೋಮುಖ ಪ್ರಗತಿಯ ಒಂದು ಸಾಧನವಾಗಿ ಕೆಲಸ ಮಾಡುತ್ತದೆ. ಆದರೆ ಬಡವರು ಮತ್ತು ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ. ಮನುಷ್ಯನ ಜೀವನೋಪಾಯಕ್ಕೆ ಅನ್ನ, ನೀರು, ವಸತಿ, ಹೇಗೆ ಮುಖ್ಯವಾಗುತ್ತವೆ. ಹಾಗೇ ತನ್ನ ಮೂಲಭೂತ ಅವಶ್ಯಕತೆಗಳಲ್ಲಿ ಶಿಕ್ಷಣವು ಒಂದು ಅವಶ್ಯಕವಾಗಿದೆ. ವ್ಯಕ್ತಿಯಲ್ಲಿ ಜ್ಞಾನ ವಿಕಾಸನ ಹೊಂದಿ ವೈಚಾರಿಕ ಪ್ರಜ್ಞೆ ಬೆಳೆಯಲು ಶಿಕ್ಷಣ ನೆರವಾಗುತ್ತದೆ. ಸಾರಾ ಅವರು ಚಿತ್ರಿಸಿದ ಬಡ ಮುಸ್ಲಿಂ ಜನಾಂಗವು ಶಿಕ್ಷಣದಿಂದ

ವಂಚಿತರನ್ನಾಗಿ ಮಾಡಿ ಹಲವಾರು ತೊಂದರೆಗಳನ್ನು ಎದುರಿಸುವುದನ್ನು ಕಾಣುತ್ತೇವೆ. ಮುಸ್ಲಿಂ ಜನಾಂಗದಲ್ಲಿ ಬೇರೂರಿದ ಅಜ್ಞಾನ ಮತ್ತು ಮೂಢನಂಬಿಕೆಯಿಂದಲೇ ಬಡವರು. ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಇದಕ್ಕೆ ಆರ್ಥಿಕ ಕಾರಣವು ಮುಖ್ಯವಾಗುತ್ತದೆ. ಇಂತಹ ಒಂದು ನಿದರ್ಶನವೊಂದು 'ಮಸೀದಿ ಕಟ್ಟುವವರು' ಕತೆಯಲ್ಲಿ ಕಾಣಬಹುದು. ಏಳು ವರ್ಷದ ಹಿರಿಯ ಮಗನನ್ನು ಯಾಕೆ ಶಾಲೆಗೆ ಸೇರಿಸಿಲ್ಲ? ಎಂದು ಕೇಳಿದರೆ, ಅಸ್ಮಾ ಸಮನಾದ ಒಂದೆರಡು ಅಂಗಿಗಳಾದರೂ ಇಲ್ಲದೆ ಈ ಹರಕು ಚಡ್ಡಿಯಲ್ಲಿ ಎಂತಹ ಶಾಲೆ ಎಂದು ತನ್ನ ಬಡತನದ ಅಸಹಾಯಕ ಪರಿಸ್ಥಿತಿಯನ್ನು ಹೇಳುತ್ತಾಳೆ. ಮಕ್ಕಳು ವಿದ್ಯೆಗಾಗಿ ಹಾತೊರೆಯುವಾಗ ಬಡ ತಂದೆ-ತಾಯಿಯರು ಯಾವ ರೀತಿ ಪ್ರತಿಕ್ರಿಯೆ ತೋರುತ್ತಾರೆಂಬುದನ್ನು 'ವಜ್ರಗಳು' ಕಾದಂಬರಿಯಲ್ಲಿ ನೋಡುತ್ತೇವೆ. ಈ ಕಾದಂಬರಿಯಲ್ಲಿ ಶಫೀಯುಲ್ಲಾ ಎಂಬ ಹುಡುಗ ಬಾಲ್ಯದಿಂದಲೇ ವಿದ್ಯೆ ಕಲಿಯುವುದಕ್ಕೆ ತನ್ನ ತಂದೆ-ತಾಯಿಯ ಹತ್ತಿರ ಹಟ ಮಾಡುತ್ತಾನೆ. ಆತನ ಹಟಕ್ಕೆ ತಾಯಿಯು 'ಕಾಫಿರ್ ಭಾಷೆಯಲ್ಲಿ ಕಲಿತು ಏನು ಮಾಡುತ್ತೀ' ಎಂದು ಮಗನಿಗೆ ಗದರಿಸುತ್ತಾಳೆ. ಆದರೆ ಶಫೀಯುಲ್ಲಾ "ನಂಗೆ ಆಟದ ಸಾಮಾನು ಬೇಡಾ ಪುಸ್ತಕ ಸ್ಲೇಟು ಬೇಕು ಎಂದು ತನ್ನ ತಂದೆಗೆ ಹೇಳುತ್ತಾನೆ. ಶಫಿಯುಲ್ಲಾನಿಗೆ ತಂದೆ-ತಾಯಿಗಳು ಎಷ್ಟೇ ಬೈದರೂ ಆತನ ವಿದ್ಯೆಯ ಹಂಬಲ ಹೋಗುವುದಿಲ್ಲ. ಮಗ ಕಲಿತು ಏನು ಮಾಡುತ್ತಾನೆ ಎಂದು ಆತನ ತಂದೆ ತಾತ್ಸಾರವನ್ನು ತೋರಿದಾಗ ಶಫೀಯುಲ್ಲಾನ ಗುರುಗಳು ಇವನ ತಂದೆಯ ಮುಂದೆ ಈ ರೀತಿ ಹೇಳುತ್ತಾರೆ. ನಿನ್ನ ಮಗ ವಿದ್ಯೆ ಕಲಿತು ಏನು ಮಾಡಬಾರದು? ಇಂಜಿನಿಯರೋ, ಡಾಕ್ಟರರೋ ಆಗಬಹುದು. ದೊಡ್ಡ ಸರಕಾರಿ ಕೆಲಸಕ್ಕೆ ಹೋಗಬಹುದು. ಕೈ ತುಂಬ ಸಂಬಳ ತರಬಹುದು. ಆಸ್ತಿ ಮನೆ ಯಾವುದೂ ನಿನ್ನದಲ್ಲ ತಾನೇ? ನಿನ್ನ ಮಗನ ಸಂಪಾದನೆಯಿಂದ ಆಸ್ತಿ, ಮನೆ ಎಲ್ಲ ಕೊಂಡುಕೊಳ್ಳಬಹುದು, ಏನಂತೀ"[೧೩] ಎಂದು ಗುರುಗಳ ಮಾತಿನಿಂದ ವಿದ್ಯೆಯಿಂದ ಆಸ್ತಿಗಳಿಸಬಹುದೆಂಬ ಮಾತುಗಳಿಂದ ಆತನ ಮನಪರಿವರ್ತನೆಗೊಂಡು ತನ್ನ ಮಗನನ್ನು ವಿದ್ಯೆ ಕಲಿಯಲು ಅನುಮತಿ ಕೊಡುತ್ತಾನೆ. ಆ ಪರಿಣಾಮವಾಗಿ ಶಫಿಯುಲ್ಲಾ ಇಂಜಿನಿಯರ್ ನಾಗುತ್ತಾನೆ. ಹೀಗೆ ಆರ್ಥಿಕ ಆಚರಣೆ, ಧಾರ್ಮಿಕ ನಂಬಿಕೆಗಳಿಂದ ಗಂಡು ಮಕ್ಕಳು ವಿದ್ಯೆಯಿಂದ ವಂಚಿತರಾಗಿದ್ದಾರೆ ಇನ್ನು ಬಡ ಮುಸ್ಲಿಂ ಹೆಣ್ಣು ಮಕ್ಕಳಿಗೆ ಶಿಕ್ಷಣ ದೂರದ ಮಾತು. ಏಕೆಂದರೆ ಶತಮಾನಗಳಿಂದ ಹೆಣ್ಣಿನ ಬದುಕನ್ನು ಮತ್ತು ತಾಯ್ತನಗಳೆಂಬ ಸಂಕೋಲೆಗಳಲ್ಲಿ ಬಂಧಿಸಿ ಆಕೆಗೆ ಶಿಕ್ಷಣವನ್ನು ಪಡೆಯುವುದರಿಂದ ದೂರವೇ ಉಳಿಸಿದ್ದಾರೆ. ಹೀಗೆ ಆಕೆಯನ್ನು ಶಿಕ್ಷಣದಿಂದ ನಿರಾಕರಿಸುತ್ತಾ ಬಂದಿರುವ ಸಾಮಾಜಿಕ ಮೌಲ್ಯಗಳು ಆಕೆಯನ್ನು ಅಜ್ಞಾನದ ಕೂಪದಲ್ಲಿ ತಳ್ಳಿರುವುದನ್ನು ಕಾಣುತ್ತೇವೆ. ಹೆಣ್ಣು ಬಾಲ್ಯದಲ್ಲಿ ತಂದೆಯ ಪೋಷಣೆಯಲ್ಲೂ ಇರಬೇಕೆಂದು ಪ್ರತಿಪಾದಿಸಿ, "ನ ಸ್ತ್ರೀ ಸ್ವಾತಂತ್ರ್ಯ ಅರ್ಹತಿ' ಎಂದು ಮನುವಿನ ಸ್ತ್ರೀ ಸ್ವಾತಂತ್ರ್ಯ ವಿರೋಧಿ ಮೌಲ್ಯಗಳು ಇಂದಿಗೂ ಸಂಪೂರ್ಣವಾಗಿ ಹೋಗಿಲ್ಲವೆಂಬುದು ಸಮಕಾಲೀನ

---

೧೩. ಪು.ಸಂ... ವಜ್ರಗಳು, ಸಾರಾ ಅಬೂಬಕ್ಕರ್

ಸಮಾಜದ ವಿಪರ್ಯಾಸಗಳಲ್ಲಿ ಒಂದಾಗಿದೆ. ಈ ಮಾತುಗಳು ಸಾರಾ ಅವರ ಕಥನ ಸಾಹಿತ್ಯಕ್ಕೂ ಅನ್ವಯಿಸುತ್ತಿರುವುದನ್ನು ಕಾಣುತ್ತೇವೆ. 'ಚಪ್ಪಲಿಗಳು' ಕಥೆಯ ಸಮೀರಾ, 'ಹುಟ್ಟು' ಕತೆಯ ಕದೀಜಾ 'ಸಹನಾ' ಕಾದಂಬರಿಯ ನಸೀಮಾ ಇವರು ವಿದ್ಯೆ ಕಲಿಯಲು ಹಾತೊರೆಯುತ್ತಾರೆ. ಆದರೆ ಆ ಸಮುದಾಯದಲ್ಲಿ ತಮ್ಮ ಹೆಣ್ಣು ಮಕ್ಕಳನ್ನು ಆದಷ್ಟು ಬೇಗ ವಿವಾಹ ಮಾಡುವುದೇ ಅವರ ಕರ್ತವ್ಯವೆಂದು ತಿಳಿದಿರುತ್ತಾರೆ. 'ಹುಟ್ಟು' ಕತೆಯ ಕತೀಜಾಳ ತಾಯಿ ಈ ರೀತಿ ಹೇಳುತ್ತಾರೆ. "ಅಯ್ಯೋ ಟೀಚರ್, ನಿವೇನ ಹೇಳುತ್ತೀರಿ? ಮುಂದಿನ ವರ್ಷ ಅವಳಿಗೆ ಮದುವೆ ಮಾಡಬೇಕು. ಮತ್ತೆ ಅವಳು ಮನೆಕೆಲಸ ಕಲಿಯುವುದು ಯಾವಾಗ? ನಮ್ಮ ಹೆಣ್ಣು ಮಕ್ಕಳು ಹೆಚ್ಚು ಕಲಿತು ಏನಾಗಬೇಕಾಗಿದೆ? ನಾವವರನ್ನು ಹೊರಗೆ ನೌಕರಿಗೆ ಕಳಿಸುತ್ತೇವಾ?"[೧೪] ಎಂದು ಹೇಳುತ್ತಾಳೆ. ಆದರೂ ಕತೀಜಾ ವಿದ್ಯೆಗಾಗಿ ಹಾತೊರೆಯುವ ಮನಸ್ಸು ಹಾಗೂ ಆಕೆಯ ಜಾಣ್ಮೆ ಕಂಡು ಟೀಚರ್ ತಿಳಿಸಿ ಹೇಳಿದರೂ ಆಕೆಯ ತಾಯಿಗೆ ಅರ್ಥವಾಗಲಿಲ್ಲ. ಇದರಿಂದ ತಮ್ಮ ಮಗಳು ಮದುವೆಯಾಗಿ ಗಂಡನ ದೌರ್ಜನ್ಯಕ್ಕೆ ತನ್ನ ಜೀವನವನ್ನೇ ಬಲಿಕೊಡುತ್ತಾಳೆ. ಇದರಿಂದ ಆ ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಒಂದು ಮೌಲ್ಯವಾಗಿರಲಿಲ್ಲ ಎಂದು ತಿಳಿದು ಬರುತ್ತದೆ. ಅದು ಅಲ್ಲದೆ ಹೆಣ್ಣಿಗೆ ಬೇಗ ಮದುವೆ ಮಾಡಬೇಕೆಂದು ಇಚ್ಛಿಸುತ್ತಾರೆ. ಇದರಂತೆಯೇ ಸಹನಾ ಕಾದಂಬರಿಯ ನಸೀಮಾಳಿಗೆ ಓದಬೇಕೆಂಬ ಆಸೆ, ಆದರೆ ಆಕೆಯ ತಾಯಿ ಸಕೀನಾ ಈ ರೀತಿ ಮಗಳಿಗೆ ಹೇಳುತ್ತಾಳೆ. ನಿನ್ನ ಓದಿಗೆ ಖರ್ಚು ಮಾಡುವವರು ಯಾರು? ನಿನ್ನ ಅಬ್ಬ ಹಣ ಕಳುಹಿಸುತ್ತಾನೆಯೇ? ತೆಪ್ಪಗೆ ಬಾಯಿ ಮುಚ್ಚಿಕೊಂಡು ನಾನು ಹೇಳಿದಂತೆ ಮಾಡು ಎಂದು ಮಗಳ ಓದಿಗೆ ಕಡಿವಾಣ ಹಾಕುತ್ತಾಳೆ. ನಸೀಮಾಳ ಮದುವೆಗೆ ಹಣ ಕೂಡಿಸುವುದಕ್ಕಾಗಿಯೇ ಮಗಳನ್ನು ಬೀಡಿ ಕಟ್ಟಲು ಹಚ್ಚುತ್ತಾಳೆ. ಹೀಗೆ ಕತೀಜಾ ಮತ್ತು ನಸೀಮಾ ಇವರಿಬ್ಬರೂ ತಮ್ಮ ತಾಯಿಗಳ ಒತ್ತಾಯದ ಮೂಲಕ ಶಿಕ್ಷಣಕ್ಕೆ ತಿಲಾಂಜಲಿ ಹಾಕುತ್ತಾರೆ. ಮುಂದೆ ವೈವಾಹಿಕ ಜೀವನದಲ್ಲಿ ಹಲವಾರು ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಆದರೆ ತಾವು ಕಂಡ ಕಷ್ಟಗಳನ್ನು ತಮ್ಮ ಮಕ್ಕಳು ಎದುರಿಸಬಾರದೆಂದು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವ ಇಚ್ಛೆಯುಳ್ಳವರಾಗಿರುತ್ತಾರೆ. ಹೀಗೆ ಮಹಿಳೆಯರಿಗೆ ವಿದ್ಯ ಅವಶ್ಯಕತೆಯ ಬಗ್ಗೆ ಕುರಿತು ಸಾರಾ ಅವರು ಹಲವು ಕತೆಯಲ್ಲಿ ಹೇಳುತ್ತಾರೆ. ಅಂಕುರ, ಧ್ವನಿಯಿಲ್ಲದ ನೋವುಗಳು ಕತೆಯಲ್ಲಿ ನೋಡಬಹುದು.

'ಅಂಕುರ' ಕತೆಯಲ್ಲಿ ಶಕೀಲಾ ಅಕ್ಷರಾಭ್ಯಾಸ ಇಲ್ಲದ ಕಾರಣ ತನ್ನ ಕುಟುಂಬದವರಾದ ಅತ್ತೆ, ಭಾವ ಕೊಡುವ ಕಾಟ ಹಿಂಸೆಗಳನ್ನು ಕೊಲ್ಲಿ ರಾಷ್ಟ್ರದಲ್ಲಿರುವ ಗಂಡನಿಗೆ ಹೇಗೆ ತಿಳಿಸಲಿ ಎಂದು ಗೋಳಾಡುತ್ತಾಳೆ. ದಾಂಪತ್ಯದ ಕಟ್ಟಡವು ಸುಗಮವಾಗಿ ನಿಲ್ಲಬೇಕಾದರೆ ಶಿಕ್ಷಣವು ಅವಶ್ಯವೆಂದು ಲೇಖಕಿಯು ಹೇಳುತ್ತಾರೆ. 'ಧ್ವನಿ ಇಲ್ಲದ ನೋವುಗಳು' ಕತೆಯಲ್ಲಿ ಶಿಕ್ಷಣವಿಲ್ಲದ ಮಹಿಳೆಯರ ವ್ಯಥೆಯನ್ನು ಈ

---

೧೪. ಪು.ಸಂ. ೮೨, ಹುಟ್ಟು, ಸಾರಾ ಅಬೂಬಕ್ಕರ್

ರೀತಿಯಾಗಿ ಜರೀನಾಳ ಮಾತುಗಳ ಮೂಲಕ ಗ್ರಹಿಸಬಹುದು "ನನಗೆ ಓದು ಬರಹ ಬಾರದೆ ಎಂತಹ ತೊಂದರೆಯಾಯಿತಲ್ಲ. ತನ್ನೆದೆಯೊಳಗಿನ ವಿರಹ ವೇದನೆಯನ್ನು ತಾನೇ ಆತನಿಗೆ ಬರೆದು ತಿಳಿಸುವಂತಿದ್ದರೆ ಎಷ್ಟು ಚೆನ್ನಾಗಿತ್ತು. ಅದಕ್ಕುತ್ತರವಾಗಿ ಆತ ಬರೆದುದನ್ನು ತಾನೇ ಓದುವಂತಿದ್ದರೆ! ಬರೆಯಲಾಗದ ಅಕ್ಷರಗಳು ಸುರುಳು ಸುರುಳು ವಕ್ರ ವಕ್ರ ಗೆರೆಗಳಾಗಿ ಆಕೆಯ ಕಣ್ಣ ಮುಂದೆ ಸುಳಿದಾಡುತ್ತಿದ್ದವು."[೧೫] ಅಕ್ಷರಾಭ್ಯಾಸ ಬರದ ಆ ಯುವತಿಯ ಮನಸ್ಥಿತಿ ಕನಿಕರವುಂಟು ಮಾಡಿಸುತ್ತದೆ. ಅವಳಿಗೆ ತಾನು ಅಕ್ಷರ ಕಲಿಯಬೇಕಾಗಿತ್ತೆಂಬ ವ್ಯಥೆಯು ಅವಳ ಹೃದಯವನ್ನು ಹಿಂಡುತ್ತದೆ. ಈ ರೀತಿ ಮುಸ್ಲಿಂ ಮಹಿಳೆಯರಿಗೆ ವಿದ್ಯಾಭ್ಯಾಸ ಮಾಡಿಸ ಬಾರದೆಂದು ಕೂಡ ಅನೇಕ ಕಾದಂಬರಿಯಲ್ಲಿಯೂ ನೋಡಬಹುದು. 'ಪ್ರವಾಹ-ಸುಳಿ' ಕಾದಂಬರಿಯಲ್ಲಿ ಮಮ್ಮುಟಿಯ ಮುಂದೆ ಫರೀದಾ ತಮ್ಮ ಮಗಳು ಮುಂದಿನ ವರ್ಷ ಕಾಲೇಜಿಗೆ ಸೇರಬೇಕೆಂದು ಮಮ್ಮುಟಿ ಅದನ್ನು ವಿರೋಧಿಸುವುದನ್ನು ಕಾಣುತ್ತೇವೆ. ಹೀಗೆ ಮಹಿಳೆಯರನ್ನು ಶಿಕ್ಷಣದಿಂದ ದೂರವಿರಿಸಿದ್ದಾರೆ.

ಸಾರಾ ಅವರ ಕಥನ ಸಾಹಿತ್ಯದಲ್ಲಿ ಲಿಂಗ ತಾರತಮ್ಯ ಸಾರಾ ಅವರು ರಚಿಸಿದ ಕತೆ-ಕಾದಂಬರಿಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಕಾಪಾಡುವಲ್ಲಿ ಹೆಣ್ಣು ಗಂಡು ಸಮನಾಗಿರುತ್ತಾರೆ. ಆದರೆ ಈ ಸಮುದಾಯಗಳು ಲಿಂಗ ತಾರತಮ್ಯದ ಮೌಲ್ಯಗಳಡಿಯಲ್ಲಿ ಮಹಿಳೆಯರನ್ನು ಯಾವ ರೀತಿಯಲ್ಲಿ ಬಂಧನದಲ್ಲಿ ಇರಿಸಿದ್ದಾರೆ ಎಂಬುದನ್ನು ತಿಳಿಯಬಹುದು.

ಭಾರತೀಯ ಸಂಪ್ರದಾಯದಲ್ಲಿ ಗಂಡು ಮಗು ವಂಶೋದ್ಧಾರಕ, ಗಂಡು ಮಗುವಿನಿಂದಲೇ ಮೋಕ್ಷವೆಂದು ಗ್ರಹಿಸಿದ ಕಾರಣ ಗಂಡು ಶ್ರೇಷ್ಠನಾಗಿದ್ದಾನೆ. ಹೆಣ್ಣಿಗೆ ವಿಧಿಸಿದ ಸಂಪ್ರದಾಯಿಕ ಮೌಲ್ಯ ಗಳಿಂದಲೇ ಆಕೆ ಮದುವೆಯಾಗಿ ಗಂಡನ ಮನೆ ಸೇರುವವಳು ಮಹಿಳೆಯರು ಮದುವೆಗಾಗಿ ವರದಕ್ಷಿಣೆಗಾಗಿ ಬಹಳಷ್ಟು ಹಣ ಖರ್ಚು ಮಾಡಬೇಕೆಂಬ ಕಾರಣದಿಂದಲೇ ಹೆಣ್ಣು ಅನಿಷ್ಟ ಎಂದು ಪರಿಗಣಿಸುತ್ತಾರೆ. ಹೀಗೆ ಗಂಡು ಶ್ರೇಷ್ಠ, ಹೆಣ್ಣು ಕಡಿಮೆ ಎಂದು ಹೇಳುತ್ತಾರೆ. ಹಾಗೆ ಭಾರತೀಯ ಸಂಪ್ರದಾಯದಲ್ಲಿರುವಂತೆಯೇ ಮುಸ್ಲಿಂ ಸಮುದಾಯದಲ್ಲಿ ಗಂಡಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿದೆ. ಗಂಡು ಮಕ್ಕಳೇ ತಮಗೆ ಆಧಾರವಾಗಿರುತ್ತಾರೆ. ಅವರ ಆಸ್ತಿ ಎಲ್ಲವೂ ಗಂಡು ಮಕ್ಕಳಿಗೆ ಹೆಣ್ಣು ಬರಿ ಹೆರುವ ಯಂತ್ರ ಅವಳು ಮನೆಗೆಲಸ ಮಾಡಿ ತಾವು ಹೇಳಿದಂತೆ ಕೇಳಿಕೊಂಡು ಇರಬೇಕೆಂದು ಪುರುಷ ಪ್ರಧಾನ ಆಶಿಸುವುದನ್ನು ಅನೇಕ ಕತೆ, ಕಾದಂಬರಿಗಳಲ್ಲಿ ಕಾಣುತ್ತೇವೆ.

'ಸಹನಾ' ಕಾದಂಬರಿಯಲ್ಲಿ ಬರುವ ನಾಯಕಿ ನಸೀಮಾಳಿಗೆ ಮೊದಲಿಗೆ ಹೆಣ್ಣು ಮಗು ಹುಟ್ಟಿದಾಗ ಆಕೆಯ ಗಂಡ ತಿರಸ್ಕರಿಸುತ್ತಾನೆ. "ಮಗು ಗಂಡಾಗಬಹುದೆಂದು ಯೋಚಿಸಿದ್ದೆ. ಮೊಟ್ಟ ಮೊದಲಿಗೆ ಹೆಣ್ಣು ಮಗುವನ್ನು ಹೆತ್ತಿಯಾ?"[೧೬] ಎಂದು ಮೂದಲಿಸುತ್ತಾನೆ. ಎರಡನೆ ಬಾರಿ ಹೆಣ್ಣು ಮಗು ಜನಿಸಿದಾಗಲೂ

೧೫. ಪು.ಸಂ. ೨೨, ಧ್ವನಿ ಇಲ್ಲದ ನೋವುಗಳು, ಸಾರಾ ಅಬೂಬಕ್ಕರ್

ನಸೀಮಾ, ತನ್ನ ಗಂಡ ಹಾಗೂ ಅತ್ತೆಯಿಂದ ತಿರಸ್ಕಾರಕ್ಕೊಳಗಾಗುತ್ತಾಳೆ. ಅಷ್ಟಲ್ಲದೆ ಮೊದಲ ಮಗು ಹೆಣ್ಣಾಗಿದ್ದ ಕಾರಣದಿಂದಲೇ ಅದು ಅನಾರೋಗ್ಯದಿಂದ ಬಳಲುತ್ತಿದ್ದಾಗ ಅವಳ ಅತ್ತೆ ಡಾಕ್ಟರ್ ಹತ್ತಿರ ಚಿಕಿತ್ಸೆ ಕೊಡಿಸುವುದಿಲ್ಲ. ಆದ್ದರಿಂದ ಎರಡನೆಯ ಮಗಳು ಹುಟ್ಟಿದಾಗ ನಸೀಮಾ ಈ ರೀತಿ ಹೇಳುತ್ತಾಳೆ. ಯಾಕಮ್ಮ ನೀನು ಹೆಣ್ಣಾಗಿ ಹುಟ್ಟಿದೆ? ಗಂಡಾಗಿದ್ದರೆ ಸರಿಯಾದ ಆಹಾರ ಔಷಧಿ ದೊರೆತು ನೀನು ಬದುಕುತ್ತಿದ್ದೆ. ಹೆಣ್ಣಾಗಿದ್ದರಿಂದ ಒಂದು ತೊಟ್ಟು ಹಾಲು ನಿನಗೆ ಸಿಗಲಾರದು ಎಂದು ಅತ್ಯಂತ ದುಃಖದಿಂದ ಹೇಳುತ್ತಾಳೆ. ಈ ರೀತಿ ಮುಸ್ಲಿಂ ಸಮುದಾಯದಲ್ಲೂ ಗಂಡಿನ ಆದ್ಯತೆ ಇರುವುದನ್ನು ಪ್ರತಿಬಿಂಬಿಸುತ್ತದೆ. ಹಾಗೆ ಇಂತಹ ಸಾಮಾಜಿಕ ಮೌಲ್ಯಗಳು ಆಕೆಯ ಕುಟುಂಬದಲ್ಲಿ ಇರುವುದರಿಂದ ನಸೀಮಾ ಹೆಜ್ಜೆ ಹೆಜ್ಜೆಗೂ ಭಯದ ವಾತಾವರಣದಲ್ಲಿ ಬದುಕಬೇಕಾಗುತ್ತದೆ. ಮಗು ಹುಟ್ಟುವ ಮೊದಲೆ ಆಕೆಗೆ ಗಂಡು ಮಗುವಿಗೆ ಜನ್ಮ ನೀಡಬೇಕೆಂದು ಇವಳ ಅತ್ತೆ ಮತ್ತು ಗಂಡ ಹೇಳುತ್ತಾರೆ. ಎರಡನೆಯ ಬಾರಿಯೂ ಹೆಣ್ಣು ಮಗುವಾದ್ದರಿಂದ ಅವಳ ಅತ್ತೆ ನೋಡಲು ಬರುವುದಿಲ್ಲ. ಹಾಗೆ ಪಾಷಾನನ್ನು ಮಗುವಿಗೆ ಏನು ಹೆಸರು ಇಡಬೇಕು ಎದು ಕೇಳಿದಾಗ ಗುಲಾಮಳು ಎಂದು ಇಡು ಎಂದು ಹೇಳುವುದು ಹೀಗೆ ಮುಸ್ಲಿಂ ಸಮುದಾಯದಲ್ಲಿ ಹೆಣ್ಣು ಮಕ್ಕಳನ್ನು ಹೇಗೆ ತಿರಸ್ಕಾರದ ರೂಪದಲ್ಲಿ ನೋಡುತ್ತಾರೆ ಎಂಬುದನ್ನು ತಿಳಿಯಬಹುದು. ಹಾಗೆ ಚಪ್ಪಲಿಗಳು ಕತೆಯಲ್ಲಿ ಹೆಣ್ಣು ಮಕ್ಕಳನ್ನು ಅತ್ಯಂತ ನಿಕೃಷ್ಟವಾಗಿ ನೋಡುವ ರೀತಿಯನ್ನು ಕಾಣಬಹುದು. ಮಗಳೆಂಬ ಮಾನವೀಯ ಸಂಬಂಧಕ್ಕಿಂತ ಸ್ತ್ರೀ-ಪುರುಷ ಗಂಡು-ಹೆಣ್ಣೆಂಬ ತಾರತಮ್ಯವೇ ಮಹತ್ವದಾಗಿರುತ್ತದೆ. ಹಾಗೆ ಹೆಣ್ಣು ಮಕ್ಕಳನ್ನು ನಿರ್ಬಂಧದಲ್ಲಿಟ್ಟುಕೊಳ್ಳುವ ರೀತಿಯನ್ನು ಅಳಿಯನಿಗೆ ಉಪದೇಶಿಸುತ್ತಾನೆ. ಮಹಿಳೆಯರು ಸಮಾಜ ಜೀವಿಯೆಂದು ಅಲ್ಲಗಳೆದು ನಾಲ್ಕು ಗೋಡೆಯ ನಡುವೆ ಬಂಧಿಸಿ ಹಸನ ಬ್ಯಾರಿಯ ಹಿಂಸಾತ್ಮಕ ಧೋರಣೆಯ ಹಿನ್ನೆಲೆಯಿಂದ ಮಹಿಳೆಯರು ತಮ್ಮ ಪವಿತ್ರತೆಯನ್ನು ಹಾಳು ಮಾಡಿಕೊಳ್ಳುವಳು ಎಂಬ ಮೌಢ್ಯವು ಕಾರಣವಾಗಿದೆ. ಈ ರೀತಿ ಮಹಿಳೆಯರಿಗೆ ಘೋಷಾದಲ್ಲಿಡುವುದು ಒಂದು ಸಾಮಾಜಿಕ ಮೌಲ್ಯವನ್ನಾಗಿ ಈ ಪುರುಷರು ಮಾಡಿಕೊಂಡಿದ್ದಾರೆ. ಆದರೆ ಈ ರೀತಿಯ ಆಲೋಚನೆಗಳು ಆಧುನಿಕ ಸಂದರ್ಭದಲ್ಲಿ ಅರ್ಥಹೀನವೆನಿಸುತ್ತವೆ.

'ಚಪ್ಪಲಿಗಳು' ಕತೆಯಲ್ಲಿ ಸಮೀರಾ ತನ್ನ ತಂದೆಯಂತೆ ಗಂಡನೂ ತನ್ನನ್ನು ಚಪ್ಪಲಿಯಂತೆ ನೋಡುತ್ತಿರುವರೇನೋ ಎಂದು ತನ್ನ ಗಂಡನಿಗೆ ಅನುಮಾನದಿಂದ ಕೇಳುತ್ತಾನೆ. ಆಕೆಯ ಅನುಮಾನವನ್ನು ಹೋಗಲಾಡಿಸಲು ಶಬೀರ ನನ್ನ ಪಾಲಿಗೆ ನೀನೆಂದೂ ಚಪ್ಪಲಿಯಲ್ಲ ಅಂತಹ, ಯೋಚನೆ ನಿನ್ನ ತಲೆಯಲ್ಲಿದ್ದರೆ ಈಗಲೇ ಅದನ್ನು ಬಿಟ್ಟು ಬಿಡು. ನನ್ನ ಮನೆ ಮನದ ಒಡತಿ ನೀನು ತಿಳಿಯಿತೇ? ಎಂದು ತನ್ನ ಪತ್ನಿಯನ್ನು ತನ್ನಂತೆ ಮಾನವ ಜೀವಿಯೆಂದು ತಿಳಿದಿರುತ್ತಾನೆ. ಸಮೀರಾ ಈ ರೀತಿಯಾದ ಅನುಮಾನ ವ್ಯಕ್ತಪಡಿಸಲು

---

೧೬. ಪು.ಸಂ. ೭೪, ಸಹನಾ, ಸಾರಾ ಅಬೂಬಕ್ಕರ್

ಕಾರಣವೆಂದರೆ ತನ್ನ ತಂದೆಯ ಮನೆಯಲ್ಲಿ ಹೆಣ್ಣು ಕೀಳು, ಗಂಡು ಶ್ರೇಷ್ಠ ಎಂಬ ಪರಿಸರವಿತ್ತು. ಆದರೆ ಶಬೀರನು ಹೆಣ್ಣು-ಗಂಡು ಸಮಾನರೆಂದು ಬಿಂಬಿಸಿರುವುದು ಆತನಲ್ಲಿರುವ ಮಾನವೀಯತೆಯನ್ನು ಗುರುತಿಸಬಹುದು.

'ಸಹನಾ' ಕಾದಂಬರಿಯಲ್ಲಿ ನಸೀಮಾ ತಾನು ರೋಗಿಯಾಗಿದ್ದ ಸಂದರ್ಭದಲ್ಲಿ ಮಕ್ಕಳನ್ನು ಪಾಷಾನ ಮನೆಯಲ್ಲಿಯೇ ಬಿಟ್ಟು ಬಂದಿರುತ್ತಾಳೆ. ಆ ಮಕ್ಕಳನ್ನು ಕರೆತರಲು ತನ್ನ ತಾಯಿಗೆ ಹೇಳಿದಾಗ, ಸಕೀನಾ ಗಂಡು ಮಗನನ್ನು ಮಾತ್ರ ಕರೆದುಕೊಂಡು ಬರುವುದಾಗಿ ಹೇಳುತ್ತಾಳೆ. ಆಗ ನಸೀಮಾ ಉಮ್ಮಾ ನಾನು ಹೆಣ್ಣು, ನೀನು ಹೆಣ್ಣು ಆದರೂ ನೀನೆ ಹೆಣ್ಣು ಬೇಡ ಎಂದು ಹೇಳುತ್ತಿಯಲ್ಲಾ, ಎಂದು ದುಃಖದಿಂದ ಹೇಳುತ್ತಾಳೆ. ಹೀಗೆ ತನ್ನ ಗಂಡನ ಮನೆಯಲ್ಲಿ ಹೆಣ್ಣು ಮಗುವಿಗಿದ್ದ ತಾತ್ಸಾರವನ್ನು ತಿಳಿದು ರೋಸಿಯನ್ನು ಕರೆ ತರಲು ತನ್ನ ತಾಯಿಗೆ ಹೇಳುತ್ತಾಳೆ. ನಂತರ ರೋಸಿಯನ್ನು ಸಕೀನಾ ಕರೆದುಕೊಂಡು ಬಂದ ನಂತರ ರೋಸಿಯನ್ನು ನೋಡಿದ ನಸೀಮಾ ವ್ಯಥೆ ಪಡುತ್ತಾಳೆ. "ರೋಸಿ ಇನ್ನು ಕೆಲವು ದಿನ ಅಲ್ಲಿದ್ದರೆ ಇವಳು ಸತ್ತೆ ಹೋಗುತ್ತಾಳೆ. ಗಂಡು ಮಗು ನಾಳೆ ಚಿನ್ನದ ಗವಿ ತೋಡಿ ಮನೆಯಲ್ಲಿ ಚಿನ್ನ ತಂದು ಸುರಿಯುತ್ತಾನೆ. ಅವನನ್ನು ಅವರು ಚೆನ್ನಾಗಿ ಸಾಕಿ ಸಲಹುತ್ತಾರೆ. ಇವಳು ತಾನೇ ಎಲ್ಲರಿಗೂ ಭಾರ? ಆದರೆ ನನಗೆ ಇವಳೆಂದಿಗೂ ಭಾರವಾಗಲಾರಳು ಎಂದು ನೀವೆಲ್ಲರೂ ನೆನಪಿಟ್ಟುಕೊಳ್ಳಿ"[೧೭] ತಾಯಿಗೆ ಹೇಳುವ ಆಕೆಯ ಮಾತುಗಳಲ್ಲಿ ಹೆಣ್ಣು ಮಗುವಿನ ಬಗೆಗೆ ಕಳಕಳಿ, ಪ್ರೀತಿ ಇರುವುದನ್ನು ಕಾಣುತ್ತೇವೆ. ಗಂಡು ಮಕ್ಕಳಂತೆಯೇ ಸ್ವಾವಲಂಬಿಯಾಗಿ ಬಾಳಲು ರೋಸಿಗೆ ಶಿಕ್ಷಣ ಕೊಡಿಸಲು ಮುಂದಾಗುತ್ತಾಳೆ. ಆರ್ಥಿಕ ಪರಾವಲಂಬಿಯಾಗಲು ಮಾಡಲು ಯೋಚಿಸುತ್ತಾಳೆ. ಹೀಗೆ ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಸಮಾನ ಅವಕಾಶಗಳೂ ಸಿಗಬೇಕೆಂದು ಕಾದಂಬರಿಯಲ್ಲಿ ನಿರೂಪಿಸುತ್ತದೆ.

ಕೇವಲ ಹೆಣ್ಣು-ಗಂಡೆಂಬ ಭೇದ-ಭಾವ ತೋರದೆ, ಸಮಾನತೆಯನ್ನು ತೋರುವ 'ವಜ್ರಗಳು' ಕಾದಂಬರಿಯಲ್ಲಿ ನಫೀಸಾಳ ಎರಡನೇ ಗಂಡ ಉಸ್ಮಾನರು ತಮ್ಮ ಮಕ್ಕಳನ್ನು ಸಮನಾಗಿ ಕಾಣುವುದನ್ನು ಕಾಣುತ್ತೇವೆ. ನಫೀಸಾ ಹೇಳುವಂತೆ "ಹುಟ್ಟಿದ ಮೊಮ್ಮಕ್ಕಳಿಗೆಲ್ಲ, ಹೆಣ್ಣು ಗಂಡೆಂಬ ಭೇದವಿಲ್ಲದೆ ಚಿನ್ನದ ಉಡಿದಾರ ತೋಡಿಸುತ್ತಿದ್ದರು"[೧೮] ಎಂದು ಉಸ್ಮಾನರ ಹಿರಿಮೆಯನ್ನು ನೋಡಬಹುದು

---

೧೭. ಪು.ಸಂ. ೧೪೭, ಸಹನಾ, ಸಾರಾ ಅಬೂಬಕ್ಕರ್

೧೮. ಪು.ಸಂ. ೮೩., ವಜ್ರಗಳು, ,,

ರಾಜಕೀಯ ಸಂಸ್ಕೃತಿ

ರಾಜಕೀಯ ಚಿತ್ತಾರವು 'ನಾವು ನಮ್ಮವರು', 'ಬಿತ್ತಿ ಬೆಳೆದವರು', 'ಪ್ರವಾಹ-ಸುಳಿ', 'ತಳ ಒಡೆದ ದೋಣಿಯಲಿ' ಕತೆ ಕಾದಂಬರಿಗಳಲ್ಲಿ ಕಂಡುಬರುತ್ತದೆ. 'ನಾವು-ನಮ್ಮವರು' ಕತೆಯಲ್ಲಿ ಜಫರುಲ್ಲಾನಿಗೆ ಆದ ವಂಚನೆಯನ್ನು ಕುರಿತು ಯುವಕರಿಬ್ಬರೂ ಚರ್ಚಿಸುತ್ತಿರುವಾಗ ರಾಜಕೀಯ ಕುರಿತು ಈ ರೀತಿ ಹೀಯಾಳಿಸುತ್ತಾರೆ. "ನಾವು ನಮ್ಮವರು ಎಂದು ಈ ಜನರು ಕೊಚ್ಚಿಕೊಳ್ಳುತ್ತಿದ್ದಾರಲ್ಲ? ಇವರೆಲ್ಲ ಯಾರೆಂದು ತಿಳಿದೆ? ಅಕ್ಕ-ಪಕ್ಕ ಹಳ್ಳಿಗಳಿಂದ ಲಾರಿ, ಬಸ್ಸುಗಳಲ್ಲಿ ಕರೆಸಿಕೊಂಡ ಅಮಾಯಕ ಜನರು ಅವರು ನಮ್ಮ ಹಳ್ಳಿಯ ಈ ಜನರು ಅವಿದ್ಯಾವಂತರಾಗಿರುವರಿಗೆ ನಮ್ಮ ಈ ರಾಜಕಾರಣಿಗಳು ಪಂದ್ಯಾಟಗಳಲ್ಲಿ ಸೋಲನನ್ನುಭವಿಸಬೇಕಾಗಿಲ್ಲ"[೧೯] ಚುನಾವಣೆಯಲ್ಲಿ ಅನಕ್ಷರಸ್ಥ ಮುಗ್ಧರನ್ನು ವಂಚಿಸಿ, ನಾವು ದೀನ ದಲಿತರ ಉದ್ಧಾರ ಮಾಡುತ್ತೇವೆಂದು ಹೇಳಿ ಆರಿಸಿ ಬರುತ್ತಾರೆ. ನಂತರ ತಾವು ಮಾಡಿದ ಭಾಷಣದಲ್ಲಿ ನೀಡಿದ ಆಶ್ವಾಸನೆಗಳನ್ನು ಮಾಡದೆ ಜನರನ್ನು ಹೇಗೆ ಶೋಷಣೆ ಮಾಡುತ್ತಾರೆ ಎಂಬುದನ್ನು ಇಂದಿನ ರಾಜಕೀಯ ಸಂಸ್ಕೃತಿಯ ಲಕ್ಷಣಗಳನ್ನು ಕತೆಯಲ್ಲಿ ನೋಡಬಹುದು.

'ಬಿತ್ತಿ ಬೆಳೆದವರು' ಕತೆ ನಡೆಯುವ ರಾಜಕೀಯದಲ್ಲಿ ನಡೆಯುತ್ತಿರುವ ವಾಸ್ತವತೆಯನ್ನು ಚಿತ್ರಿಸಿದ್ದಾರೆ. ಶ್ರೀಮಂತ ವ್ಯಾಪಾರಸ್ಥರಿಂದ ರಾಜಕೀಯ ಪಕ್ಷಗಳು ಫಂಡ್ ವಸೂಲಿ ಮಾಡುತ್ತಾರೆ. ಚಾಣಾಕ್ಷ ವ್ಯಾಪಾರಿಯು, ಆರಿಸಿ ಬಂದ ಪಕ್ಷದಿಂದ ಟೆಂಡರ್ ತನ್ನದಾಗಿಸುವಂತೆ ಮಾಡಿಕೊಳ್ಳುತ್ತಾನೆ. ಇಲ್ಲಿ ಶ್ರೀಮಂತ ವ್ಯಾಪಾರಸ್ಥರು ಹಾಗೂ ರಾಜಕೀಯ ವ್ಯಕ್ತಿಗಳ ಮಧ್ಯೆ ಅಮಾಯಕ ಜನರನ್ನು ಶೋಷಣೆ ಮಾಡುವುದರ ಬಗ್ಗೆ ಈ ಕತೆ ತಿಳಿಸಿಕೊಡುತ್ತದೆ.

'ಪ್ರವಾಹ-ಸುಳಿ' ಕಾದಂಬರಿಯ ನಾಯಕ ಮಮ್ಮುಟಿ ತನ್ನ ಕಳ್ಳ ವ್ಯಾಪಾರ ಸರಾಗವಾಗಿ ನಡೆಯಬೇಕು ಎಂಬ ಕಾರಣಕ್ಕಾಗಿ ನಿಷ್ಠಾವಂತ ಪೋಲೀಸ್ ಅಧಿಕಾರಿಗಳನ್ನು ಮಂತ್ರಿಗಳ ಸಹಾಯದಿಂದ ವರ್ಗ ಮಾಡಿಸುತ್ತಾನೆ. ಮುಮ್ಮಟಿ ತಾನು ಮಂತ್ರಿಯಾಗಬೇಕೆಂಬ ಆಸೆ ಮೂಡಿದಾಗ, ತನ್ನ ಪ್ರಚಾರಕ್ಕಾಗಿ ಜನರಲ್ಲಿ ಕಲಹಗಳನ್ನುಂಟು ಮಾಡಿಸುತ್ತಾನೆ.

'ತಳ ಒಡೆದ ದೋಣಿಯಲಿ' ಕಾದಂಬರಿಯಲ್ಲಿ ನಿಷ್ಠಾವಂತ ಏಕ್ಸೂಕ್ಯುಟಿವ್ ಇಂಜನಿಯರ ಸೈಪುದ್ದೀನರಿಗೆ ಭ್ರಷ್ಟ ರಾಜಕೀಯ ಅಧಿಕಾರಿಗಳು ಹಲವು ತೊಂದರೆಗಳನ್ನು ಕೊಡುತ್ತಾರೆ. ಈ ಕಾದಂಬರಿಯಲ್ಲಿ ರಾಜಕೀಯ ವ್ಯಕ್ತಿಗಳು ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಅಧಿಕಾರಿಗಳಿಂದ ಪಾದಕಾಣಿಕೆ ವಸೂಲಿ ಮಾಡುವುದು, ಲಂಚ ತೆಗೆದುಕೊಳ್ಳುವ ಅಧಿಕಾರಿಗಳು ಮಂತ್ರಿಗಳ ನಿಕಟವರ್ತಿಯಾಗಿ ಹಣ, ವಸೂಲಿ,

---

೧೯. ಪು.ಸಂ. ೮೦, ನಾವು ನಮ್ಮವರು, ಸಾರಾ ಅಬೂಬಕ್ಕರ್

ಮಾಡುವುದಕ್ಕೆ ಬೇರೆ ಸ್ಥಳಗಳಿಗೆ ವರ್ಗ ಮಾಡಿಸುತ್ತಾರೆ. ಮಂತ್ರಿಗಳ ಹೆಸರಿನಲ್ಲಿ ಶ್ರೀಮಂತ ರೈತರು ತಮ್ಮ ಗದ್ದೆಗಳಿಗೆ ಅಧಿಕಾರಿಗಳ ಅನುಮತಿಯಿಲ್ಲದೆ ಕಾಲುವೆ ನೀರು ಬಿಟ್ಟುಕೊಳ್ಳುತ್ತಾರೆ. ಇಂತಹ ರಾಜಕೀಯ ಪರಿಸರದಲ್ಲಿ ಪ್ರಾಮಾಣಿಕ ಸೈಪುದ್ದೀನ್‌ನಂತಹ ವ್ಯಕ್ತಿಗಳು ಸವಾಲಾಗಿದ್ದಾರೆಂದು ಹೇಳಬಹುದು.

ಅಧ್ಯಾಯ ೭

ಸಮಾರೋಪ

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಅಧ್ಯಾಯ ೭

ಸಮಾರೋಪ

ಸಾರಾ ಅವರ ಗಮನ ಸೆಳೆದ ಪ್ರಮುಖ ಅಂಶಗಳೆಂದರೆ ಮುಸ್ಲಿಂ ಸಮುದಾಯದ ಕೆಳವರ್ಗದ ಸ್ತ್ರೀಯರ ವಿಶೇಷವಾಗಿ ಬಡಜನರ ಬದುಕಿನ ಸಮಸ್ಯೆ, ಹಾಗೂ ಪಿತೃಪ್ರಧಾನ ವ್ಯವಸ್ಥೆಯ, ಪುರುಷರ ದೌರ್ಜನ್ಯ. ಅಮಾನವೀಯ ಸ್ವರೂಪಗಳನ್ನು ಪ್ರತಿರೋಧಿಸುವುದು ಸಾರಾ ಅವರ ಬರಹದ ಮುಖ್ಯ ಕಾಳಜಿಯಾಗಿದೆ. ಪ್ರೌಢ ವಯಸ್ಸಿನಲ್ಲಿ ಸಾಹಿತ್ಯ ಬರೆಯಲು ಪ್ರಾರಂಭಿಸಿದ ಅವರು ತಮ್ಮ ಗಾಢವಾದ ಬದುಕಿನ ಅನುಭವಗಳಿಂದ ಮುಸ್ಲಿಂ ಸಮಾಜದ ಸಾಮಾಜಿಕ, ಧಾರ್ಮಿಕ ಕಟ್ಟಳೆಗಳಲ್ಲಿರುವ ತಾರತಮ್ಯ ನೀತಿ ಮಹಿಳೆಯರ ಮೇಲೆ ಎಸಗಲಾಗುವ ದೌರ್ಜನ್ಯಗಳನ್ನು ತೀವ್ರತರವಾಗಿ ಖಂಡಿಸಿದ್ದಾರೆ. ಮಾನವೀಯತೆಯ ತೀವ್ರ ತುಡಿತ ಹಾಗೂ ಮುಸ್ಲೀಂ ಸಮಾಜದ ಜೀವ ವಿರೋಧಿ ಧಾರ್ಮಿಕ, ಸಾಮಾಜಿಕ ನಿಯಮಗಳ ಪರಿಷ್ಕರಣೆಯ ಆಶಯ ಸ್ತ್ರೀಯರ ಪ್ರಗತಿಯ ಅಪೇಕ್ಷೆಯಾಗಿದೆ. ಅಂತೆಯೇ ವಸ್ತು, ಧೋರಣೆ, ದೃಷ್ಟಿಯಿಂದ ಸಾರಾ ಅವರ ಕಥನ ಸಾಹಿತ್ಯ ತಮ್ಮದೇ ಆದ ವೈಶಿಷ್ಟ್ಯತೆಯಿಂದ ಕೂಡಿದೆ. ತಲಾಖ್ ಬಗ್ಗೆ ಸಾರಾ ಅವರಿಗಿಂತ ಮೊದಲು ಬರೆದ ಲೇಖಕರು ತಮ್ಮ ಕತೆಗಳಲ್ಲಿ ಈ ಸಮಸ್ಯೆಯನ್ನು ಕುರಿತು ಹೇಳಿದರು. ಅವು ಅಷ್ಟು ಪರಿಣಾಮಕಾರಿಯಾಗಿ ಪ್ರಭಾವ ಬೀರಲಿಲ್ಲ. ಆದರೆ ಸಾರಾ ಅವರು 'ತಲಾಖ್' ವಸ್ತು ಕುರಿತು ರಚಿಸಿರುವ ಕಥನ ಸಾಹಿತ್ಯದಲ್ಲಿ ತಲಾಖ್ ಪಡೆದ ಮಹಿಳೆಯರ ಸಂಕಟ ನೋವುಗಳನ್ನು ಮನಮಿಡಿಯುವಂತೆ ಚಿತ್ರಿಸುತ್ತಾರೆ. ಹೀಗಾಗಿ ಈ ಕತೆ, ಕಾದಂಬರಿಗಳು ತಲಾಖ್ ಸಮಸ್ಯೆ ಕುರಿತು ಗಂಭೀರ ಚಿಂತನೆ ಮಾಡಲು ಪ್ರೇರೇಪಿಸುತ್ತವೆ. ಸಾರಾ ಅವರ ಅನೇಕ ಕತೆ, ಕಾದಂಬರಿಗಳಲ್ಲಿ ಮುಸ್ಲಿಂ ಜನರ ಬಡತನ, ಅಜ್ಞಾನದಿಂದ ನರಳುವ ಜೀವನ ಕ್ರಮಗಳು ಒಂದೇ ರೀತಿಯಾಗಿದ್ದರೂ ಅವುಗಳ ವಸ್ತು ವಿಷಯಗಳು ಹೊಸದಾಗಿರುವಂತೆ ಭಾಷೆಯೂ ಸರಳವಾಗಿದೆ. ಇವರ ಮನೆಯ ಮಾತು ಕನ್ನಡವಲ್ಲದಿದ್ದರೂ, ಕನ್ನಡ ಭಾಷೆಯಲ್ಲಿ ಕತೆ, ಕಾದಂಬರಿಗಳನ್ನು ಅತ್ಯಂತ ಸೊಗಸಾಗಿ ಹೆಣೆದಿದ್ದಾರೆ.

ಮುಸ್ಲಿಂ ಸಮುದಾಯದಲ್ಲಿ ಘೋಷಾ ಪದ್ಧತಿ, ಬಹುಪತ್ನಿತ್ವ, ಬಹುಸಂತಾನ, ತಲಾಖ್, ಬಾಲ್ಯವಿವಾಹ ಇವು ರೂಢಿಯಲ್ಲಿವೆ. ಘೋಷಾ ಪದ್ಧತಿ, ಬಹುಸಂತಾನ, ಬಾಲ್ಯ ವಿವಾಹ ಇವು ಕಡ್ಡಾಯ ನಿಯಮಗಳೇನೋ ಎನ್ನುವಷ್ಟರ ಮಟ್ಟಿಗೆ ಮುಸ್ಲಿಂ ಸಮುದಾಯದಲ್ಲಿ ಚಾಲ್ತಿಯಲ್ಲಿರುವುದನ್ನು

ಸಾರಾ ಅವರ ಕಥನ ಸಾಹಿತ್ಯದಲ್ಲಿ ಕಾಣಬಹುದು. ಮಹಿಳೆಯರು ಬುರ್ಕಾ ಧರಿಸುವುದು, ಘೋಷಾದಲ್ಲಿರುವುದು ಮುಸ್ಲಿಂ ಸಮುದಾಯದ ಸಂಪ್ರದಾಯ. ಅಂದು ಮಹಮ್ಮದ್ ಪೈಗಂಬರರು ಪುರುಷರ ಲೈಂಗಿಕ ಆಕ್ರಮಣದಿಂದ ಮಹಿಳೆಯರನ್ನು ಸಂರಕ್ಷಿಸಲು ಘೋಷಾ ಪದ್ಧತಿಯನ್ನು, ಬುರ್ಕಾ ಧರಿಸುವುದನ್ನು ಜಾರಿಗೆ ತಂದಿದ್ದರು. ಆದರೆ ಮುಂದೆ ಇದು ಮುಸ್ಲಿಂ ಸಮಾಜದ ಸಂಪ್ರದಾಯವಾಗಿ ಉಳಿದು ಬಂದಿದೆ. ಇತ್ತೀಚೆಗೆ ಮೂಲಭೂತವಾದಿಗಳು ಈ ಪದ್ಧತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮಾಡುತ್ತಿದ್ದಾರೆ. ಇದರಿಂದಾಗಿ ಮಹಿಳೆಯರ ಬದುಕು ಕುಟುಂಬಕ್ಕೆ ಸೀಮಿತವಾಗಿ ಕೇವಲ ಧರ್ಮಗ್ರಂಥ ಓದಲು ಬೇಕಾದ ಅಕ್ಷರ ಜ್ಞಾನ ಮಾತ್ರ ಮಹಿಳೆಯರ ಶಿಕ್ಷಣವಾಗಿರಬೇಕೆನ್ನುವ ಸಾಂಸ್ಕೃತಿಕ ನಂಬುಗೆಗಳು 'ಚಪ್ಪಲಿಗಳು', 'ಅರಕ್ಷಿತ', 'ಹಳೆ ಬೇರು ಹೊಸ ಚಿಗುರು', 'ನೀಲಿ ಚಿತ್ರದ ಕೆಂಪು ಬಣ್ಣ' ಮುಂತಾದ ಕತೆಗಳಲ್ಲಿ ಹಾಗೂ 'ಚಂದ್ರಗಿರಿ ತೀರದಲ್ಲಿ', 'ವಜ್ರಗಳು, 'ಸುಳಿ' ಈ ಕಾದಂಬರಿಯಲ್ಲಿ ಕಂಡುಬರುತ್ತವೆ.

ಆಧುನಿಕ ಸಂದರ್ಭದಲ್ಲಿಯೂ ಮುಸ್ಲಿಂ ಸಮುದಾಯದಲ್ಲಿ ಮಹಿಳೆಯರು ಹೊರ ಪ್ರಪಂಚದಲ್ಲಿ ಮುಕ್ತವಾಗಿ ಸಂಚರಿಸಲು ನಿಷೇಧವಿದೆಯೆನ್ನುವುದು ಗಮನಾರ್ಹ ಸಂಗತಿ. 'ಚಪ್ಪಲಿಗಳು' ಕತೆಯ ಹಸನಬ್ಯಾರಿ ತನ್ನ ಮಗಳು, ತನ್ನ ಗಂಡನ ಜೊತೆ ಹೊರ ಪ್ರಪಂಚಕ್ಕೆ ಹೋಗದಂತೆ ಆಕ್ಷೇಪಿಸುತ್ತಾನೆ. ಅಷ್ಟೇ ಅಲ್ಲದೆ ಅಳಿಯನಿಗೆ ಹೆಣ್ಣುಮಕ್ಕಳನ್ನು ಚಪ್ಪಲಿಯಂತೆ ಉಪಯೋಗಿಸಬೇಕೆಂದು ಉಪದೇಶಿಸುತ್ತಾನೆ. ಇಲ್ಲಿ ಹಸನಬ್ಯಾರಿಗೆ ತಮ್ಮ ಮಗಳ ಸುಖ ಸಂತೋಷಕ್ಕಿಂತ ತಮ್ಮ ಸಂಪ್ರದಾಯವನ್ನು ರಕ್ಷಿಸುವುದು ಮುಖ್ಯವಾಗಿರುತ್ತದೆ. ಘೋಷಾದಲ್ಲಿರಬೇಕಾದ ಕಾರಣಕ್ಕಾಗಿಯೇ ಮಹಿಳೆಯರು ಹೊರ ಪ್ರಪಂಚದ ಜ್ಞಾನದಿಂದ ವಂಚಿತರಾಗಿ ಹಲವು ತೊಂದರೆಗಳನ್ನು ಅನುಭವಿಸುತ್ತಿರುವ ದುರಂತವು 'ಅರಕ್ಷಿತ', 'ನೀಲಿ ಚಿತ್ರದ ಕೆಂಪು ಬಣ್ಣ' ಎಂಬ ಕತೆಗಳಲ್ಲಿ ಪ್ರತಿಬಿಂಬಿತವಾಗಿದೆ. 'ಚಂದ್ರಗಿರಿಯ ತೀರದಲ್ಲಿ', 'ವಜ್ರಗಳು', 'ಸುಳಿಯಲ್ಲಿ ಸಿಕ್ಕವರು' ಈ ಕಾದಂಬರಿಗಳಲ್ಲಿ ಘೋಷಾ ಪದ್ಧತಿ ಕುರಿತು ಪ್ರಸ್ತಾಪವಿದೆ. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯಲ್ಲಿ ಘೋಷಾ ಪದ್ಧತಿಯ ಕಾರಣವಾಗಿ ನಾದಿರಾ ತನ್ನ ಗಂಡ ನದಿ ಆಚೆ ನಿಂತು ಕರೆದರೂ ಹೋಗುವುದಿಲ್ಲ. 'ವಜ್ರಗಳು' ಕಾದಂಬರಿಯಲ್ಲಿ ಹುಸೇನ್ ತನ್ನ ಹೆಂಡತಿ ಹಾಗೂ ಸೋದರಿಯರಿಗೆ ವಿಧಿಸಿದ ಘೋಷಾ ಪದ್ಧತಿಯು ಒಂದು ಶಿಕ್ಷೆಯಾಗಿ ಕಂಡುಬರುತ್ತದೆ. ಒಟ್ಟಾರೆ ಮುಸ್ಲಿಂ ಸಮುದಾಯದಲ್ಲಿ ಮಹಿಳೆಯರು ಸಮಾಜ ಜೀವಿಯೆನ್ನುವುದನ್ನು ಅಲ್ಲಗೆಳೆದಂತಿದೆ. ಮಹಿಳೆಯರನ್ನು ಆಶೆ ಆಕಾಂಕ್ಷೆಗಳಿಲ್ಲದ ಸೂತ್ರದ ಗೊಂಬೆಯನ್ನಾಗಿಸಿ, ಭೋಗದ ವಸ್ತುವನ್ನಾಗಿಸಿ, ಹೆರುವ ಯಂತ್ರವಾಗಿಸಿ ನಾಲ್ಕು ಗೋಡೆಗಳ ಮಧ್ಯದಲ್ಲಿರಬೇಕೆನ್ನುವ ಅಪೇಕ್ಷೆಯೇ ಸಮಾಜದ ನಂಬುಗೆಯಾಗಿ ಉಳಿದಿರುವಂತೆ ತೋರುತ್ತದೆ. ಮುಸ್ಲಿಂ ಸಮಾಜದಲ್ಲಿ ವ್ಯಾಪಕವಾಗಿರುವ ಘೋಷಾ ಪದ್ಧತಿಯಂತೆ ಮಹಿಳೆಯರು ಬುರ್ಕಾ ಹಾಕಿಕೊಳ್ಳುವುದು ಸರ್ವೇಸಾಮಾನ್ಯವಾಗಿದೆ. ಬಡನತದಲ್ಲಿರುವವರೂ ಸಹ ತೂತಾಗಿದ್ದರೂ ಸರಿ ಬುರ್ಕಾ ಧರಿಸುವುದು ಸಭ್ಯತೆಯ ಸಂಕೇತವಾಗಿರುವುದು ಕತೆ ಕಾದಂಬರಿಗಳಿಂದ ತಿಳಿಯಬಹುದಾಗಿದೆ.

ಬಹುಪತ್ನಿತ್ವ ಪದ್ಧತಿಯು 'ಉರಿ ಬಿಸಿಲು', 'ಹುಟ್ಟು', 'ಸಹನಾ', 'ಸುಳಿಯಲ್ಲಿ ಸಿಕ್ಕವರು' ಕಾದಂಬರಿಗಳಲ್ಲಿ ಕಂಡುಬರುತ್ತದೆ. ಬಹುಪತ್ನಿತ್ವ ಪದ್ಧತಿಗೆ ಇಸ್ಲಾಂ ಧರ್ಮ ಅನುಮತಿ ಕೊಟ್ಟಿದೆ. ಒಬ್ಬ ಪುರುಷ ನಾಲ್ಕು ವಿವಾಹಗಳನ್ನು ಮಾಡಿಕೊಳ್ಳಬಹುದೆಂದು ಹೇಳಿದರೂ ಅವರೆಲ್ಲರನ್ನೂ ಚೆನ್ನಾಗಿ ನೋಡಿಕೊಳ್ಳಬೇಕೆನ್ನುವ ನೈತಿಕ ಹೊಣೆಗಾರಿಕೆಯನ್ನು ವಿಧಿಸಿ.

ತಲಾಖ್ ಪದ್ಧತಿ ಮುಸ್ಲಿಂ ಸಮಾಜದ ಹೆಣ್ಣುಮಕ್ಕಳಿಗೆ ಶಾಪವಾಗಿದೆ ತಮ್ಮ ಸ್ವಾರ್ಥಕ್ಕಾಗಿ ಮುಸ್ಲಿಂ ಪುರುಷರು ತಮ್ಮ ಪತ್ನಿಯ ಒಪ್ಪಿಗೆ ಪಡೆಯದೆ ನಿಂತ ನಿಲುವಿನಲ್ಲಿ ತಲಾಖ್ ಹೇಳುತ್ತಾರೆ. ಇದರಿಂದ ತಲಾಖ್ ಹೊಂದಿದ ಮಹಿಳೆಯರು ಆಶ್ರಯವಿಲ್ಲದೆ ಅನೇಕ ತೊಂದರೆಗಳನ್ನು ಎದುರಿಸುವಂತಾಗುತ್ತದೆ. ಈ ಸಮಸ್ಯೆ 'ಧ್ವನಿಯಿಲ್ಲದ ನೋವುಗಳು', 'ಗೋಡೆ', 'ಬಿರುಗಾಳಿ', 'ಚಂದ್ರಗಿರಿ ತೀರದಲ್ಲಿ', 'ವಜ್ರಗಳು' ಕತೆ ಕಾದಂಬರಿಗಳಲ್ಲಿ ಕಂಡುಬರುತ್ತದೆ. ತಲಾಖ್ ಪೀಡಿತ ಹೆಣ್ಣುಮಕ್ಕಳ ಆಕ್ರಂದನ, ಅಳಲು ಕೇಳಿ ಸಾಂತ್ವನ ಹೇಳದಂತ ಪರಿಸ್ಥಿತಿಯಲ್ಲಿ ಮನೆ ಹಿರಿಯರಿರುತ್ತಾರೆ. ಕಾರಣ ಸಮಾಜವು ಅನುಸರಿಸಿಕೊಂಡ ಬಂದ ಸಂಪ್ರದಾಯ-ನಂಬುಗೆಗಳಿಂದ ಪಾಲಕರು ಸಂದಿಗ್ಧತೆಯಲ್ಲಿ ತೊಳಲಾಡುವಂತಾಗುತ್ತದೆ. ಏಕೆಂದರೆ ಪತಿ ತನ್ನ ಸತಿಗೆ ತಲಾಖ್ ಹೇಳಿದರೆ, ಅವರಿಬ್ಬರ ಸಂಬಂಧ ಮುರಿಯುತ್ತದೆ. ಮತ್ತೆ ಅವರಿಬ್ಬರನ್ನು ಕೂಡಿಸಬೇಕಾದರೆ ಪತ್ನಿಯಾದವಳು ಇನ್ನೊಬ್ಬ ಪುರುಷನ ಜೊತೆ ವಿವಾಹವಾಗಿ, ಆತನಿಂದ ತಲಾಖ್ ಪಡೆದ ನಂತರ ಮೊದಲ ಪತಿಯನ್ನು ವಿವಾಹವಾಗಬಹುದು.

ಇಂತಹ ಕಠೋರ ನಿಯಮಕ್ಕೆ ಸಿಲುಕಿದ 'ಚಂದ್ರಗಿರಿ ತೀರದಲ್ಲಿ' ಕಾದಂಬರಿಯ ನಾದಿರಾ ಮಸೀದಿ ಕೊಳದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಎರಡನೆಯ ಮದುವೆಯಾಗಿ ಅವನೊಂದಿಗೆ ಒಂದು ರಾತ್ರಿ ಕಳೆಯಬೇಕೆನ್ನುವ ವಿವಾಹ ವಿಧಿಗೆ ನೊಂದು ಎದುರಿಸಲಾಗದೇ ಸಾಯುತ್ತಾಳೆ. ಆದರೆ 'ಸುಳಿಯಲ್ಲಿ ಸಿಕ್ಕವರು' ಕಾದಂಬರಿಯ ತಲಾಖ್ ಹೊಂದಿದ ಅಡುಗೆ ಆಳು ಅಚ್ಚಮ್ಮ, ತಾನು ಬದುಕಬೇಕಾದ ಕಾರಣದಿಂದಾಗಿ ಅನೈತಿಕ ಸಹವಾಸ ಮಾಡುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮುಸ್ಲಿಂ ಸಮಾಜದಲ್ಲಿ ವಿಭಿನ್ನ ವರ್ಗದ ಸ್ತ್ರೀ ಸಮಸ್ಯೆಗಳು ಒಂದೇ ಆಗಿದ್ದರೂ ಅದನ್ನು ಅನುಸರಿಸುವ ಕ್ರಮಗಳು ಭಿನ್ನವಾಗಿವೆ. ಬಡ ಅಚ್ಚಮ್ಮನಿಗೆ ತಾನು ಮಾಡುತ್ತಿರುವುದು ತಪ್ಪೆಂದು ಗೊತ್ತಿದ್ದರೂ, ಹೊಟ್ಟೆ ಪಾಡಿಗಾಗಿ ಅನೈತಿಕ ಕೆಲಸದಲ್ಲಿ ಮುಂದುವರೆಯುತ್ತಾಳೆ. ಆದರೆ ನಾದಿರಾ ತನ್ನ ಮಗು ಹಾಗೂ ಮೊದಲ ಪತಿಯ ಒಟ್ಟಿಗೆ ಬಾಳುವ ಆಸೆಗಾಗಿ ಆಕೆ ಹಿರಿಯರ ಸಮ್ಮುಖದಲ್ಲಿ ಮತ್ತೊಮ್ಮೆ ವಿವಾಹವಾದರೂ ಎರಡನೆಯ ಪತಿಯ ಜೊತೆ ವೈವಾಹಿಕ ಸಂಬಂಧವನ್ನು ಮಾನಹೀನಯೆಂದು ಬಗೆದು, ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ನಾದಿರಾ ತನ್ನ ಭಾವನಾತ್ಮಕ ಮತ್ತು ದೈಹಿಕ ಪಾವಿತ್ರ್ಯಕ್ಕೆ ಹೆಚ್ಚು ಮಹತ್ವ ಕೊಟ್ಟರೆ, ಅಚ್ಚಮ್ಮ ತನ್ನ ಬದುಕಿನ ಆಶ್ರಯಕ್ಕಾಗಿ ಅನೈತಿಕ ಸಂಬಂಧವನ್ನು ಒಪ್ಪುತ್ತಾಳೆ. ಸತಿಪತಿಗಳಿಬ್ಬರೂ ತಲಾಖ್ ಕೊಡಲು ನಿರ್ಧರಿಸಿದಾಗ ಮೂರು ತಿಂಗಳಲ್ಲಿ ಪ್ರತ್ಯೇಕ ಪ್ರತ್ಯೇಕ ತಲಾಖ್ ಎಂದು ಹೇಳಬೇಕೆ ಹೊರತು ಒಂದೇ ಬಾರಿಗೆ ಮೂರು ಬಾರಿ ತಲಾಖ್ ಎಂದು ಹೇಳುವದಲ್ಲವೆಂದು ಮೌಲವಿಗಳು ಹೇಳುತ್ತಾರೆ. ಮೂರು ತಿಂಗಳು ಕಾಲಾವಕಾಶಕೊಟ್ಟ ಕಾರಣವೆಂದರೆ ದಂಪತಿಗಳಲ್ಲಿ

ಉಂಟಾಗಿರುವ ಭಿನ್ನಾಭಿಪ್ರಾಯಗಳು ಸಡಿಲಗೊಂಡು ಪರಸ್ಪರ ಅನ್ಯೋನ್ಯತೆಯಿಂದ ಬಾಳಬಹುದೆಂಬ ಉದ್ದೇಶವಿದೆಯೆಂದು ತೋರುತ್ತದೆ. ಧಾರ್ಮಿಕ ಗ್ರಂಥದಲ್ಲಿರುವಂತೆ ತಾವು ಅನುಸರಿಸುತ್ತೇವೆ ಎಂದು ಹೇಳುವ ಪುರುಷರು ಇಂತಹ ನಿಯಮಗಳನ್ನು ತಮ್ಮ ಸ್ವಾರ್ಥಕ್ಕಾಗಿ ಪರಿವರ್ತನೆ ಮಾಡಿಕೊಂಡಿದ್ದಾರೆ. ಈ ರೀತಿ ನಿಯಮಗಳನ್ನು ಅಸ್ತ್ರವಾಗಿಸಿಕೊಂಡ ಪುರುಷರು ಮಹಿಳೆಯರನ್ನು ಶೋಷಿಸುತ್ತಾರೆ. ಇಂತಹ ಪದ್ಧತಿ ಮಾನವ ಸಂಸ್ಕೃತಿಗೆ ವಿರುದ್ಧವಾದುದು. ಯಾವುದೇ ಆರ್ಥಿಕ ಭದ್ರತೆ ಇಲ್ಲದೆ ಮಹಿಳೆಯರಿಗೆ ಗಂಡನ ಮನೆ ಇಲ್ಲವೇ ತವರು ಮನೆ ಎರಡೇ ಆಧಾರವಾಗಿರುತ್ತದೆ. ಆದರೆ ಅಲ್ಲಿ ಬಡತನವಿದ್ದರೆ ಆಕೆಯ ಆಶ್ರಯ ಅಲುಗಾಡಿದಂತೆಯೇ. ಇಸ್ಲಾಂ ಧರ್ಮದಲ್ಲಿ ಮಹಿಳೆಯರಿಗೆ ಮರುವಿವಾಹಕ್ಕೆ ಅವಕಾಶವನ್ನು ನೀಡಲಾಗಿದೆ. ಆದರೆ ವಿಚ್ಛೇದನ ಹೊಂದಿದ ಮಹಿಳೆಯರನ್ನು ಇಂದೋ ನಾಳೆ ಸಾಯುವ ಮುದುಕನಿಗೆ ವಿವಾಹ ಮಾಡುವುದನ್ನು ಕಾಣುತ್ತೇವೆ. ಹೀಗೆ ಮಹಿಳೆಯರು ತಮ್ಮ ಆಶ್ರಯಕ್ಕಾಗಿ ಹಲವು ವಿವಾಹಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲವೆ ಆ ಮಹಿಳೆಯರು ಅನೀತಿ ಮಾರ್ಗದಲ್ಲಿ ಬಾಳಬೇಕಾಗುವ ಸಂದರ್ಭಬರಬಹುದು. ಇಸ್ಲಾಂ ಮಹಿಳೆಯರು ವ್ಯವಸ್ಥೆಯ ಬಲಿಪಶುವಾಗಿರುವುದನ್ನು ಸಾರಾ ಅವರು ತಮ್ಮ ಕಥನ ಸಾಹಿತ್ಯದಲ್ಲಿ ತೋರಿಸಿದ್ದಾರೆ.

ಸಾರಾ ಅವರು ಮುಸ್ಲಿಂ ಮತ್ತು ಮುಸ್ಲಿಂಯೇತರ ಕಾಳಜಿಯಿಂದ ಸಾಹಿತ್ಯ ರಚನೆ ಮಾಡಿರುವುದನ್ನು ಕಾಣುತ್ತೇವೆ. ಒಟ್ಟು ಅವರ ಸಾಹಿತ್ಯದ ಕೇಂದ್ರ ಮಹಿಳೆ. ಅಂದರೆ ಸಾಮಾಜಿಕ, ಧಾರ್ಮಿಕ ನಿಯಮಗಳಿಂದ ಮಹಿಳೆಯರು ಅನುಭವಿಸುವ ಕಷ್ಟಗಳನ್ನು, ಸಾವು ನೋವುಗಳ ಜೊತೆಗೆ ಸಮಾಜದಲ್ಲಿ ಬೇರುಬಿಟ್ಟಿರುವ ಅಜ್ಞಾನವನ್ನು ಪರಿಚಯಿಸುತ್ತಾರೆ. ಮಹಿಳೆಯರು ತಮ್ಮ ಬಾಲ್ಯಾವಸ್ಥೆಯಲ್ಲಿಯೇ ವಿವಾಹವಾಗಿ ಕೆಲವು ವರ್ಷಗಳಲ್ಲಿಯೇ ತನ್ನ ಕುಟುಂಬದಲ್ಲಿ ತನ್ನ ಸ್ಥಾನ ಕಳೆದುಕೊಂಡು ಅವಸಾನದತ್ತ ಸಾಗುತ್ತಾಳೆನ್ನುವುದನ್ನು ತಮ್ಮ ಕಥನ ಸಾಹಿತ್ಯದಲ್ಲಿ ನಿರೂಪಿಸಿದ್ದಾರೆ. ಹಲವು ಯುವತಿಯರು ವಿದ್ಯೆ ಕಲಿಯುವ ಇಚ್ಛೆಯುಳ್ಳವರಾಗಿದ್ದರೂ, ಬಡತನ ಹಾಗೂ ಮದುವೆಯ ನೆಪದಿಂದ ವಿದ್ಯೆಯಿಂದ ವಂಚಿತರಾಗಿದ್ದಾರೆ. ಈ ಮಹಿಳೆಯರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ, ಆರ್ಥಿಕವಾಗಿ ಕೂಡ ಸ್ವಾವಲಂಬಿಗಳಾಗಬೇಕೆಂಬ ಆಶಯವನ್ನು ಕತೆ, ಕಾದಂಬರಿಯಲ್ಲಿ ನೋಡುತ್ತೇವೆ.

ಸಾರಾ ಅವರ ಕಥಾ ಸಾಹಿತ್ಯದ ಪ್ರಮುಖ ವೈಶಿಷ್ಟ್ಯವನ್ನು ಇಲ್ಲಿ ಗಮನಿಸಬಹುದು. ಲೇಖಕಿ, ಕಥನ ಸಾಹಿತ್ಯದಲ್ಲಿ ಸಮಸ್ಯೆಗಳನ್ನು ಹೇಳುವಲ್ಲಿ ಬಹುಜಾಗ್ರತೆ ವಹಿಸಿರುವುದನ್ನು ಕಾಣುತ್ತೇವೆ. ಸಮಸ್ಯೆಯ ಉದ್ಭವಕ್ಕೆ ಕಾರಣ ಹಾಗೂ ಪರಿಹಾರೋಪಾಯಗಳನ್ನು, ಸಂದರ್ಭಕ್ಕನುಸಾರವಾಗಿ ಸೂಚಿಸಿದ್ದಾರೆ. ಒಂದೇ ವಸ್ತುವನ್ನಾಧರಿಸಿ ಹಲವು ಕತೆಗಳನ್ನು ಹೆಣೆದಿದ್ದರೂ, ಆ ವಸ್ತುವಿನ ವಿವಿಧ ಮುಖಗಳನ್ನು ಪರಿಚಯಿಸುತ್ತಾರೆ. ಉದಾ. ತಲಾಖ್ ವಸ್ತು ಕುರಿತು 'ಧ್ವನಿಯಿಲ್ಲದ ನೋವುಗಳು', 'ನಿಯಮ

ನಿಯಮಗಳ ನಡುವೆ', 'ಅಂಕುರ', 'ಚಂದ್ರಗಿರಿಯ ತೀರದಲ್ಲಿ', 'ಸಹನಾ', 'ವಜ್ರಗಳು', 'ಸುಳಿ' ಕತೆ ಕಾದಂಬರಿಗಳನ್ನು ರಚಿಸಿದ್ದಾರೆ. ಈ ಎಲ್ಲ ಕಥನ ಸಾಹಿತ್ಯದಲ್ಲಿ ತಲಾಖ್ ವಸ್ತು ಹೊಂದಿದ್ದರೂ ತಲಾಖ್ ಕೊಡುವ ಸಂದರ್ಭಗಳು ವಿಭಿನ್ನವಾಗಿವೆ. ತಲಾಖ್ ಕೊಡುವ ಮುನ್ನ ತಮ್ಮ ಪತ್ನಿಯರ ಅನುಮತಿ ಪಡೆಯುವುದನ್ನು ಯಾವ ಕತೆಯಲ್ಲಿಯೂ ಕಾಣುವುದಿಲ್ಲ.

'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯು 'ತಲಾಖ್' ವಸ್ತು ಹೊಂದಿದ್ದರೂ ಅದು ತಲಾಖ್ ಆಚರಣೆಯನ್ನು ವಿಶ್ಲೇಷಿಸುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಧರ್ಮದ ಕಟ್ಟಾಚರಣೆಯಿಂದ ಮುಗ್ಧ ಮಹಿಳೆಯರು ಧ್ವನಿ ಕಳೆದುಕೊಂಡಿದ್ದಾರೆನ್ನುವುದನ್ನು ಪ್ರತಿಪಾದಿಸಿದ್ದಾರೆ. 'ಸಹನಾ' ಕಾದಂಬರಿಯು ಬಡತನ, ಬಹುಪತ್ನಿತ್ವ ಸಮಸ್ಯೆಗಳನ್ನೊಳಗೊಂಡಿದೆ. ಹೆಣ್ಣುಮಕ್ಕಳು ಮೂಕ ಕುರಿಗಳಾಗದೇ ವೈಚಾರಿಕ ನೆಲೆಯಲ್ಲಿ ಯೋಚಿಸಬೇಕೆಂಬುದನ್ನು ಕಾದಂಬರಿ ಮೂಲಕ ಬಿಂಬಿಸಿದ್ದಾರೆ. ನಸೀಮಾ ಬಲಿಯಾಗದೆ ತನ್ನ ಗಂಡನ ನೀತಿಯನ್ನು ಸವಾಲಾಗಿ ತೆಗೆದುಕೊಳ್ಳುತ್ತಾಳೆನ್ನುವುದು ಗಮನಾರ್ಹ. ಮದುವೆಯೇ ಆದಿ, ಅಂತ್ಯ ಎನ್ನುವ ಮಹಿಳೆಯರು ಗಂಡಸರ ಆಟದ ಕಾಲ್ಚೆಂಡಾಗಿ ಬಳಕೆಯಾಗುತ್ತಾರೆ. ವಿವಾಹ ವ್ಯವಸ್ಥೆ ಹೆಣ್ಣಿಗೆ ಭದ್ರ ನೆಲೆಯಾಗಿಲ್ಲ. ತಲಾಖ್‌ನಿಂದಾಗಿ ಪತ್ನಿಯ ನೆಲೆ ಅಲುಗಾಡುತ್ತದೆ. ಹೀಗಾಗಿ ಬದುಕಿನ ಭರವಸೆಗಾಗಿ ಆಶ್ರಯಕ್ಕಾಗಿ ಹೆಣ್ಣುಮಕ್ಕಳು ಅನೇಕ ವಿವಾಹಗಳನ್ನಾಗುತ್ತಾ, ಪ್ರಯೋಗದ ವಸ್ತುವಾಗುತ್ತಾರೆನ್ನುವುದು 'ವಜ್ರಗಳು' ಕಾದಂಬರಿ ನಿರೂಪಿಸುತ್ತದೆ. ಹೀಗೆ ಸಮಸ್ಯೆಯ ವಿವಿಧ ಮುಖಗಳನ್ನು, ಪರಿಹಾರೋಪಾಯಗಳನ್ನು ಹೇಳುವ ರೀತಿ ಸಾರಾ ಅವರ ಕಥಾ ಸಾಹಿತ್ಯದ ವಿಶಿಷ್ಟ ಗುಣಗಳಾಗಿವೆ.

ಲೇಖಕಿ ಸ್ತ್ರೀ ಸಮಸ್ಯೆಗಳ ವಿವಿಧ ನೆಲೆಗಳನ್ನು ಹಲವು ಆಯಾಮಗಳಿಂದ ನೋಡುವ ಕಾರಣ 'ಚಪ್ಪಲಿಗಳು' ಕಥೆಯ ಸಮೀರಾ ದಾಂಪತ್ಯದ ಸುಖ ಸಿಗದಿದ್ದಾಗ ಮಾನಸಿಕವಾಗಿ ರೋಗಿಯಾಗುತ್ತಾಳೆ. ಮುಗ್ಧ ರಫೀನಾ ಲೈಂಗಿಕ ಚಿತ್ರವನ್ನು ನೋಡಿ ಮಾನಸಿಕ ಆಘಾತಕ್ಕೊಳಗಾಗುತ್ತಾಳೆ. ಹೀಗೆ ಸಾರಾ ಅವರ ಕತೆಗಳು ಗಂಡು ಹೆಣ್ಣಿನ ಸಂಬಂಧಗಳಲ್ಲಿ ಹುಟ್ಟಿಕೊಳ್ಳುವ ಹಲವು ಬಗೆಯ ಸಮಸ್ಯೆಯನ್ನು ವಿವಿಧ ಆಯಾಮಗಳಲ್ಲಿ ಚಿತ್ರಿಸುತ್ತವೆ.

ಅನುಬಂಧಗಳು

ಕಾದಂಬರಿಗಳು

ಕಥಾ ಸಂಕಲನಗಳು

ಲೇಖನ ಸಂಗ್ರಹಗಳು

ಪ್ರವಾಸ ಕಥನ

ಅನುವಾದಿತ ಕೃತಿಗಳು (ಮಲೆಯಾಳಂ ಭಾಷೆಯಿಂದ ಕನ್ನಡಕ್ಕೆ)

೧. ಮನೋಮಿ

೨. ಬಲೆ

೩. ಚಂದ್ರಗಿರಿ ತೀರದಲ್ಲಿ ಕಾದಂಬರಿಯೂ, ಮಲಯಾಳಂ, ತೆಲುಗು, ಒರಿಯಾ, ಮರಾಠಿ, ತಮಿಳ, ಹಿಂದಿ ಹಾಗೂ ಇಂಗ್ಲೀಷ್ ಭಾಷೆಗೆ ಭಾಷಾಂತರವಾಗಿದೆ.

ಸಾರಾ ಅವರಿಗೆ ದೊರೆತ ಪ್ರಶಸ್ತಿಗಳು

೧. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೯೧.

ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ

೨. 'ಸಹನಾ' ಕಾದಂಬರಿಗೆ ವರ್ಧಮಾನ ಉದಯೋನ್ಮುಖಿ ಸಾಹಿತ್ಯ ಪ್ರಶಸ್ತಿ

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೯೫

ಸರೋಜಾದೇವಿ ಶ್ರೀಹರ್ಷ ಪ್ರಶಸ್ತಿ, ೧೯೯೯

ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ೨೦೦೨

೩. ಸುಳಿ ಕಾದಂಬರಿಗೆ ಕರ್ನಾಟಕ ಲೇಖಕಿಯರ ಸಂಘದ ಅನುಪಮಾ ನಿರಂಜನ ಪ್ರಶಸ್ತಿ

೪. ತಳ ಒಡೆದ ದೋಣಿಯಲ್ಲಿ ಕಾದಂಬರಿಗೆ ಶಿವಾನಂದ ಪಾಟೀಲ ಪ್ರಶಸ್ತಿ, ೨೦೦೫

೫. ರತ್ನಮ್ಮ ಹೆಗಡೆ ಮಹಿಳಾ ಸಾಹಿತ್ಯ ಪ್ರಶಸ್ತಿ

೬. ಗೊರೂರು ಪ್ರತಿಷ್ಠಾನ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಶಸ್ತಿ, ೨೦೦೩

ಸಂದೇಹ ಸಾಹಿತ್ಯ ಪ್ರಶಸ್ತಿ, ೨೦೦೫

ಆಳ್ವಾಸ್ ನುಡಿಸಿರಿ ಪ್ರಶಸ್ತಿ, ೨೦೦೫

ನಂಜನಗೂಡು ತಿರುಮಲಾಂಬ ಸ್ಮರಣೆ ಶಾಶ್ವತ ಪ್ರಶಸ್ತಿ, ೨೦೦೭

ಕನ್ನಡ ವಿಶ್ವವಿದ್ಯಾಲಯ, ಹಂಪಿ ನಾಡೋಜ ಪ್ರಶಸ್ತಿ, ೨೦೦೫

ಸುಳಿಯಲ್ಲಿ ಸಿಕ್ಕವರು ಕಾದಂಬರಿಗೆ ಸಾವಿತ್ರಮ್ಮ ದೇ.ಜ.ಗೌ. ದತ್ತಿನಿಧಿ ಬಹುಮಾನ

ತಳ ಒಡೆದ ದೋಣಿಯಲ್ಲಿ ಕಾದಂಬರಿಗೆ ಕೇಂದ್ರ ಸರ್ಕಾರದ ಭಾಷಾ ಭಾರತಿ ಸನ್ಮಾನ ದೊರೆತಿದೆ.

ಸಾರಾ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ೧೯೮೭-೧೯೯೦

ಅಕಾಡೆಮಿ ಸಲಹಾಸಮಿತಿಯ ಸದಸ್ಯರಾಗಿ, ೧೯೯೨-೯೫

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ೧೯೯೧-೯೪

ಕರಾವಳಿ ಲೇಖಕಿಯರ ವಾಚಕಿಯರ ಸಂಘದ ಅಧ್ಯಕ್ಷರಾಗಿ, ೧೯೯೦-೧೯೯೪

ಜಿಲ್ಲಾ ಗ್ರಂಥಾಲಯ ಸಮಿತಿಯ ಸದಸ್ಯರಾಗಿ, ಮಂಗಳೂರು ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ೨೦೦೬ರಲ್ಲಿ ಸೇವೆ ಸಲ್ಲಿಸಿದ್ದಾರೆ.

ಪರಾಮರ್ಶನ ಗ್ರಂಥಗಳು

೧. ಅಶೋಕ ಬಿ.ಬಿ., ಸಾಹಿತ್ಯ ಸಂದರ್ಭ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೧.

೨. ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ ಕಾದಂಬರಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೦೬.

೩. ಆರ್ಯಾಂಬ ಪಟ್ಟಾಬಿ, ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಾಹನ, ಶ್ರೀ ಶಿವರಾಮ ಪೇಟೆ, ಮೈಸೂರು, ೨೦೦೪.

೪. ಕೋದಂಡರಾಮ ಎನ್.ಕೆ., ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೬.

೫. ಗಾಯತ್ರಿ ಎನ್. ಮಹಿಳೆ ಬಿಡುಗಡೆಯ ಹಾದಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬.

೬. ಗಿರಿಜಾ ಶಾಸ್ತ್ರಿ, ಆಧುನಿಕ ಕನ್ನಡ ಸಣ್ಣ ಕಥೆಗಳು: ಒಂದು ಸ್ತ್ರೀವಾದಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೭. ಸಂಪಾದಕರು: ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕನ್ನಡ ಸಂಘ, ಬೆಂಗಳೂರು, ೧೯೯೪.

೮. ಡಾ.ಬಸವರಾಜ ಸಬರದ, ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

೯. ಡಾ.ಬಸವರಾಜ ಸಬರದ, ಸಾಹಿತ್ಯ ಸಂಗತಿ, ಪಲ್ಲವಿ ಪ್ರಕಾಶನ, ಗುಲಬರ್ಗಾ, ೧೯೯೪.

೧೦. ಡಾ.ಬಸವರಾಜ ಸಬರದ, ಹೊಸ ದಿಕ್ಕು, ಪಲ್ಲವಿ ಪ್ರಕಾಶನ, ಬೀದರ, ೧೯೯೦.

೧೧. ಬಾನು ಮುಸ್ತಾಕ, ಹೆಜ್ಜೆ ಮೂಡದ ಹಾದಿ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ.

೧೨. ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ, ಸಂಪಾದಕರು: ಬಂಡಾಯ, ಮುಸ್ಲಿಂ ಸಂವೇದನೆ, ಸಿವಿಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೧೩. ಡಾ.ಮಲ್ಲಿಕಾ ಘಂಟಿ, ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ, ಯುವಲೋಕ ಪ್ರಕಾಶನ, ಧಾರವಾಡ, ೧೯೯೪.

೧೪. ಡಾ.ಮಲ್ಲಿಕಾ ಘಂಟಿ, ಕನ್ನಡದ ಕಥೆಗಾರ್ತಿಯರು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೧.

೧೫. ಮೀರಾ.ಎಲ್.ಜಿ., ಸ್ತ್ರೀಸಂವೇದನೆಯಲ್ಲಿ ಕನ್ನಡ ಕಥನ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲೀಷರ್ಸ್ ಬೆಂಗಳೂರು, ೨೦೦೪.

೧೬. ಡಾ.ರಹಮತ ತರೀಕೆರೆ, ಸಾಹಿತ್ಯ ವಿಮರ್ಶೆ, ೧೯೯೨, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೭. ಸಂಪಾದಕರು: ರಹಮತ ತರೀಕೆರೆ, ಕನ್ನಡ ಅಧ್ಯಯನ, ಬಿಸಿಲು ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೧೮. ಶ್ರೀಮತಿ ರೋಹಿಣಿ ಬಿ.ಎಂ., ಸ್ತ್ರೀ ಭಿನ್ನ ಮುಖಗಳು, ಕರಾವಳಿ ಲೇಖಕಿಯರ-ವಾಚಕೀಯರ ಸಂಘ, ಉಡುಪಿ, ೨೦೦೫.

೧೯. ವಿಜಯಾ ದಬ್ಬೆ, ನಾರಿ, ದಾರಿ, ದಿಗಂತ, ರಚನಾ ಪ್ರಕಾಶನ, ಮೈಸೂರು, ೧೯೯೭.

೨೦. ವಿಜಯಾ ದಬ್ಬೆ, ಮಹಿಳೆ ಸಾಹಿತ್ಯ ಮತ್ತು ಸಮಾಜ, ರಚನಾ ಪ್ರಕಾಶನ, ಮೈಸೂರು, ೧೯೭೯.

೨೧. ವಿವಿಧ ಲೇಖಕರು, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬.

೨೨. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬.

೨೩. ಬಿ.ಎಸ್.ವೆಂಕಟಲಕ್ಷ್ಮಿ, ಕನ್ನಡ ಲೇಖಕಿಯರ ನೆಲೆ-ಬೆಲೆ, ಎನ್.ಟಿ.ಶ್ಯಾಂ ಪ್ರಕಾಶನ, ೭೯, ಸಾಯಿರಾಂ, ೧೩ನೇ 'ಬಿ' ಮೆಯಿನ್ ಎಚ್.ಎ.ಎಲ್. ೨ನೇ ಹಂತ, ಇಂದಿರಾನಗರ, ಬೆಂಗಳೂರು.

೨೪. ಡಾ.ಶಾಂತಾ ಇಮ್ರಾಪೂರ, ಧರ್ಮ ಮಹಿಳೆ ಮತ್ತು ಸಮಾಜ, ಚೇತನಾ ಪ್ರಕಾಶನ, ಧಾರವಾಡ, ೨೦೦೧.

೨೫. ಡಾ.ಶ್ರೀಮತಿ ಹೆಚ್.ಎಸ್, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೬. ಡಾ.ಸಬಿಹಾ ಭೂಮಿಗೌಡ, ಬಗೆ, ಲೋಹಿಯಾ ಪ್ರಕಾಶನ 'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಬಳ್ಳಾರಿ, ೨೦೦೧.

೨೭. ಡಾ.ಸಬಿಹಾ ಭೂಮಿಗೌಡ, ನಿಲುಮೆ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು, ೨೦೦೫.

೨೮. ಸಾರಾ ಅಬೂಬಕ್ಕರ, ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೯. ಸಾರಾ ಅಬೂಬಕ್ಕರ, ಧರ್ಮ ಮತ್ತು ಮಹಿಳೆ, ಸಂಕ್ರಮಣ ಪತ್ರಿಕೆ, ೧೯೯೮.

೩೦. ಸಾರಾ ಅಬೂಬಕ್ಕರ, ಮುಸ್ಲಿಂ ಸಂವೇದನೆ ಮತ್ತು ನಾನು, ಸಂಕ್ರಮಣ ಪತ್ರಿಕೆ, ೧೯೯೧.

೩೧. ಡಾ.ಸುಮಿತ್ರಾ ಬಾಯಿ.ಬಿ.ಎನ್., ವಿಚಯ, ಇಳಾ ಪ್ರಕಾಶನ, ಬೆಂಗಳೂರು, ೧೯೯೫.

೩೨. ಡಾ.ಹನುಮಂತಯ್ಯ.ಎಲ್., ಕಥಾಕಥನ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೧೯೯೯.

೩೩. ಡಾ.ಹಾಲತಿ ಸೋಮಶೇಖರ, ಮಹಿಳಾ ಚಳವಳಿ, ವಿಸ್ಮಯ ಪ್ರಕಾಶನ, ೨೦೦೭.